ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 9 ಶುಕ್ರವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 23 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕರ್ನಾಟಕ ರಾಜ್ಯ ಪರಯ್ಯ ಸಮುದಾಯ

ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ಪರಿಶಿಷ್ಟ ಜಾತಿಗೆ ಸೇರಿದ ಪರಯ್ಯ ಸಮುದಾಯಕ್ಕೆ ಒಂದು ಮನವಿ.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ವರ್ಗೀಕರಣ ಮಾಡಲು ಪರಿಶಿಷ್ಟ ಜಾತಿಗೆ ಸೇರಿದ ಜಾತಿಗಳ ಸಮೀಕ್ಷೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಮೂರು ಹಂತಗಳಲ್ಲಿ ನಡೆಸಲಾಗುತ್ತಿದೆ. ಕರ್ನಾಟಕ ರಾಜ್ಯದ ತಮಿಳು ಭಾಷಿಗರಾದ 'ಪರಯ್ಯ' ಜಾತಿ, ಕರ್ನಾಟಕದಲ್ಲಿ ಹೊಲೆಯ/ಛಲವಾದಿ/ಬಲಗೈ ಎಂದು ಕರೆಯಿಸಿಕೊಳ್ಳುವ ಸಮಾನಾಂತರ ಜಾತಿಯೇ ಆಗಿರುತ್ತದೆ. ಇವರೆಲ್ಲರು ಒಂದೇ ಜಾತಿಗೆ ಸೇರಿದವರಾಗಿರುತ್ತಾರೆ. ಆದರೆ ಇವರಿಗೆ ಆದಿ-ದ್ರಾವಿಡ ಎಂಬುದಾಗಿ ಜಾತಿ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ. ಆದ್ದರಿಂದ ಸಮೀಕ್ಷೆಯ ಸಂದರ್ಭದಲ್ಲಿ, ಪರಯ್ಯ ಸಮುದಾಯದವರು ತಮ್ಮ ಮೂಲ ಜಾತಿ/ಉಪ ಜಾತಿಯನ್ನು ಪರಯ್ಯ /ಛಲವಾದಿ / ಬಲಗೈ /ಹೊಲಯ ಇವುಗಳಲ್ಲಿ ಯಾವುದಾದರು ಒಂದನ್ನು ಬರೆಯಿಸಲು ವಿನಂತಿಸುತ್ತೇನೆ.

ಇಂತಿ ತಮ್ಮವ,

ಸಂಪತ್ ರಾಜು, ಮಾಜಿ ಮೇಯರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕರ್ನಾಟಕ ರಾಜ್ಯ ಮಾಲಾ ಮಹಾಸಭಾ

ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ಪರಿಶಿಷ್ಟ ಜಾತಿಗೆ ಸೇರಿದ ಮಾಲಾ ಸಮುದಾಯಕ್ಕೆ ಒಂದು ಮನವಿ.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ವರ್ಗೀಕರಣ ಮಾಡಲು ಪರಿಶಿಷ್ಟ ಜಾತಿಗೆ ಸೇರಿದ ಜಾತಿಗಳ ಸಮೀಕ್ಷೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಮೂರು ಹಂತಗಳಲ್ಲಿ ನಡೆಸಲಾಗುತ್ತಿದೆ. ಕರ್ನಾಟಕ ರಾಜ್ಯದ ತೆಲುಗು ಭಾಷಿಗರಾದ 'ಮಾಲಾ' ಜಾತಿ, ಕರ್ನಾಟಕದಲ್ಲಿ ಹೊಲೆಯ/ಛಲವಾದಿ/ಬಲಗೈ ಎಂದು ಕರೆಯಿಸಿಕೊಳ್ಳುವ ಸಮಾನಾಂತರ ಜಾತಿಯೇ ಆಗಿರುತ್ತದೆ. ಇವರೆಲ್ಲರು ಒಂದೇ ಜಾತಿಗೆ ಸೇರಿದವರಾಗಿರುತ್ತಾರೆ. ಆದರೆ, ಇವರಿಗೆ ಆದಿ-ಆಂಧ್ರ ಎಂಬುದಾಗಿ ಜಾತಿ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ. ಆದ್ದರಿಂದ ಸಮೀಕ್ಷೆಯ ಸಂದರ್ಭದಲ್ಲಿ, ಮಾಲಾ ಸಮುದಾಯದವರು ತಮ್ಮ ಮೂಲ ಜಾತಿ/ಉಪ ಜಾತಿಯನ್ನು ಮಾಲಾ /ಛಲವಾದಿ /ಬಲಗೈ/ಹೊಲಯ ಇವುಗಳಲ್ಲಿ ಯಾವುದಾದರು ಒಂದನ್ನು ಬರೆಯಿಸಲು ವಿನಂತಿಸುತ್ತೇನೆ.

ಇಂತಿ ತಮ್ಮವ,

ಶ್ರೀ ಎಲ್ ನಾಗೇಶ್ವರ ರಾವ್, ಕರ್ನಾಟಕ ರಾಜ್ಯ ಮಾಲಾ ಮಹಾಸಭಾ, ಬೆಂಗಳೂರು

ಸಿಡಿಸಿ ಕಾರ್ಮಿಕರನ್ನು ಕರ್ತವ್ಯದಲ್ಲಿ ಮುಂದುವರೆಸುವಂತೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಮೇ8(ಜಿಎ)–ಸಿಡಿಸಿ ಕಾರ್ಮಿಕರನ್ನು ಕರ್ತವ್ಯದಲ್ಲಿ ಮುಂದುವರಿಸಿ, ಶಾಸನಬದ್ಧ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಕಾಲೇಜುಗಳ ಕಾರ್ಮಿಕರ ಸಂಘದಿಂದ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸಿಡಿಸಿ ಕಾರ್ಮಿಕರಿಗೆ ಶಾಸನಬದ್ಧ ಸೌಲಭ್ಯ ನೀಡಬೇಕೆಂದು ಗುತ್ತಿಗೆದಾರರಿಗೆ ಸರ್ಕಾರ ಆದೇಶಿಸಿದೆ. ಆದರೆ, ಗುತ್ತಿಗೆದಾರರು ಸಿಡಿಸಿ ಕಾರ್ಮಿಕರಿಗೆ ಕೆಲಸ ನೀಡದೆ ಹೊರಗಿನ ವ್ಯಕ್ತಿಗಳಿಂದ ಹಣ ಪಡೆದು ಹಾಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಕೆಲಸದಿಂದ ವಂಚಿಸುತ್ತಿದ್ದಾರೆ. ಈ ಕುರಿತು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಸಿಡಿಸಿ ಕಾರ್ಮಿಕರಿಗೆ ಆದ್ಯತೆ ಮೇಲೆ ಕೆಲಸ ನೀಡುವಂತೆ ತಿಳಿಸಿದ್ದರೂ ಯಾವುದೇ ಪ್ರಾಂಶುಪಾಲರು, ಗುತ್ತಿಗೆದಾರರು ಕ್ರಮ ವಹಿಸುತ್ತಿಲ್ಲ. ಬದಲಿಗೆ ಹೊಸಬರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಮುಂದುವರೆದಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.



ಸಿಡಿಸಿ ಕಾರ್ಮಿಕರನ್ನು ಕರ್ತವ್ಯದಲ್ಲಿ ಮುಂದುವರಿಸಿ, ಶಾಸನಬದ್ಧ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಕಾಲೇಜುಗಳ ಕಾರ್ಮಿಕರ ಸಂಘದಿಂದ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಕೂಡಲೇ ಕೇಂದ್ರ ಕಚೇರಿಯಿಂದ ಲಿಖಿತ ಭರವಸೆ ನೀಡಬೇಕು. ಇಲ್ಲವೇ ಗುತ್ತಿಗೆದಾರರು, ಪ್ರಾಂಶುಪಾಲರನ್ನು ತಮ್ಮ ಕಚೇರಿಗೆ ಕರೆದು ಸಭೆ ಮಾಡಿ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು.

ಬೇಡಿಕೆಗಳು: ಎಸ್‌ಎಸ್‌ಎಲ್‌ಸಿ ಕಡ್ಡಾಯಗೊಳಿಸದೆ ಸಿಡಿಸಿ ಕಾರ್ಮಿಕರಾಗಿ ಸೇವೆ ಸಲ್ಲಿಸಿರುವ ಹಿರಿಯ ಕಾರ್ಮಿಕರಿಗೆ ಅವಕಾಶ ಕಲ್ಪಿಸಬೇಕು. ಸೇವಾ ಹಿರಿತನದ ಮೇಲೆ ಸಿಡಿಸಿ ಕಾರ್ಮಿಕರ ಪಟ್ಟಿಯನ್ನು ಪ್ರಾಂಶುಪಾಲರು ಗುತ್ತಿಗೆದಾರರಿಗೆ ತಕ್ಷಣವೇ ನೀಡಬೇಕು. ಗುತ್ತಿಗೆದಾರರು ಕಾಲೇಜುಗಳಲ್ಲಿ ಕೆಲಸ ಮಾಡದೇ ಇರುವ ವ್ಯಕ್ತಿಗಳಿಗೆ ನೇಮಕಾತಿ ಪತ್ರಗಳನ್ನು ನೀಡಿ ಕಾಲೇಜಿಗೆ ವರದಿ ಮಾಡಿಕೊಳ್ಳಲು ಕಳುಹಿಸಿದ್ದರೆ, ಅಂತಹ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳದೆ ತಿರಸ್ಕರಿಸಬೇಕು. ಯಾವುದಾದರೂ ಕಾಲೇಜು ಅಥವಾ ಇಲಾಖೆಯ ಕಚೇರಿಯಲ್ಲಿ ಮಂಜೂರಾದ ಹುದ್ದೆಗಳು ಖಾಲಿ ಉಳಿದಿದ್ದರೆ ಅಂತಹ ಸ್ಥಳಗಳಿಗೆ ಹತ್ತಿರದ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಸಿಡಿಸಿ ಈ ಕಾರ್ಮಿಕರನ್ನೇ ನೇಮಿಸಿಕೊಳ್ಳಬೇಕು. ಹೊರಗುತ್ತಿಗೆಯಲ್ಲಿ ನೇಮಕಗೊಳ್ಳುವ ಕಾರ್ಮಿಕರಿಗೆ ಸೇವಾ ಭದ್ರತೆ ಒದಗಿಸಬೇಕು. ಕಾರ್ಮಿಕರಿಗೆ ಮೂರು ವರ್ಷಗಳಿಂದ ಭವಿಷ್ಯ ನಿಧಿ ವಂತಿಕೆ ಸರಿಯಾಗಿ ಪಾವತಿ ಮಾಡದೇ ಇರುವುದರಿಂದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಾಲೇಜು ಹಂತದಲ್ಲಿ ಕನಿಷ್ಠ ವೇತನಕ್ಕಿಂತ ಕಡಿಮೆ ವೇತನ ಪಾವತಿ ಮಾಡುತ್ತಿರುವುದರಿಂದ ಇದುವರೆಗೂ ಬಾಕಿ ಇರುವ ವ್ಯತ್ಯಾಸದ ವೇತನ ಪಾವತಿ ಮಾಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಚಂದ್ರಶೇಖರ್ ಮೇಟಿ, ಮುದ್ದುಕೃಷ್ಣ, ರವಿ ಇಂದ್ರಮ, ಮಾದಮ್ಮ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ

ಲೋಕಾಯುಕ್ತ ತನಿಖೆ ವಿಳಂಬದ ಬಗ್ಗೆ ಕೋರ್ಟ್ ಅಸಮಾಧಾನ

ಮೈಸೂರು, ಮೇ 8(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಬಗ್ಗೆ ಅಂತಿಮ ವರದಿ ಸಲ್ಲಿಸುವಲ್ಲಿ ಮೈಸೂರು ಲೋಕಾಯುಕ್ತ ಅಧಿಕಾರಿಗಳ ವಿಳಂಬ ಧೋರಣೆಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.





ಬುಧವಾರ ನಡೆದ ವಿಚಾರಣೆ ವೇಳೆ, ಅಂತಿಮ ವರದಿ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ನೀಡಬೇಕೆಂದು ಲೋಕಾಯುಕ್ತ ಪರ ವಕೀಲ ವೆಂಕಟೇಶ್ ಅರಬಟ್ಟಿ ಅವರು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರಲ್ಲಿ ಮನವಿ ಮಾಡಿದರು.

ಈ ವೇಳೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ದೂರದಾರ ಸ್ನೇಹಮಯಿ ಕೃಷ್ಣ, ನ್ಯಾಯಾಲಯದ ವಿಚಾರಣೆ ವಿಳಂಬ ಮಾಡುವ ದುರುದ್ದೇಶದಿಂದ ಲೋಕಾಯುಕ್ತರು ಅಂತಿಮ ವರದಿ ಸಲ್ಲಿಸಲು ಕಾಲಾವಕಾಶ ಕೇಳುತ್ತಿದ್ದಾರೆ ಎಂದು ದೂರಿದರು.

ಈ ಪ್ರಕರಣದ ಮೊದಲ ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎರಡನೇ ಆರೋಪಿ ಪಾರ್ವತಿ, ಮೂರನೇ ಆರೋಪಿ ಮಲ್ಲಿಕಾರ್ಜುನ ಸ್ವಾಮಿ ಹಾಗೂ ನಾಲ್ಕನೇ ಆರೋಪಿ ದೇವರಾಜು ವಿರುದ್ಧದ ಆರೋಪ ಸಾಬೀತಾಗಿಲ್ಲ ಎಂದು ಈಗಾಗಲೇ ಲೋಕಾಯುಕ್ತರು ಮಧ್ಯಂತರ ವರದಿ ನೀಡಿದ್ದಾರೆ. ಇವರನ್ನು ಮತ್ತೆ ವಿಚಾರಣೆಗೊಳಪಡಿಸುವ ಬಗ್ಗೆ ಲೋಕಾಯುಕ್ತರು ನ್ಯಾಯಾಲಯದಲ್ಲಿ ಅನುಮತಿ ಕೋರಿಲ್ಲ. ಹೀಗಿರುವಾಗ ಉಳಿದವರ ಬಗ್ಗೆ ತ್ವರಿತವಾಗಿ ತನಿಖೆ ಮಾಡಿ ವರದಿ ನೀಡದೆ ನ್ಯಾಯಾಲಯದ ವಿಚಾರಣೆ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅಂತಿಮ ವರದಿ ಸಲ್ಲಿಸಲು ಕಳೆದ ವಿಚಾರಣೆ ವೇಳೆ ಕೋರ್ಟ್ ನಿಮಗೆ ತಾಕೀತು ಮಾಡಿತ್ತು. ಆದರೂ ವರದಿ ಸಲ್ಲಿಕೆಗೆ ಮತ್ತೆ ಕಾಲಾವಕಾಶ ಕೇಳಿದರೆ ಹೇಗೆ ಎಂದು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಪ್ರಶ್ನಿಸಿ, ಲೋಕಾಯುಕ್ತ ಅಧಿಕಾರಿಗಳ ನಡೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಅಂತಿಮ ವರದಿ ಸಲ್ಲಿಸಲು ವಿಳಂಬ ಆಗುತ್ತಿರುವ ಬಗ್ಗೆ ಸ್ಪಷ್ಟನೆ ನೀಡಿದ ವೆಂಕಟೇಶ್ ಅರಬಟ್ಟಿ, ಈ ಪ್ರಕರಣದ ಬಗ್ಗೆ ಮೂವರು ಸರ್ಕಾರಿ ಅಧಿಕಾರಿಗಳನ್ನು ವಿಚಾರಣೆ ಮಾಡಬೇಕಿದೆ. ಆದರೆ ಭ್ರಷ್ಟಾಚಾರ ಪ್ರಕರಣದಲ್ಲಿ ತನಿಖೆ ಮಾಡಲು ಸೆಕ್ಷನ್ 17/ಎ ಪ್ರಕಾರ ರಾಜ್ಯ ಸರ್ಕಾರದ ಅನುಮತಿ ಅವಶ್ಯವಿದೆ. ಸರ್ಕಾರದ ಅನುಮತಿಗಾಗಿ ನಾವು ಈಗಾಗಲೇ ಮನವಿ ಸಲ್ಲಿಸಿದ್ದೇವೆ. ಆದರೆ ಸರ್ಕಾರದಿಂದ ಈ ತನಕ ಅನುಮತಿ ಬಂದಿಲ್ಲ. ಈ ಸಂಬಂಧ ವಿವರವಿರುವ ಮುಚ್ಚಿದ ಲಕೋಟೆಯನ್ನು ನ್ಯಾಯಾಧೀಶರಿಗೆ ಸಲ್ಲಿಸಿದರು.

ತನಿಖೆಯಲ್ಲಿ ಲೋಕಾಯುಕ್ತ ಅಧಿಕಾರಿಗಳ ದುರುದ್ದೇಶಪೂರಿತ ವಿಳಂಬದಿಂದ ನನಗೆ ನ್ಯಾಯ ಸಿಗುವ ಬಗ್ಗೆ ಸಂಶಯವಿದೆ ಎಂದು ಸ್ನೇಹಮಯಿ ಕೃಷ್ಣ ಆಪಾದಿಸಿದರು. ಲೋಕಾಯುಕ್ತ ಅಧಿಕಾರಿಗಳು ಈಗಾಗಲೇ ಸಲ್ಲಿಸಿರುವ ವರದಿಯನ್ನು ತಿರಸ್ಕರಿಸಿ, ಈ ಮೂಲಕ ನಾಲ್ವರು ಆರೋಪಿಗಳ ಆರೋಪಕ್ಕೆ ಸಂಬಂಧಿಸಿದಂತೆ ವಾದ ಮಂಡಿಸಲು ನನಗೆ ಅವಕಾಶ ನೀಡಬೇಕೆಂದು ಸ್ನೇಹಮಯಿ ಕೃಷ್ಣ ನ್ಯಾಯಾಲಯಕ್ಕೆ ಮನವಿ ಮಾಡಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್, ಮುಂದಿನ ನಿಮ್ಮ ತನಿಖೆಯ ಕುರಿತಂತೆ ವಿವರವನ್ನು ಅಫಿಡವಿಟ್ ಸಲ್ಲಿಸಬೇಕು ಎಂದು ಸೂಚಿಸಿ, ಮುಂದಿನ ವಿಚಾರಣೆಯನ್ನು ಮೇ 29ಕ್ಕೆ ಮುಂದೂಡಿದ್ದಾರೆ.

ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಟಿಕೆಟ್ ಕಾಳಸಂತೆಯಲ್ಲಿ ಮಾರಾಟ

- ಕೆಎಸ್‌ಸಿಎ, ಡಿಎನ್‌ಎ ಕಂಪನಿಯಿಂದ ಭಾರಿ ಅವ್ಯವಹಾರ
- ತನಿಖೆ ನಡೆಸುವಂತೆ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಆಗ್ರಹ



ದಿನೇಶ್ ಗೂಳಿಗೌಡ

ಮೈಸೂರು, ಮೇ 8(ಬಿಎಲ್‌ಯು)–ಕರ್ನಾಟಕದಲ್ಲಿ ನಡೆಯುತ್ತಿರುವ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಟಿಕೆಟ್‌ಗಳು ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟವಾಗುತ್ತಿವೆ. ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಹಾಗೂ ಡಿಎನ್‌ಎ ಎಂಟರ್‌ಟೈನ್ಮೆಂಟ್ ಕಂಪನಿ ಭಾರೀ ಅವ್ಯವಹಾರ ನಡೆಸಿದ್ದು, ಈ ಬಗ್ಗೆ ತನಿಖೆ ನಡೆಸಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಹಾಗೂ ಡಿಎನ್‌ಎ ಎಂಟರ್‌ಟೈನ್ಮೆಂಟ್ ಕಂಪನಿ ಕರ್ನಾಟಕದಲ್ಲಿ ಏಕದಿನ ಹಾಗೂ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ಒಪ್ಪಂದ ಮಾಡಿಕೊಂಡಿವೆ. ಆದರೆ, ಅನುಮತಿ ಪಡೆಯದೆ, ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಏಕಪಕ್ಷೀಯ ತೀರ್ಮಾನ ಕೈಗೊಂಡಿದೆ ಎಂದು ದಿನೇಶ್ ಗೂಳಿಗೌಡ ಆರೋಪಿಸಿದ್ದಾರೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಐಪಿಎಲ್ ಪಂದ್ಯಾವಳಿಯ ಟಿಕೆಟ್‌ಗಳು 1,200 ರೂಪಾಯಿಯಿಂದ 10,000 ರೂಪಾಯಿಗೆ, 1,500 ರೂಪಾಯಿಯ ಟಿಕೆಟ್‌ಗಳು 20,000 ರೂಪಾಯಿಗೆ ಹಾಗೂ ವಿಐಪಿ ಟಿಕೆಟ್‌ಗಳು 2 ಲಕ್ಷ ರೂಪಾಯಿಗೆ ಬ್ಲಾಕ್‌ನಲ್ಲಿ ಮಾರಾಟವಾಗಿದೆ ಎಂದು ಆಪಾದಿಸಿದ್ದಾರೆ. ಪಂದ್ಯಾವಳಿಗಳಿಗೆ ಆಗಮಿಸುವ ಅತಿಥಿಗಳಿಗೆ ಪೂರೈಸುವ ಆಹಾರ ಮತ್ತು ತಂಪು ಪಾನೀಯಗಳು ಕಳಪೆಯಾಗಿದ್ದು, ಇದನ್ನು ಸೇವನೆ ಮಾಡಿದವರ ಆರೋಗ್ಯದ ಮೇಲೆ ಪರಿಣಾಮ ಬೀರಿದೆ. ಈ ಮೂಲಕ ಪ್ರಾಯೋಜಕ ಸಂಸ್ಥೆ ಸರ್ಕಾರದ ನಿಯಮ ಪಾಲಿಸದೆ ತನ್ನಿಷ್ಟದಂತೆ ನಡೆದುಕೊಳ್ಳುತ್ತಿದೆ ಎಂದು ದೂರಿದ್ದಾರೆ.


ವೈದ್ಯಕೀಯ ಉಚಿತ ತಪಾಸಣಾ ಶಿಬಿರ

ಮೈಸೂರು, ಮೇ 8– ಮೈಸೂರಿನ ಆಲನಹಳ್ಳಿ ಸಮೀಪ, ಕೆಬಿಎಲ್ ಲೇಔಟ್‌ನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 10 ರವರೆಗೆ ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. 60 ಹಾಸಿಗೆಯ ಸುಸಜ್ಜಿತವಾದ ಈ ಆಸ್ಪತ್ರೆಯಲ್ಲಿ ಪಂಚಕರ್ಮ, ಕಾಯಚಿಕಿತ್ಸಾ, ಶಸ್ತ್ರಚಿಕಿತ್ಸೆ, ಪ್ರಸೂತಿ ಮತ್ತು ಸ್ತ್ರೀರೋಗ, ನೇತ್ರ ಚಿಕಿತ್ಸಾ, ಕೌಮರ ಭೃತ್ಯ ಹಾಗೂ ಸುಸಜ್ಜಿತ ಪೆಥಾಲಜಿ ಲ್ಯಾಬ್ ಮತ್ತು ಫಿಸಿಯೋಥೆರಪಿ ವಿಭಾಗಗಳನ್ನು ಹೊಂದಿದೆ. ಅತ್ಯಾಧುನಿಕ ಉಪಕರಣಗಳನ್ನು ಹೊಂದಿರುವ ಆಸ್ಪತ್ರೆಯನ್ನು ಮೈಸೂರಿಗರಿಗೆ ಪರಿಚಯಿಸುವುದರ ಜೊತೆಗೆ ಬೃಹತ್ ಉಚಿತ ಶಿಬಿರ ಏರ್ಪಡಿಸಲಾಗಿದೆ.

ಮೈಸೂರಿನ ಒಡನಾಡಿಯಲ್ಲಿ ನಾಳೆ ಎಂಎಲ್‌ಸಿ ವಿಶ್ವನಾಥ್ ಹುಟ್ಟುಹಬ್ಬ

ಮೈಸೂರು, ಮೇ8(ಜಿಎ)–ಮೈಸೂರಿನ ಜೆಪಿ ನಗರದಲ್ಲಿರುವ ಒಡನಾಡಿ ಸಂಸ್ಥೆ ಆವರಣದಲ್ಲಿ ಮೇ10ರಂದು 10ಗಂಟೆಗೆ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರ 78ನೇ ಹುಟ್ಟುಹಬ್ಬ ಆಚರಿಸಲಾಗುವುದು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕನ್ನಡ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಈ ವಿಷಯ ತಿಳಿಸಿ, ವಿಶ್ವನಾಥ್ ಅವರು ಸಂಸದ, ಸಚಿವ, ಶಾಸಕ ಹಾಗೂ ವಿಧಾನಪರಿಷತ್ ಸದಸ್ಯರಾಗಿ ನಾಡಿಗೆ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ ಸ್ಫೂರ್ತಿಯಿಂದ ನಾಡಿಗೆ ಬಿಸಿಯೂಟದ ಯೋಜನೆ ಸೇರಿದಂತೆ ಅನೇಕ ಯೋಜನೆಗಳನ್ನು ನೀಡುವ ಮೂಲಕ ಹೆಸರುವಾಸಿಯಾಗಿದ್ದಾರೆ ಎಂದರು.



ರಾಜಕಾರಣಿಯಾಗಿ ಮಾತ್ರವಲ್ಲದೇ ಸಮಾಜದ ಅಂಕು–ಡೊಂಕುಗಳನ್ನು ತಮ್ಮ ಪುಸ್ತಕಗಳ ಮೂಲಕ ತಿದ್ದುವ ಕೆಲಸ ಮಾಡಿದ್ದು, 10ಕ್ಕೂ ಹೆಚ್ಚು ಪುಸ್ತಕಗಳನ್ನು ನಾಡಿನ ಸಾಹಿತ್ಯಕ್ಕೆ ನೀಡಿದ್ದಾರೆ. ಅವರ ಆಲೋಚನೆಗಳನ್ನು ಜನತೆಗೆ ತಿಳಿಸುವ ಉದ್ದೇಶದಿಂದ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ ಎಂದರು.

ಅಂದು ಹೆಚ್.ವಿಶ್ವನಾಥ್ ಒಡನಾಡಿ ಸಂಸ್ಥೆಯ ಮಡಿಲು ಮಕ್ಕಳೊಡನೆ ಕಾಲ ಕಳೆದು ಸಂವಾದದಲ್ಲಿ ಪಾಲ್ಗೊಳ್ಳುವರು. ಈ ವೇಳೆ ಅವರು ತಮ್ಮ ಬದುಕು, ಕಂಡ ನೋವು ನಲಿವು, ಬವಣೆ ಮೊದಲಾದವನ್ನು ಮಕ್ಕಳಿಗೆ ವಿವರಿಸಿದ ಸ್ಫೂರ್ತಿ ತುಂಬಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನೆಹರು ಯುವಜನ ಕೇಂದ್ರದ ನಿವೃತ್ತ ಅಧಿಕಾರಿ ಎಂ.ಎನ್.ನಟರಾಜ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಜಾಕೀರ್ ಹುಸೇನ್ ಉಪಸ್ಥಿತರಿದ್ದರು.

ಮೈಸೂರಲ್ಲಿ ನಾಳೆಯಿಂದ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆ

ಮೈಸೂರು,ಮೇ 8(ಆರ್‌ಕೆ)–ಮೈಸೂರು ನಗರದ ಎರಡು ಕೇಂದ್ರಗಳಲ್ಲಿ ಮೇ 10ರಿಂದ 24ರವರೆಗೆ 2024ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖೆ ಪರೀಕ್ಷೆಗಳು ನಡೆಯಲಿವೆ. ಜೆಎಲ್‌ಬಿ ರಸ್ತೆಯ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ನಜರ್‌ಬಾದ್‌ನ ಜಾಕಿ ಕ್ವಾರ್ಟರ್ಸ್‌ನ ಸರ್ಕಾರಿ ಆದರ್ಶ ವಿದ್ಯಾಲಯಗಳಲ್ಲಿ ನಡೆಯಲಿರುವ ಇಲಾಖೆ ಪರೀಕ್ಷೆಗಳ ಸುತ್ತ ಮೇ 10ರಿಂದ 24ರವರೆಗೆ ಬೆಳಿಗ್ಗೆ 6ರಿಂದ ಸಂಜೆ 6 ಗಂಟೆವರೆಗೆ 200 ಮೀಟರ್ ವ್ಯಾಪ್ತಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಸೆಕ್ಷನ್ 163 ರೀತ್ಯಾ ನಿಷೇಧಾಜ್ಞೆ ಹೊರಡಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಅಂಗಡಿ, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷೆಗಳು ನಡೆಯುವ ಅವಧಿಯಲ್ಲಿ ಮುಚ್ಚುವಂತೆ ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಆದೇಶದಲ್ಲಿ ಸೂಚಿಸಿದ್ದಾರೆ.

ಜಠರ, ಕರುಳಿನ ಕ್ಯಾನ್ಸರ್ ಮುನ್ನೆಚ್ಚರಿಕೆಗೆ ಸಲಹೆ

ಮೈಸೂರು, ಮೇ 8(ಎಂಟಿವೈ)–ವಿವಿಧ ಕಾರಣಗಳಿಂದ ಇತ್ತೀಚಿನ ದಿನಗಳಲ್ಲಿ ಜಠರ, ಕರುಳಿನ ಕ್ಯಾನ್ಸರ್ ಪ್ರಕರಣ ಹೆಚ್ಚಾಗುತ್ತಿದ್ದು, ಸಕಾಲಕ್ಕೆ ತಪಾಸಣೆಗೆ ಒಳಗಾಗಿ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳುವಂತೆ ಮೈಸೂರು ಮಣಿಪಾಲ್ ಆಸ್ಪತ್ರೆಯ ಸರ್ಜಿಕಲ್ ಗ್ಯಾಸ್ಟ್ರೋ ಎಂಟರಾಲಜಿ ಕನ್ಸಲ್ಟೆಂಟ್ ಡಾ.ವಾಸುದೇವ ಪೈ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಜನರಲ್ಲಿ ಜಠರ ಮತ್ತು ಕರುಳಿನ ಕ್ಯಾನ್ಸರ್ ರೋಗ ಬಾಧಿಸುತ್ತಿದೆ. ಇದರಿಂದ ಅನ್ನನಾಳ, ಹೊಟ್ಟೆ ಕೊಲೊನ್, ಗುದನಾಳ, ಯಕೃತ್ತು ಮತ್ತು ಮೇದೋಜೀರಕ ಗ್ರಂಥಿಯ ಮೇಲೆ ಪರಿಣಾಮ ಬೀರುವ ಮೂಲಕ ಕ್ಯಾನ್ಸರ್ ಕಾಡುತ್ತಿದೆ. ಆರಂಭಿಕ ರೋಗ ಲಕ್ಷಣಗಳನ್ನು ನಿರ್ಲಕ್ಷಿಸಿದರೆ ಸಮಸ್ಯೆ ಉಲ್ಬಣವಾಗುತ್ತದೆ. ವೈದ್ಯಕೀಯ ಸಲಹೆ ಪಡೆಯುವುದನ್ನು ವಿಳಂಬ ಮಾಡದೇ ಚಿಕಿತ್ಸೆ ಪಡೆದುಕೊಳ್ಳಬೇಕು. ಜಠರ ಕರುಳಿನ ಕಾಯಿಲೆ ಲಕ್ಷಣ ಎಷ್ಟೇ ಚಿಕ್ಕದಾಗಿ ಕಂಡು ಬಂದರೂ ಅವುಗಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು. ಎಂಡೋಸ್ಕೋಪಿ, ಬಯಾಪ್ಸಿಯೊಂದಿಗೆ ಕೊಲೊನೋಸ್ಕೋಪಿ, ಸಿಟಿ, ಎಂಆರ್‌ಐ, ಎಂಡೋಸ್ಕೋಪಿಕ್ ಅಲ್ಟ್ರಾಸೌಂಡ್ ಮತ್ತು ಟ್ಯೂಮರ್ ಮಾರ್ಕರ್ ಪರೀಕ್ಷೆಗಳಂತಹ ಪರೀಕ್ಷೆಯಿಂದ ಜಠರ, ಕರುಳು ಕ್ಯಾನ್ಸರ್ ಪತ್ತೆ ಮಾಡಿ ಚಿಕಿತ್ಸೆ ನೀಡಬಹುದಾಗಿದೆ ಎಂದು ತಿಳಿಸಿದರು.



ಮಣಿಪಾಲ್ ಆಸ್ಪತ್ರೆಯ ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ ಕನ್ಸಲ್ಟೆಂಟ್ ಡಾ.ವಾಸುದೇವ ಪೈ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಣಿಪಾಲ್ ಆಸ್ಪತ್ರೆಯ ಕಾರ್ಡಿಯಾಲಜಿಸ್ಟ್ ಮತ್ತು ಮೆಡಿಕಲ್ ಸೂಪರಿಂಟೆಂಡೆಂಟ್ ಉಪೇಂದ್ರ ಶೆಣೈ ಉಪಸ್ಥಿತರಿದ್ದರು.

ಆರೋಗ್ಯ ವಿಚಾರಣೆ



ರಸ್ತೆ ಅಪಘಾತಕ್ಕೀಡಾಗಿ ಚಿಕಿತ್ಸೆ ಪಡೆಯುತ್ತಿರುವ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅವರನ್ನು ವಿ.ಶ್ರೀನಿವಾಸಪ್ರಸಾದ್ ಅವರ ಪುತ್ರಿ ಪ್ರತಿಮಾ ಪ್ರಸಾದ್ ಹಾಗೂ ಕಾಂಗ್ರೆಸ್ ಮುಖಂಡ ಭರತ್ ರಾಮಸ್ವಾಮಿ ಆಸ್ಪತ್ರೆಯಲ್ಲಿ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಖಂಡಿಸಿ ಗಾಂಧಿ ಪುತ್ಥಳಿ ಬಳಿ ಪ್ರತಿಭಟನೆ



ವಾಜಮಂಗಲ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವುದನ್ನು ಖಂಡಿಸಿ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿಯಿಂದ ನ್ಯಾಯಾಲಯ ಮುಂಭಾಗದ ಗಾಂಧಿ ಪುತ್ಥಳಿ ಬಳಿ ಬಾಯಿಗೆ ಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಲಾಯಿತು.


ಮೈಸೂರು, ಮೇ8(ಜಿಎ)–ಮೈಸೂರು ತಾಲೂಕಿನ ವಾಜಮಂಗಲ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿಯಿಂದ ನ್ಯಾಯಾಲಯ ಮುಂಭಾಗದ ಗಾಂಧಿ ಪುತ್ಥಳಿ ಬಳಿ ಬಾಯಿಗೆ ಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಲಾಯಿತು.

ವಾಜಮಂಗಲ ಗ್ರಾಮದಲ್ಲಿ ಲಿಂಗಾಯತ, ಪರಿಶಿಷ್ಟ ಜಾತಿ, ಮಡಿವಾಳ ಶೆಟ್ಟರು ಹೊಂದಾಣಿಕೆಯಿಂದ ಜೀವನ ನಡೆಸುತ್ತಿದ್ದಾರೆ. ನಾಲ್ಕೈದು ವರ್ಷಗಳ ಹಿಂದೆ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಮುಂಭಾಗದಲ್ಲಿ ಬಸ್ ನಿಲ್ದಾಣ ನಿರ್ಮಾಣಗೊಂಡಿದ್ದು, ತಮಗೆ ಬೇಕಾದ ಹೆಸರು ನಾಮಕರಣ ಮಾಡಿಕೊಂಡಿದ್ದಾರೆ. ಇದು ಸರಿಯಲ್ಲ ಎಂದರು.

ಬಸ್ ನಿಲ್ದಾಣಕ್ಕೆ ಪುನೀತ್ ರಾಜ್‌ಕುಮಾರ್ ಹೆಸರಿಡಲು ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಪಡೆದಿದ್ದಾರೆಯೇ ಎಂದು ತನಿಖೆ ಮಾಡಬೇಕು. ಒಂದು ವೇಳೆ ಕಾನೂನುಬಾಹಿರವಾಗಿ ಪುನೀತ್ ಹೆಸರಿಟ್ಟಿದ್ದರೆ ಜೈ ಭೀಮ್ ಬಸ್ ನಿಲ್ದಾಣ ಎಂದು ಮರು ನಾಮಕರಣ ಮಾಡಬೇಕು. ಅಂಬೇಡ್ಕರ್ ಸಮುದಾಯ ಭವನದ ಫಲಕ, ಫ್ಲೆಕ್ಸ್‌ಗಳಿಗೆ ಅಪಮಾನ ಮಾಡಿರುವ ಕಿಡಿಗೇಡಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷೆ ವಿ.ಪಿ. ಸುಶೀಲ, ಪ್ರಧಾನ ಕಾರ್ಯದರ್ಶಿ ಪುಟ್ಟರಾಜು, ಜಿಲ್ಲಾಧ್ಯಕ್ಷ ಸುದರ್ಶನ್, ಈಶ್ವರ್, ಅಮೀನಾಬೇಗಂ, ಸಮೀರ್ ರೈ, ಗೌರಮ್ಮ, ಭಾಗ್ಯಮ್ಮ, ಲತಾಕುಮಾರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ದಡಿಘಟ್ಟ ಪಾಪಶೆಟ್ಟಿ ನಿಧನ



ಕೆ.ಆರ್.ಪೇಟೆ: ತಾಲೂಕಿನ ದಡಿಘಟ್ಟ ಗ್ರಾಮದ ಶಿವಜ್ಯೋತಿಪಣ ಸಮುದಾಯದ ಹಿರಿಯ ಮುಖಂಡರಾದ ಪಾಪಶೆಟ್ಟಿ(85) ಅವರು ಗುರುವಾರ ಸಂಜೆ ನಿಧನರಾದರು. ಮೃತರು ಧರ್ಮಪತ್ನಿ ಲಕ್ಷ್ಮಮ್ಮ, ಪುತ್ರ ಗಣಪತಿ ದೇವಾಲಯದ ಅರ್ಚಕ ಜಯರಾಮಶೆಟ್ಟಿ, ಗಂಗಧರ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ದಡಿಘಟ್ಟಯಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.05.2025 ಶುಕ್ರವಾರ, ಮಳೆ ನಕ್ಷತ್ರ: ಭರಣಿ 27.04.2025ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ–2025 ಮತ್ತು ರಾಜಗೋಪುರಕ್ಕೆ ಭೂಮಿಪೂಜೆ, ಬೆಳಗ್ಗೆ 9ಕ್ಕೆ ಪ್ರಾಕಾರೋತ್ಸವ, ನಿತ್ಯಹೋಮ, ಸಂಜೆ 6ಕ್ಕೆ ಶಾಂತಿಹೋಮ, ಮಹಾಪೂರ್ಣಾಹುತಿ, ಧ್ವಜಾವರೋಹಣ, ಪುಷ್ಪಯಾಗ, ರಾಷ್ಟ್ರಾಶೀರ್ವಾದ, ಸ್ಥಳ: ದೇವಸ್ಥಾನದ ಪ್ರಾಂಗಣ, 3ನೇ ಹಂತ, ಗೋಕುಲಂ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠ:** ಅಕ್ಕಮಹಾದೇವಿ ಜಯಂತ್ಯೋತ್ಸವ ಪ್ರಯುಕ್ತ ಸಂಶೋಧನಾ ಗ್ರಂಥ ಬಿಡುಗಡೆ, ವಿಚಾರ ಸಂಕಿರಣ, ಕೃತಿ ಅನಾವರಣ : ಸಾಂಸ್ಕೃತಿಕ ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್, ಸಂಶೋಧನಾ ಕೃತಿ ಲೇಖಕರು : ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠದ ನಿರ್ದೇಶಕರಾದ ಪ್ರೊ. ಕವಿತಾ ರೈ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ ಅವರಿಂದ ಅಕ್ಕಮಹಾದೇವಿ ವಚನಗಳಲ್ಲಿನ ವೈಚಾರಿಕತೆ ಕುರಿತು ಉಪನ್ಯಾಸ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 9.30ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು:** ಸಂಯುಕ್ತ ಸಹಕಾರಿ ಸಿಬ್ಬಂದಿಗೆ ಕೌಶಲ ಅಭಿವೃದ್ಧಿ ತರಬೇತಿ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದಜಿ, ಅಧ್ಯಕ್ಷತೆ: ಸಹಕಾರಿ ಸಂಘದಧ್ಯಕ್ಷ ಜಿ. ನಂಜನಗೌಡ, ಮುಖ್ಯ ಅತಿಥಿಗಳು: ಸಿ.ಎನ್.ಪರಶಿವಮೂರ್ತಿ, ಸಿ.ಪ್ರಸಾದ ರೆಡ್ಡಿ, ಕೆ.ಗಗನಾ, ಶ್ರೀ ಮಹಾ ಮೇದಾನಂದ ಸ್ವಾಮೀಜಿ, ಡಾ.ಹೆಚ್.ವಿ.ರಾಜೀವ್, ಎಸ್.ಕೆ.ಮಂಜುನಾಥ್, ಬಿ.ಪಿ.ಪ್ರೇಮಾನಂದ, ಸ್ಥಳ: ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಬೆಳಗ್ಗೆ 10ಕ್ಕೆ.

■ **ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ :** ಕುರುಬಾರಹಳ್ಳಿಯಲ್ಲಿರುವ ಸಂಚಾರಿ ಪೊಲೀಸ್ ಠಾಣೆಗೆ ಸಿದ್ಧಾರ್ಥನಗರ ಸಂಚಾರಿ ಪೊಲೀಸ್ ಠಾಣೆಯ ಹೆಸರಿನ ಬದಲು ಕುರುಬಾರಹಳ್ಳಿ ಸಂಚಾರಿ ಪೊಲೀಸ್ ಠಾಣೆ ಎಂದು ಹೆಸರಿಡಲು 'ಸಹಿ ಸಂಗ್ರಹ ಅಭಿಯಾನ', ಸ್ಥಳ: ಸಂಗೊಳ್ಳಿ ರಾಯಣ್ಣ ವೃತ್ತ, ಬೆಳಗ್ಗೆ 10ರಿಂದ.

■ **ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು :** ಸಮಾರೋಪ ಸಮಾರಂಭ, ಸಮಾರೋಪ ನುಡಿ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಜಿ.ಆರ್. ನಟರಾಜ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್, ಹಿಮಾಲಯ ಪ್ರತಿಷ್ಠಾನ :** ಆದಿಗುರು ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರ ಜಯಂತ್ಯುತ್ಸವ, ಉದ್ಘಾಟನೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಶ್ರೀಶಂಕರರು ಹಾಗೂ ಶ್ರೀರಾಮಾನುಜರ ಕುರಿತು ಸಂಸ್ಕೃತಿ ವಿದುಷಿ ಡಾ.ಕೆ. ಲೀಲಾಪ್ರಕಾಶ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಉಪಸ್ಥಿತರು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀರಾಮಮಂದಿರ, ಜಯನಗರ, ಮಧ್ಯಾಹ್ನ 12ಕ್ಕೆ

■ **ಗಾನಭಾರತೀ :** ವಿದುಷಿ ಶ್ರೀಮತಿ ಜಿ.ಎಸ್. ಕಮಲ ಸಂಸ್ಮರಣಾ ಸಂಗೀತ ಕಛೇರಿ, ವಿದ್ವಾನ್ ಡಾ. ಆರ್.ಕೆ. ಪದ್ಮನಾಭ ಅವರಿಂದ ಗಾಯನ, ವಿದ್ವಾನ್ ಜೆ.ಕೆ. ಶ್ರೀಧರ್–ಪಿಟೀಲು, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧನ–ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ.ಎಂ.ಎನ್.ಚಿಕ್ಕಮಾದು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ–ಮಹಾಯೋಗ, 9.00 ನಮ್ಮ ಆರೋಗ್ಯ–ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಲಭ್ಯವಿರುವ ವಿಶೇಷ ಆರೋಗ್ಯ ಸೌಲಭ್ಯಗಳು ಮತ್ತು ಆರೈಕೆ ಕುರಿತು ಡಾ. ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ ಮತ್ತು ವಿಶ್ವ ಥಲೆಸೀಮಿಯಾ ದಿನಾಚರಣೆಯ ಸಂಬಂಧವಾಗಿ ಕಾರ್ಯಕ್ರಮ. ಥಲೆಸೀಮಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಶರತ್ ಕೀರ್ತಿ. ಆರ್ ಮತ್ತು ಡಾ.ಸೌಮ್ಯ ಜೆ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಂದ್ರಕುಮಾರ–ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ **ಮಧ್ಯಾಹ್ನ :** 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿ ಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಜೆ. ಶ್ರೀನಿವಾಸ ಅಯ್ಯಂಗಾರ್–ವೀಣಾವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾದ ಬಿ.ಇಲಂಗೋವನ್ ಅವರೊಂದಿಗೆ ಮಾತುಕತೆ – ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, 7.20 ಕೃಷಿರಂಗ–ಸಂಶೋಧನಾ ಸಾರ ಕೃಷಿ ಕ್ಷೇತ್ರದ ಹೊಸ ಆವಿಷ್ಕಾರ, ಪ್ರಸ್ತುತಿ : ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ :ಡಾ. ಎಸ್.ರಾಮನಾಥನ್–ಹಾಡುಗಾರಿಕೆ, 10.00 ತತ್ವಸಂಚಾರ–ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 9 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 23 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಭಾರತದ ದಾಳಿಗೆ ಪತರಗುಟ್ಟಿದ ಪಾಕಿಸ್ತಾನ



ಅಡಗುತಾಣದಲ್ಲಿ ಆಶ್ರಯ ಪಡೆದ ಪಾಕ್ ಪ್ರಧಾನಿ

ಲಾಹೋರ್, ಕರಾಚಿ, ಇಸ್ಲಾಮಾಬಾದ್, ಪೇಶಾವರ್, ರಾವಲ್ಪಿಂಡಿಗಳಲ್ಲಿ ಭಾರತದ ಕ್ಷಿಪಣಿಗಳ ರುದ್ರನರ್ತನ

● ಪಾಕ್‌ನ ಮೂರು ಫೈಟರ್ ಜೆಟ್ ಉಡೀಸ್ ● ನಾಲ್ಕು ಏರ್ ಡಿಫೆನ್ಸ್‌ಗಳು ಧ್ವಂಸ ● ಪಾಕ್ ಸರ್ಕಾರದ ವಿರುದ್ಧ ಜನಾಕ್ರೋಶ

ಕರಾಚಿ ಬಂದರು ಮೇಲೆ ಮುಗಿಬಿದ್ದ ಭಾರತದ ನೌಕಾಪಡೆ



ಕರಾಚಿ ಬಂದರು ಮೇಲೆ ಭಾರತದ ನೌಕಾಪಡೆ ಗುರುವಾರ ರಾತ್ರಿ ದಾಳಿ ನಡೆಸಿತು.

ನವದೆಹಲಿ, ಮೇ 8– ಭಾರತದ 'ಆಪರೇಷನ್ ಸಿಂಧೂರ್'ಗೆ ಪ್ರತ್ಯುತ್ತರ ನೀಡಲು ಮುಂದಾದ ಪಾಕಿಸ್ತಾನ ಈಗ ಪತರುಗುಟ್ಟಿದೆ. ಗುರುವಾರ ಮುಂಜಾನೆ 1 ಗಂಟೆಯಿಂದ ಹಲವಾರು ಬಾರಿ ಭಾರತದ ಗಡಿಯ ವಾಯು ನೆಲೆಗಳು ಹಾಗೂ ಜನವಸತಿ ಪ್ರದೇಶದ ಮೇಲೆ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿದ ಪಾಕಿಸ್ತಾನದ ಪ್ರಯತ್ನವನ್ನು ಏರ್ ಡಿಫೆನ್ಸ್ ಯೂನಿಟ್ ಮೂಲಕ ವಿಫಲಗೊಳಿಸಲಾಗಿದೆ.

ಇಂದು ರಾತ್ರಿ ಪಾಕ್ ಸೇನೆ ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ನಡೆಸಿದ ದಾಳಿ ಮಾದರಿಯಲ್ಲಿ 100ರಿಂದ 150ಕ್ಕೂ ಹೆಚ್ಚು ಕ್ಷಿಪಣಿಗಳನ್ನು ಎಡೆಬಿಡದೆ ಜಮ್ಮುವಿನ ಮೇಲೆ ಹಾರಿಸಿದ್ದು, ಭಾರತೀಯ ಸೇನೆಯ ಸಹನೆ ಕಟ್ಟೆ ಒಡೆದಂತಾಗಿದೆ.

ಪಾಕ್ ಕಡೆಯಿಂದ ಬಂದ ಕ್ಷಿಪಣಿಗಳನ್ನು ಭಾರತದ ಶಕ್ತಿಶಾಲಿ ಸ್ವಯಂ ಚಾಲಿತ ಏರ್ ಡಿಫೆನ್ಸ್ ಯೂನಿಟ್ ಆಗಸದಲ್ಲೇ ಹೊಡೆದುರುಳಿಸಿದೆ.



ಶೆಹಬಾಜ್ ಷರೀಫ್
ಪಾಕ್ ಪ್ರಧಾನಿ

ಪಾಕಿಸ್ತಾನದ ಅಪ್ರಚೋದಿತ ದಾಳಿಗೆ ಪ್ರತಿಯಾಗಿ ಇಂದು ಸಂಜೆ ಲಾಹೋರ್ ಮತ್ತು ರಾವಲ್ಪಿಂಡಿ ಮೇಲೆ ಡ್ರೋನ್ ದಾಳಿ ನಡೆಸಿದ್ದ ಭಾರತೀಯ ಸೇನೆ, ಇಂದು ರಾತ್ರಿ ಪಾಕಿಸ್ತಾನದ ಪ್ರಮುಖ ನಗರಗಳನ್ನೇ ಗುರಿಯಾಗಿಟ್ಟುಕೊಂಡು ವಾಯು ದಾಳಿ ನಡೆಸಿದೆ. ಪಾಕಿಸ್ತಾನದ ಮೂರು ಯುದ್ಧ ವಿಮಾನಗಳನ್ನು ಪುಡಿಗಟ್ಟಿದೆ. ಅತ್ಯಾಧುನಿಕ ಚಿಮ್ಮುವ ಕ್ಷಿಪಣಿಗಳನ್ನು ಹಾರಿಸಿ, ಪಾಕಿಸ್ತಾನದ ದಾಳಿ ಯತ್ನವನ್ನು ವಿಫಲಗೊಳಿಸಿದೆ.

ಪ್ರತೀಕಾರದ ಮುಂದುವರೆದ ಭಾಗವಾಗಿ ಪಾಕಿಸ್ತಾನದ ಪ್ರಮುಖ ನಗರವಾದ ಲಾಹೋರ್, ರಾಜಧಾನಿ ಇಸ್ಲಮಾಬಾದ್, ವಾಣಿಜ್ಯ ನಗರಿ ಕರಾಚಿ, ರಾವಲ್ಪಿಂಡಿ, ಪೇಶಾವರ, ಮುಝಾಫರ್‌ಬಾದ್ ಮೇಲೆ ಭಾರತ ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿ ನಡೆಸುವುದಕ್ಕೂ ಮುನ್ನ ಲಾಹೋರ್, ಮುಲ್ತಾನ್, ಫೈಸಲಾಬಾದ್ ಸೇರಿದಂತೆ ಹಲವೆಡೆ ಪಾಕ್ ವಾಯು ಮಾರ್ಗದಲ್ಲಿ ಬರುವ

■ 6ನೇ ಪುಟಕ್ಕೆ

ಪ್ರಧಾನಿ ಮೋದಿ ಭೇಟಿ ಮಾಡಿದ ಅಜಿತ್ ದೋವಲ್

ನವದೆಹಲಿ, ಮೇ 8– ಪಾಕಿಸ್ತಾನ, ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಸಾಕಷ್ಟು ಕಡೆಗಳಲ್ಲಿ ದಾಳಿ ಯತ್ನ ಮಾಡಿದೆ. ಆದರೆ ಪಾಕಿಸ್ತಾನ ದಾಳಿ ವಿಫಲವಾಗಿದೆ. ಇದರ ಜೊತೆಗೆ ಪಾಕಿಸ್ತಾನ ದಾಳಿಗೆ ಭಾರತ ಪ್ರತ್ಯುತ್ತರ ನೀಡುತ್ತಿದೆ. ಲಾಹೋರ್ ಸೇರಿದಂತೆ ಸಾಕಷ್ಟು ಕಡೆಗಳಲ್ಲಿ ಭಾರತ ಪ್ರತಿದಾಳಿ ಮಾಡುತ್ತಿದೆ. ಈ ಮಧ್ಯೆ ಪ್ರಧಾನಿ ಮೋದಿಯವರನ್ನು ಅಜಿತ್ ದೋವಲ್ ಭೇಟಿಯಾಗಿದ್ದಾರೆ.



ನರೇಂದ್ರ ಮೋದಿ
ಭಾರತ ಪ್ರಧಾನಿ



ಅಜಿತ್ ದೋವಲ್

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರಧಾನಿಯವರು ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಸಿಂಗ್ ಅವರು ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಮತ್ತು ಮೂವರು ಸೇನಾ ಮುಖ್ಯಸ್ಥರೊಂದಿಗೆ ಮಾತನಾಡಿದ್ದಾರೆ. ಪಾಕಿಸ್ತಾನವು ಅಪ್ರಚೋದಿತ ದಾಳಿ ನಡೆಸಿದ ನಂತರ, ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ, ಪಾಕಿಸ್ತಾನದೊಂದಿಗಿನ ಪ್ರಸ್ತುತ ಬಿಕ್ಕಟ್ಟಿನ ಬಗ್ಗೆ ವಿವರಿಸಿದರು.



ಪಾಕಿಸ್ತಾನದ ಪ್ರಮುಖ ನಗರಗಳಾದ ಇಸ್ಲಾಮಾಬಾದ್, ಲಾಹೋರ್ ಇತರೆಡೆ ಭಾರತದ ಕ್ಷಿಪಣಿ ಸುರಿಮಳೆ.



ಪಾಕಿಸ್ತಾನ ದಾಳಿಯನ್ನು ಭಗ್ನಗೊಳಿಸಿದ ಭಾರತದ 'ಸುದರ್ಶನ ಚಕ್ರ'!

● 15 ಮಿಲಿಟರಿ ಘಟಕಗಳ ಗುರಿಯಾಗಿಸಿ ಹಮಾಸ್ ಮಾದರಿ ಕ್ಷಿಪಣಿ ದಾಳಿಗೆ ಯತ್ನಿಸಿದ್ದ ಪಾಕ್ ● ಭಾರತೀಯ ವಾಯುಪಡೆಯ S-400 'ಸುದರ್ಶನ ಚಕ್ರ'ದಿಂದ ಛಿದ್ರ ಛಿದ್ರ



ಜಮ್ಮು, ಮೇ 8– ಪಹಲ್ಗಾಮ್ ಉಗ್ರರ ದಾಳಿಗೆ ಪ್ರತೀಕಾರವಾಗಿ ಬುಧವಾರ ಭಾರತೀಯ ಸೇನೆ ಭಯೋತ್ಪಾದಕರ 9 ನೆಲೆಗಳ ಮೇಲೆ ನಡೆಸಿದ ದಾಳಿಗೆ ಪ್ರತೀಕಾರವಾಗಿ ಭಾರತದ ಗಡಿಯಂಚಿನಲ್ಲಿರುವ ವಾಯು ನೆಲೆಗಳು ಹಾಗೂ ವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ಗುರುವಾರ ಮುಂಜಾನೆ 1 ಗಂಟೆ ಸುಮಾರಿನಲ್ಲಿ ಹಮಾಸ್ ಮಾದರಿ ನಡೆಸಿದ ಕ್ಷಿಪಣಿ ದಾಳಿಯನ್ನು ಭಾರತೀಯ ವಾಯುಪಡೆಯ S-400 'ಸುದರ್ಶನ ಚಕ್ರ' ವಾಯು ರಕ್ಷಾ ಕ್ಷಿಪಣಿ ವ್ಯವಸ್ಥೆಯು ಯಶಸ್ವಿಯಾಗಿ ತಡೆದು ಪಾಕ್‌ನ ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. ನಂತರ ಇಂದು ರಾತ್ರಿ ಜಮ್ಮು ಸುತ್ತಮುತ್ತಲ ಪ್ರದೇಶ ರಣರಂಗವಾಗಿ ಪರಿಣಮಿಸಿತ್ತು.

ಪಾಕ್ ಸೇನೆಯು ದಾಳಿ ನಡೆಸಲು ಮುಂದಾದಾಗ ಪ್ರತಿದಾಳಿ ನಡೆಸಿದ ಭಾರತೀಯ ಸೇನೆ ಪಾಕ್‌ನ 3 ಫೈಟರ್ ಜೆಟ್ ವಿಮಾನಗಳನ್ನು ಹೊಡೆದುರುಳಿಸಿದ್ದಲ್ಲದೇ, 8 ಕ್ಷಿಪಣಿಗಳು ಸೇರಿದಂತೆ ಹಲವಾರು ಡ್ರೋನ್‌ಗಳನ್ನು ಧ್ವಂಸಗೊಳಿಸಿದೆ. ಭಾರತದತ್ತ ನುಗ್ಗಿ ಬರುತ್ತಿದ್ದ ಫೈಟರ್ ಜೆಟ್ ಎಫ್–16 ಅನ್ನು ಇಂದು ಬೆಳಗ್ಗೆಯೇ ಹೊಡೆದುರುಳಿಸಿದ್ದ ಭಾರತೀಯ ಸೇನೆ, ರಾತ್ರಿ ಭಾರತದತ್ತ ನುಗ್ಗಲು ಸಜ್ಜಾಗಿದ್ದ ಎಫ್–16 ಮತ್ತು ಎಫ್–17 ಫೈಟರ್ ಜೆಟ್‌ಗಳನ್ನು ಪಾಕಿಸ್ತಾನದ ವಾಯು ನೆಲೆಯಲ್ಲೇ ಹೊಡೆದುರುಳಿಸುವ ಮೂಲಕ ಪರಾಕ್ರಮ ಮೆರೆದಿದೆ.

ಭಾರತ ಬುಧವಾರ ಕೇವಲ ಭಯೋತ್ಪಾದಕರ ನೆಲೆಗಳನ್ನಷ್ಟೇ ಗುರಿಯಾಗಿಟ್ಟುಕೊಂಡು ದಾಳಿ ನಡೆಸಿತ್ತೇ ಹೊರತು, ಪಾಕಿಸ್ತಾನ ಸೇನೆಯನ್ನಾಗಲೀ, ಅಲ್ಲಿನ ಜನರನ್ನಾಗಲೀ ಗುರಿಯಾಗಿಸಿಕೊಂಡಿರಲಿಲ್ಲ. ಆದರೆ ಬುಧವಾರ ರಾತ್ರಿಯೇ ಪೂಂಚ್ ಪ್ರದೇಶದಲ್ಲಿ ಪಾಕ್ ಸೇನೆ ಶೆಲ್‌ಗಳನ್ನು ಸಿಡಿಸಿ 15 ಮಂದಿ ಸಾರ್ವಜನಿಕರನ್ನು ಹತ್ಯೆ ಮಾಡಿತ್ತು. ಸುಮಾರು 50 ಮಂದಿ ಗಾಯಗೊಂಡಿದ್ದರು.

■ 6ನೇ ಪುಟಕ್ಕೆ

'ಆಪರೇಷನ್ ಸಿಂಧೂರ್' ನಿರಂತರ

● ಸರ್ವಪಕ್ಷ ಸಭೆ ಬಳಿಕ ಸಚಿವ ಕಿರಣ್ ರಿಜಿಜು ಘೋಷಣೆ ● ಪಾಕ್ ವಿರುದ್ಧ ಪ್ರತೀಕಾರಕ್ಕೆ ಪ್ರತಿಪಕ್ಷಗಳ ಬೆಂಬಲ; ಭಾರತೀಯ ಸೇನೆಗೆ ಅಭಿನಂದನೆ

ನವದೆಹಲಿ, ಮೇ 8– ಪಾಕ್ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ನಿರಂತರವಾದದ್ದು ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದರು.



ಇಂದು ನಡೆದ ಸರ್ವಪಕ್ಷ ಸಭೆಯ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಆಪರೇಷನ್ ಸಿಂಧೂರ್'ನಲ್ಲಿ ಕನಿಷ್ಠ 100 ಭಯೋತ್ಪಾದಕರ ಹತ್ಯೆಯಾಗಿದೆ. ಈ ಕಾರ್ಯಾಚರಣೆ ಹೀಗೆ ಮುಂದುವರಿಯಲಿದೆ ಎಂದು ಕೇಂದ್ರ ರಕ್ಷಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದು, ಅವರು ಹೇಳಿದಂತೆ ಇದು ಒಂದು ನಿರಂತರ ಕಾರ್ಯಾಚರಣೆಯಾಗಿದೆ. ಸಶಸ್ತ್ರ ಪಡೆಗಳು ನಡೆಸಿದ ದಾಳಿಯಲ್ಲಿ ಪಾಕಿಸ್ತಾನದ 9 ಭಯೋತ್ಪಾದಕ ಅಡಗುತಾಣಗಳು ಧ್ವಂಸಗೊಂಡಿವೆ. ಪಾಕಿಸ್ತಾನದ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಪ್ರತಿಪಕ್ಷಗಳು ಭರವಸೆ ನೀಡಿವೆ. 'ಆಪರೇಷನ್ ಸಿಂಧೂರ್' ಯಶಸ್ಸಿಗೆ ಪಕ್ಷಾತೀತವಾಗಿ ಎಲ್ಲರೂ ಭಾರತೀಯ ಸೇನೆಯನ್ನು ಅಭಿನಂದಿಸಿದರು ಎಂದು ತಿಳಿಸಿದರು.

ಸದ್ಯ ದೇಶವು ಎದುರಿಸುತ್ತಿರುವ ಪ್ರಮುಖ ಸವಾಲನ್ನು ಗುರುತಿಸಿ ಪ್ರತಿಯೊಬ್ಬ ನಾಯಕರು ಜವಾಬ್ದಾರಿ ಮತ್ತು ಪ್ರಬುದ್ಧತೆಯಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ

■ 6ನೇ ಪುಟಕ್ಕೆ

ಯುದ್ಧಕ್ಕೆ ಸನ್ನದ್ಧ; ಮೈಸೂರಲ್ಲಿ ನಾಳೆ 'ಮಾಕ್ ಡ್ರಿಲ್'

■ ಅರಮನೆ ಆವರಣದಲ್ಲಿ ನಾಗರಿಕ ರಕ್ಷಣಾ ಅಣಕು ಕವಾಯತು
■ ಪೂರ್ವಭಾವಿ ಸಭೆಯಲ್ಲಿ ಸಕಲ ಸಿದ್ಧತೆಗೆ ಡಿಸಿ ಸೂಚನೆ

ಮೈಸೂರು, ಮೇ 8(ಎಸ್‌ಬಿಡಿ)– ಮೈಸೂರಿನಲ್ಲಿ ಮೇ 10ರಂದು 'ಆಪರೇಷನ್ ಅಭ್ಯಾಸ್' ನಾಗರಿಕ ರಕ್ಷಣಾ ಅಣಕು ಕವಾಯತು(ಮಾಕ್ ಡ್ರಿಲ್) ನಡೆಯಲಿದೆ.

ಕೇಂದ್ರ ಗೃಹ ಸಚಿವಾಲಯದ ಸೂಚನೆ ಹಿನ್ನೆಲೆಯಲ್ಲಿ ಅಂದು ಸಂಜೆ 4ಕ್ಕೆ ಅರಮನೆ ಆವರಣದಲ್ಲಿ ಮಾಕ್ ಡ್ರಿಲ್ ನಡೆಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಗುರುವಾರ ಪೂರ್ವಭಾವಿ ಸಭೆ ನಡೆಸಿದ ಅವರು, ಮಾಕ್ ಡ್ರಿಲ್‌ಗೆ ಅಗತ್ಯವಾದ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕು. ಯಾವುದೇ ರೀತಿಯಲ್ಲೂ ಯಾರಿಗೂ ಅಪಾಯವಾಗದಂತೆ ಎಚ್ಚರಿಕಾ ಕ್ರಮಗಳನ್ನು ಕೈಗೊಂಡು, ಮಾಕ್ ಡ್ರಿಲ್ ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅರಮನೆ ಆವರಣದಲ್ಲಿ ಮಾಕ್ ಡ್ರಿಲ್‌ಗೆ ಸೂಕ್ತವಾದ ಜಾಗವನ್ನು ನಿಗದಿಪಡಿಸಿಕೊಂಡು, ಅಗತ್ಯವಾದ ಮಾನವ ಸಂಪನ್ಮೂಲ, ಸೈರನ್, ಕಂಟ್ರೋಲ್ ರೂಂ, ಆಂಬುಲೆನ್ಸ್, ಅಗ್ನಿಶಾಮಕ ವಾಹನ, ತಾತ್ಕಾಲಿಕ ಆಸ್ಪತ್ರೆ ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನೂ ಮಾಡಿಕೊಳ್ಳಬೇಕು. ಸಂಕಷ್ಟ ಪರಿಸ್ಥಿತಿಯಲ್ಲಿ ವ್ಯವಸ್ಥೆ ನಮ್ಮ ರಕ್ಷಣೆಗೆ ಧಾವಿಸಲಿದೆ ಎಂಬ ವಿಶ್ವಾಸವನ್ನು ಜನರಲ್ಲಿ ಮೂಡುವಂತೆ ಯಶಸ್ವಿಯಾಗಿ ಮಾಕ್ ಡ್ರಿಲ್ ನಡೆಸಬೇಕೆಂದು ತಿಳಿಸಿದರು.



ಮೈಸೂರಲ್ಲಿ ಮಾಕ್ ಡ್ರಿಲ್ ನಡೆಸುವ ಸಂಬಂಧ ಗುರುವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸಿಫ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಮುತ್ತುರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ, ಅಗ್ನಿಶಾಮಕ ಅಧಿಕಾರಿ ಗುರುರಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಪಹಲ್ಗಾಮ್ ಉಗ್ರರ ದಾಳಿ ಬಳಿಕ ಭಾರತ ರಾಜತಾಂತ್ರಿಕ ನಿರ್ಧಾರಗಳ ಮೂಲಕ ಪಾಕಿಸ್ತಾನಕ್ಕೆ ಹೊಡೆತ ನೀಡುವುದರ ನಡುವೆ 'ಆಪರೇಷನ್ ಸಿಂಧೂರ್' ಮೂಲಕ ಪಾಕಿಸ್ತಾನದಲ್ಲಿದ್ದ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿದೆ. ಇದರಿಂದ ಪತರಗುಟ್ಟಿರುವ ಪಾಕಿಸ್ತಾನ, ಗಡಿಯಲ್ಲಿ ಅಪ್ರಚೋದಿತ ದಾಳಿ ನಡೆಸುತ್ತಿದೆ. ಈ ಸಂದರ್ಭದಲ್ಲೇ ಪೂರ್ವ ನಿಗದಿಯಂತೆ ಬೆಂಗಳೂರು, ರಾಯಚೂರು ಹಾಗೂ ಕಾರವಾರ ಸೇರಿದಂತೆ ದೇಶದ 244 ಜಿಲ್ಲೆಗಳಲ್ಲಿ ಬುಧವಾರ 'ಆಪರೇಷನ್ ಅಭ್ಯಾಸ್' ಹೆಸರಿನಲ್ಲಿ ಮಾಕ್ ಡ್ರಿಲ್ ನಡೆಸಲಾಗಿದೆ. ಹಾಗೆಯೇ ಮೇ 10ರಂದು ಮೈಸೂರಿನಲ್ಲೂ ಮಾಕ್ ಡ್ರಿಲ್ ನಡೆಸಲು ನಿರ್ಧರಿಸಲಾಗಿದೆ.



ಸಂಗ್ರಹ ಚಿತ್ರ

ದೇಶದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಒಂದಾಗಿರುವ ಮೈಸೂರಿಗೆ ನಿತ್ಯ ಪ್ರವಾಸಿಗರು ಬಂದು ಹೋಗುತ್ತಾರೆ. ಪ್ರೇಕ್ಷಣೀಯ ತಾಣಗಳು ಮಾತ್ರವಲ್ಲದೆ ಪಾರಂಪರಿಕ, ಐತಿಹಾಸಿಕ ಸ್ಮಾರಕಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರು ಹಾಗೂ ಸ್ಥಳೀಯರಲ್ಲಿ ಸುರಕ್ಷತೆ ವಿಶ್ವಾಸ ಮೂಡಿಸುವುದು ಅವಶ್ಯವಾಗಿದೆ. ಯುದ್ಧ ಸನ್ನಿವೇಶದಲ್ಲಿ ಏನಾದರೂ ಸಂಕಷ್ಟ ಎದುರಾದರೆ ಜನರ ರಕ್ಷಣೆಗೆ ಸನ್ನದ್ಧರಾಗಿದ್ದೇವೆ ಎಂಬುದನ್ನು ಮನದಟ್ಟು ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಿತವಾಗಿ ಮಾಕ್ ಡ್ರಿಲ್ ನಡೆಸಬೇಕಿದೆ. ಸೈರನ್ ಮೊಳಗಿಸಿದ ತಕ್ಷಣ ಜನರು ಸುರಕ್ಷಿತ ಸ್ಥಳಗಳಿಗೆ ಧಾವಿಸುವುದು, ನಾಗರಿಕ ರಕ್ಷಣಾ ಸಿಬ್ಬಂದಿ, ಪೊಲೀಸ್, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಕ್ಷಣಾರ್ಧದಲ್ಲಿ ಕಾರ್ಯಪ್ರವೃತ್ತರಾಗುವುದು, ಬೆಂಕಿ ನಂದಿಸುವುದು, ಕಟ್ಟಡ ಅವಶೇಷಗಳಡಿ ಸಿಲುಕಿದವರನ್ನು ರಕ್ಷಿಸಿ, ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸುವುದು, ಆಸ್ಪತ್ರೆಯಲ್ಲಿ ತುರ್ತು ವೈದ್ಯಕೀಯ ವ್ಯವಸ್ಥೆ ಕಲ್ಪಿಸುವುದು, ಹೀಗೆ ಹಲವು ಕಾರ್ಯಾಚರಣೆಯ ಅಣಕು ಪ್ರದರ್ಶನದ ಮೂಲಕ ಜಾಗೃತಿ ಮೂಡಿಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಶಾಸಕ ಸ್ಥಾನದಿಂದ ಜನಾರ್ದನ ರೆಡ್ಡಿ ಅನರ್ಹ

ಮೈಸೂರು, ಮೇ 8(ಪಿಎಂ)– ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯವು 7 ವರ್ಷ ಜೈಲು ಶಿಕ್ಷೆ ವಿಧಿಸಿರುವ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ಶಾಸಕ ಜಿ.ಜನಾರ್ಧನ ರೆಡ್ಡಿ ಅವರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿ, ಅಧಿಸೂಚನೆ ಹೊರಡಿಸಲಾಗಿದೆ.



ಹೈದರಾಬಾದಿನ ಸಿಬಿಐ ಪ್ರಕರಣಗಳ ಪ್ರಧಾನ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿಗಳು ಗಂಗಾವತಿ ಕ್ಷೇತ್ರವನ್ನು ಪ್ರತಿಧಿಸುವ ಶಾಸಕ ಜಿ.ಜನಾರ್ಧನ ರೆಡ್ಡಿ ಅವರನ್ನು ದೋಷಿಯೆಂದು ತೀರ್ಪು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಅಪರಾಧ ಸಾಬೀತಾದ ದಿನಾಂಕದಿಂದ ಕರ್ನಾಟಕ ವಿಧಾನಸಭೆಯ ಅವರ ಸದಸ್ಯತ್ವ ಅನರ್ಹಗೊಳಿಸಲಾಗಿದೆ

■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪೊಲೀಸ್ : ಸಾರ್ ನಿಮ್ಮ ಕಾರಿಗೆ ಆಕ್ಸಿಡೆಂಟ್ ಹೇಗಾಯ್ತು?
ಗುಂಡ : ಅದು ನನಗೂ ಸಹ ಗೊತ್ತಿಲ್ಲ. ಆಗ ನಾನು ಮಲಗಿದ್ದೆ...

ಮೈಸೂರು ಮಿತ್ರ

ಶುಕ್ರವಾರ, 9 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನೀನೆಷ್ಟೇ ತಪ್ಪು ಮಾಡಿದರೂ ನಾ ಕೋಪಿಸಿಕೊಳ್ಳಲಿಲ್ಲ. ಏಕೆಂದರೆ ಕೋಪಿಸಿಕೊಳ್ಳುವುದು ಮನಸಿನ ಕೆಲಸ. ಹೃದಯವೆಂದೂ ಪ್ರೀತಿಸುವುದನ್ನು ಮರೆಯುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ ಮಾಡುವುದೆಲ್ಲಾ ರಾದ್ಧಾಂತ

ನಿಮ್ಮ ಪತ್ರಗಳು

■ ಕೆ.ಆರ್.ಆಸ್ಪತ್ರೆ ಸಿಟಿ ಸ್ಕ್ಯಾನ್ ಮೆಷಿನ್ ತಕ್ಷಣ ರಿಪೇರಿಯಾಗಲಿ...



ಮೈಸೂರಿನ ಕೆ.ಆರ್.ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ಮುಂಭಾಗದಲ್ಲಿ ಸಿ.ಟಿ. ಸ್ಕ್ಯಾನ್ ಮಾಡಿಸಲು ಕಾದು ಕುಳಿತಿರುವ ಬಡ ರೋಗಿಗಳು.

ಮಾನ್ಯರೆ,

ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರು, ಬಡವರಿಗಾಗಿ ನಿರ್ಮಿಸಿದ ಕೆ.ಆರ್.ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ಸಿ.ಟಿ. ಸ್ಕ್ಯಾನ್ ಯಂತ್ರ ಕೆಟ್ಟು ಸುಮಾರು 15 ದಿನಗಳಾಗಿದೆ. ಆದರೂ ರಿಪೇರಿ ಯಾಗಿಲ್ಲ. ನೂರಾರು ಬಡ ರೋಗಿಗಳು ಸಾಲ ಸೋಲ ಮಾಡಿ, ಅನಿವಾರ್ಯವಾಗಿ ಖಾಸಗಿ ಲ್ಯಾಬ್‌ಗಳಲ್ಲಿ 4ರಿಂದ 5 ಸಾವಿರ ರೂಪಾಯಿ ಕೊಟ್ಟು ಸ್ಕ್ಯಾನ್ ಮಾಡಿಸುತ್ತಿದ್ದಾರೆ. ಈ ಬಗ್ಗೆ ಅಲ್ಲಿನ ಸಿಬ್ಬಂದಿಯನ್ನು ವಿಚಾರಿಸಿದರೆ, ಯಂತ್ರ ಕೆಟ್ಟು ಹೋಗಿದೆ. ಇದನ್ನು ರಿಪೇರಿ ಮಾಡುವವರು ಜರ್ಮನಿಯಿಂದ ಬರಬೇಕು. ನಾವು ಏನು ಮಾಡಲು ಸಾಧ್ಯವಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ನೀವು ಆರ್.ಎಂ.ಓ ಅಥವಾ ಸೂಪರಿಂಟೆಂಡೆಂಟ್ ಅವರಿಗೆ ಹೇಳಿ ಎನ್ನುತ್ತಾರೆ.

ಬಡವರ ಪಾಲಿಗೆ ಆರೋಗ್ಯ ಧಾಮವಾಗಿರುವ ಕೆ.ಆರ್.ಆಸ್ಪತ್ರೆಯಲ್ಲಿ ಸದಾ ಬಡವರಿಗೆ ಆರೋಗ್ಯ ಸೇವೆ ಲಭಿಸಲಿ ಎಂಬುದೇ ನಮ್ಮ ಆಶಯ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ಸೋನು ನಿಗಮ್ ಮಾತಿನಲ್ಲಿ ಅಪಸ್ವರ

ಮಾನ್ಯರೆ,

ಇತ್ತೀಚೆಗೆ ಗಾಯಕ ಸೋನು ನಿಗಮ್ ಅವರು ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಹಾಡು ಹಾಡಿ ಎಂದು ಪ್ರೇಕ್ಷಕರು ಕೇಳಿದ್ದಕ್ಕೆ ಇದಕ್ಕೆ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿ ನಡೆದಿರುವುದು ಎಂದು ಅಸಂಬದ್ಧವಾಗಿ 'ಅಪಸ್ವರ'ದಲ್ಲಿ ಮಾತನಾಡಿ, ಕನ್ನಡಿಗರ ಮನಸ್ಸಿಗೆ ನೋವುಂಟು ಮಾಡಿದ್ದಾರೆ. ಹಾಡು ಮಾತ್ರ 'ಅಪಸ್ವರ'ದಲ್ಲಿ ಹಾಡಬಾರದು, ಮಾತು ಹೇಗಾಡಿದರೂ ನಡೆಯುತ್ತದೆ ಅಂತ ಈ ಗಾಯಕ ತಿಳಿದುಕೊಂಡಂತಿದೆ. ಸೋನು ನಿಗಮ್ ಒಬ್ಬ ಪ್ರತಿಭಾವಂತ ಗಾಯಕ ಎನ್ನುವುದರಲ್ಲಿ ಎರಡು ಮಾತಿಲ್ಲ ನಿಜ. ಹಾಗೆಂದ ಮಾತ್ರಕ್ಕೆ ತಾನು ಉಡಾಫೆಯಿಂದ ಏನು ಮಾತನಾಡಿದರೂ ನಡೆಯುತ್ತದೆ ಎನ್ನುವ ಭ್ರಮೆಯಲ್ಲಿರುವುದು ಒಳ್ಳೆಯದಲ್ಲ. ಡಾ.ರಾಜ್ ಕುಮಾರ್, ಎಸ್ಪಿಬಿ, ಯೇಸುದಾಸ್ ಅವರಂತಹ ಮಹಾನ್ ಗಾಯಕರು ಯಾರ ಮನಸ್ಸಿಗೂ ನೋವಾಗದಂತೆ ನಡೆದುಕೊಂಡು ಅನೇಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ಸೆಳೆಯುತ್ತಿದ್ದರು.

ಸೋನು ನಿಗಮ್ ಇನ್ನಾದರೂ ತನ್ನ ತಪ್ಪನ್ನು ತಿದ್ದುಕೊಳ್ಳಲಿ. ಹೇಗೆ ವರ್ತಿಸಬೇಕೆಂದು ಕಲಿಯಲಿ. ಇವರ ಈ ವರ್ತನೆಯಿಂದ ಬೇಸತ್ತು ಅವರೇ 'ಮುಂಗಾರು ಮಳೆ' ಚಿತ್ರಕ್ಕಾಗಿ ಹಾಡಿದ ಹಾಡಿನ ದಾಟಿಯಲ್ಲಿ'ಅನಿಸುತಿದೆ ಯಾಕೋ ಇಂದು ನೀವಿನ್ನು ಕನ್ನಡ ಹಾಡು ಹಾಡಬಾರದೆಂದೂ' ಎಂದು ಕನ್ನಡಿಗರು ಹಾಡಿಕೊಳ್ಳುತ್ತಿದ್ದಾರೆ.

–ರಾಘವೇಂದ್ರ ಜೋಯಿಸ್, ಮೈಸೂರು

■ ಉಪ್ಪು ತಿಂದವರು ನೀರು ಕುಡಿಯಲೇಬೇಕು

ಮಾನ್ಯರೆ,

ಉಪ್ಪು ತಿಂದವರು ನೀರು ಕುಡಿಯಬೇಕು ಎಂಬ ಗಾದೆ ಮಾತು ಅಕ್ರಮ ಗಣಿಗಾರಿಕೆಯಲ್ಲಿ ಏಳು ವರ್ಷಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಿರುವ ಗಂಗಾವತಿ ಕ್ಷೇತ್ರದ ಹಾಲಿ ಶಾಸಕ ಜನಾರ್ಧನ ರೆಡ್ಡಿಯವರಿಗೆ ಹೆಚ್ಚು ಸೂಕ್ತವೆನಿಸುತ್ತದೆ. ಒಂದು ಕಾಲದಲ್ಲಿ ಮಹಾರಾಜನಂತೆ ಮೆರೆದು ಬಳ್ಳಾರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಳ್ಳಾರಿ ರಿಪಬ್ಲಿಕ್ ಸ್ಥಾಪಿಸಿ ರಾಜ್ಯದಲ್ಲಿ ಅತ್ಯಂತ ಪ್ರಭಾವಶಾಲಿ ಸಚಿವರಾಗಿಯೂ ಮೆರೆದ ಜನಾರ್ಧನ ರೆಡ್ಡಿ ಅಕ್ರಮ ಗಣಿಗಾರಿಕೆಯ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿ 3–4 ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಿ ಹೊರ ಬಂದಿದ್ದರು. ನಂತರ ಗಂಗಾವತಿ ಕ್ಷೇತ್ರದಲ್ಲಿ ಸ್ಪರ್ಧಿಸಿ ಶಾಸಕರಾಗಿಯೂ ಆಯ್ಕೆ ಆಗಿದ್ದಾರೆ. ಆದರೆ ಇದೀಗ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಹೈದರಾಬಾದಿನ ವಿಶೇಷ ಸಿಬಿಐ ಕೋರ್ಟಿನಿಂದ ಏಳು ವರ್ಷಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಬರೋಬ್ಬರಿ 13 ವರ್ಷಗಳಿಂದ ನಡೆದ ವಿಚಾರಣೆಯಲ್ಲಿ 3,400ಕ್ಕೂ ಹೆಚ್ಚು ದಾಖಲೆಗಳನ್ನು ಪರೀಕ್ಷಿಸಲಾಗಿದ್ದು 219 ಸಾಕ್ಷಿಗಳನ್ನು ವಿಚಾರಣೆಗೆ ಗುರಿಪಡಿಸಲಾಗಿತ್ತು ಎಂದು ಮಾಧ್ಯಮಗಳ ವರದಿ ತಿಳಿಸಿದೆ. ಸಿಬಿಐ ವಿಶೇಷ ನ್ಯಾಯಾಲಯ ನೀಡಿರುವ ಈ ತೀರ್ಪಿನ ವಿರುದ್ಧ ಜನಾರ್ಧನ ರೆಡ್ಡಿ ಹೈದರಾಬಾದಿನ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ (appeal) ಸಲ್ಲಿಸಬಹುದಾಗಿದ್ದು, ಅದು ಜಾಮೀನು ನೀಡುವವರೆಗೂ ಜೈಲಿನಲ್ಲಿರಬೇಕು. ಒಂದು ವೇಳೆ ಶಿಕ್ಷೆಗೆ ತಡೆಯಾಜ್ಞೆ ಸಿಗದಿದ್ದರೆ, ಶಾಸಕ ಸ್ಥಾನದಿಂದ ಅನರ್ಹಗೊಳ್ಳಬಹುದು. ರಾಜ್ಯದ ಓರ್ವ ವರ್ಣರಂಜಿತ ರಾಜಕಾರಣಿಯಾಗಿರುವ ಜನಾರ್ಧನ ರೆಡ್ಡಿಯವರ ಕಹಾನಿ ನಿಜಕ್ಕೂ ಕುತೂಹಲಕಾರಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

■ ಅನುತ್ತೀರ್ಣರಾದ ಮಕ್ಕಳೇ ಆತಂಕಕ್ಕೆ ಒಳಗಾಗಬೇಡಿ

ಮಾನ್ಯರೆ,

ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ಪರಿಶ್ರಮ ಮತ್ತು ಸತತ ಅಭ್ಯಾಸ ನಿಮ್ಮನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲಿ.

ಅನುತ್ತೀರ್ಣರಾದ ವಿದ್ಯಾರ್ಥಿಗಳೇ ನಿರಾಶರಾಗಿ ದುಡುಕಿನ ನಿರ್ಧಾರ ತೆಗೆದುಕೊಳ್ಳಬೇಡಿ. ಶಾಲಾ–ಕಾಲೇಜಿನ ಪರೀಕ್ಷೆಯ ಅಂಕಗಳೇ ಬೇರೆ ! ಜೀವನದ ಅಂಕಗಳೇ ಬೇರೆ! ಕಡಿಮೆ ಅಂಕ ಪಡೆದವರೇ ಎಷ್ಟೋ ಬಾರಿ ಜೀವನ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಾಸ್ ಆಗುತ್ತಾರೆ. ಮತ್ತೆ ಪರೀಕ್ಷೆ ಬರೆದು ಪಾಸ್ ಆಗುವ ಅವಕಾಶ ಖಂಡಿತ ಸಿಗಲಿದೆ. ಹತಾಶೆಯ ಕೈಗೆ ಬುದ್ಧಿ ಕೊಡದೆ ಸಂಯಮದಿಂದ ವರ್ತಿಸಬೇಕು.

ಆತ್ಮೀಯ ಪೋಷಕರೇ, ನೀವು ಸಹ ಇಂತಹ ಸಂದರ್ಭದಲ್ಲಿ ಕೊಂಚ ಸಂಯಮ ವಹಿಸಿ. ಜೀವ ಅಮೂಲ್ಯವಾದದ್ದು. ಬೇರೆ ಎಲ್ಲವನ್ನು ಮುಂದಿನ ದಿನದಲ್ಲಿ ಪಡೆಯಬಹುದು. ಆದರೆ ಹೋದ ಜೀವ, ಕಳೆದ ಸಮಯ ಮತ್ತೆ ವಾಪಸ್ ಬರಲಾರದು. ಎಲ್ಲರಿಗೂ ಶುಭವಾಗಲಿ.

–ಕೃಷ್ಣ ಹೆಗಡೆ, ರಾಜರಾಜೇಶ್ವರಿ ನಗರ, ಮೈಸೂರು,



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದಲೇ ಇನ್ನು ದೇಶ ರಕ್ಷಣೆ

> "ಎಲ್ಲಾ ಪರೀಕ್ಷೆಗಳು ಸಮರ್ಪಕವಾಗಿ ನಡೆದು ಯಶಸ್ವಿಯಾದಲ್ಲಿ ಮುಂದಿನ ವರ್ಷದಿಂದ ಈ ಅಸ್ತ್ರದ ವಾಣಿ ಉತ್ಪಾದನೆ ಆರಂಭವಾಗಿ ಭಾರತೀಯ ಸೇನಾ ಪಡೆಗಳಿಗೆ ಸೇರ್ಪಡೆಯಾಗಲಿವೆ. ಭಾರತಕ್ಕೆ ಬರಬಹುದಾದ ಶತ್ರುಗಳ ಕಠಿಣ ಬೆದರಿಕೆಗಳನ್ನು ಮಾರ್ಕ್–2 (ಎ) ಲೇಸರ್ ಅಸ್ತ್ರವು ಕಡಿಮೆ ಖರ್ಚಿನಲ್ಲಿ ಸಾಟಿಯಿಲ್ಲದ ನಿಖರತೆಯೊಂದಿಗೆ ನಾಶಗೊಳಿಸುವ ಮೂಲಕ ಭಾರತದ ಪ್ರಮುಖ ರಕ್ಷಣಾ ಕೇಂದ್ರಗಳು. ನಗರಗಳನ್ನು ರಕ್ಷಿಸಲಿದೆ. ಭಾರತದ ಆತ್ಮನಿರ್ಭರ ದೃಷ್ಟಿಕೋನಕ್ಕೆ ಪೂರಕವಾಗಿ ಡಿಆರ್‌ಡಿಒ ಈ ಲೇಸರ್ ಅಸ್ತ್ರವನ್ನು ಅಭಿವೃದ್ಧಿಪಡಿಸಿದೆ. ಭಾರತಕ್ಕೆ ಈ ಅಸ್ತ್ರ ಲಭಿಸಿರುವುದು ರಕ್ಷಣಾ ಕ್ಷೇತ್ರದ ಮಹತ್ವದ ಸಂಶೋಧನೆಗಿಂತಲೂ ಹೆಚ್ಚಾಗಿ Star war ಮೊದಲಾದ ಶಕ್ತಿಶಾಲಿ ತಂತ್ರಜ್ಞಾನ ಗಳಿಸುವ ದಿಕ್ಕಿನಲ್ಲಿ ಒಂದು ದೃಢ ಹೆಜ್ಜೆಯಾಗಿದೆ.

ಹಿಂದಿನ ಕಾಲದಲ್ಲಿ ಸೈನಿಕರ ಶಾರೀರಿಕ ಶಕ್ತಿ, ಸಾಮರ್ಥ್ಯ, ಕ್ಷಮತೆಗಳು ಯುದ್ಧಗಳಲ್ಲಿ ಪ್ರಧಾನವಾಗಿದ್ದವು. ಆದರೆ, ಆಧುನಿಕ ಯುದ್ಧಗಳಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ನಿರ್ಣಾಯಕವೆನಿಸಿವೆ.

ಜಗತ್ತು ತೀವ್ರಗತಿಯಲ್ಲಿ ಬದಲಾಗುತ್ತಿದೆ. ತಂತ್ರಜ್ಞಾನ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸಿದೆ. ವಿಶೇಷವಾಗಿ ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳು, ಯುದ್ಧ ನೌಕೆಗಳು, ಕ್ಷಿಪಣಿಗಳು ಮೊದಲಾದ ಸಮರ ಸಾಧನಗಳು ಅತ್ಯಾಧುನಿಕಗೊಳ್ಳುತ್ತಿರುವ ಮಧ್ಯೆಯೇ ಭವಿಷ್ಯದ ಯುದ್ಧಗಳಲ್ಲಿ ಸೇನಾ ಅವಲಂಬನೆಯನ್ನು ಕನಿಷ್ಠಗೊಳಿಸುವ ದಿಕ್ಕಿನಲ್ಲಿ ರಕ್ಷಾ ತಂತ್ರಜ್ಞರು ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಬಳಕೆಯಲ್ಲಿರುವ ಶಸ್ತ್ರಾಸ್ತ್ರಗಳ ಸಂಶೋಧನೆ, ನಿರ್ಮಾಣ, ನಿರ್ವಹಣಾ ವೆಚ್ಚ ಅಧಿಕವಾಗುತ್ತಿದೆ ಸೇನಾ ವೆಚ್ಚವು ಹೆಚ್ಚುತ್ತಿದೆ. ಯುದ್ಧಗಳಲ್ಲಾಗುತ್ತಿರುವ ಸಾವು–ನೋವುಗಳಿಂದ ಮಾನವ ಸಂಪನ್ಮೂಲವು ನಷ್ಟವಾಗುತ್ತಿದೆ. ಸರಕಾರಗಳಿಗೆ ಸೇನೆ, ಶಸ್ತ್ರಾಸ್ತ್ರಗಳಿಗಾಗುವ ವೆಚ್ಚ ಹೊರೆಯಾಗುತ್ತಿದೆ. ಈ ದೃಷ್ಟಿಯಿಂದ ಸರಕಾರಗಳು ಕನಿಷ್ಠ ವೆಚ್ಚದಲ್ಲಿ ಗರಿಷ್ಠ, ಬಲಿಷ್ಠ ರಕ್ಷಣಾ ವ್ಯವಸ್ಥೆಯತ್ತ ಗಮನಹರಿಸಿವೆ. ಇದಕ್ಕೆ ಪೂರಕವಾಗಿ ಭವಿಷ್ಯದ ಯುದ್ಧಗಳಲ್ಲಿ ಡ್ರೋನ್‌ಗಳು ತಮ್ಮ ವಿನಾಶಕಾರಿ ಸಾಮರ್ಥ್ಯದಿಂದ ಯುದ್ಧಗಳ ಫಲಿತಾಂಶಗಳ ಮೇಲೆ ಪರಿಣಾಮ ಬೀರುತ್ತಿವೆ. ಈ ಕಾರಣದಿಂದ ಡ್ರೋನ್‌ಗಳನ್ನು ನಾಶ ಮಾಡುವ ಪ್ರತ್ಯಸ್ತ್ರಗಳ ಶೋಧನೆಯಲ್ಲಿ ರಕ್ಷಣಾ ತಂತ್ರಜ್ಞರು ಗಮನಹರಿಸಿದ್ದಾರೆ.



ಡಿಆರ್‌ಡಿಒ ನಿರ್ಮಿತ ಲೇಸರ್ ಅಸ್ತ್ರ

ಡ್ರೋನ್ ಹಾಗಂದರೇನು?

ಡ್ರೋನ್‌ಗಳು ಮಾನವರಹಿತ ವೈಮಾನಿಕ ವಾಹನಗಳು (ಯುಎವಿ) ಅಥವಾ ಪೈಲಟ್‌ರಹಿತ ವಿಮಾನಗಳಿದ್ದಂತೆ. ಬಳಕೆಯ ಉದ್ದೇಶಕ್ಕನುಗುಣವಾಗಿ ಡ್ರೋನ್‌ಗಳ ವಿನ್ಯಾಸ, ಆಕಾರ ಹಾಗೂ ಗಾತ್ರಗಳು ಭಿನ್ನವಾಗಿರುತ್ತವೆ. ಸೇನಾ ಉದ್ದೇಶಕ್ಕೆ ಬಳಸುವ ಡ್ರೋನ್‌ಗಳು ಅತ್ಯಾಧುನಿಕವಾಗಿವೆ. ಇವುಗಳನ್ನು ವಿಚಕ್ಷಣೆ, ಕಣ್ಗಾವಲು, ಯುದ್ಧ ಕಾರ್ಯಾಚರಣೆಗಳಿಗೆ ಬಳಸಲಾಗುತ್ತಿದೆ. ಛಾಯಾಗ್ರಹಣ, ವಿಡಿಯೋಗ್ರಾಫಿ ಮೊದಲಾದ ಮನರಂಜನಾ ಉದ್ದೇಶಗಳಿಗೆ ಗ್ರಾಹಕ ಡ್ರೋನ್‌ಗಳಿವೆ. ವಾಣಿಜ್ಯ (ಕಾಮರ್ಸ್) ಡ್ರೋನ್‌ಗಳನ್ನು ಭೂ ಸಮೀಕ್ಷೆ, ಕೈಗಾರಿಕೆ, ನಿರ್ಮಾಣ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. ಇದೇ ರೀತಿ ಕೃಷಿ, ವಿತರಣೆ, ರೇಸ್‌ಗಳು ಹಾಗೂ ರಕ್ಷಣಾ ಕಾರ್ಯಗಳಲ್ಲಿ ಡ್ರೋನ್‌ಗಳು ಪರಿಣಾಮಕಾರಿಯಾಗುತ್ತಿವೆ. ಪ್ರಸ್ತುತ ಡ್ರೋನ್‌ಗಳು ಯುದ್ಧಗಳಲ್ಲಿ ಸುದ್ದಿ ಮಾಡುತ್ತಿವೆ. ನಿಖರ ವಿನಾಶಕಾರಿ ಪರಿಣಾಮ, ಕಡಿಮೆ ವೆಚ್ಚದಿಂದ ಭಾರಿ ಬೇಡಿಕೆಯ ಶಸ್ತ್ರವಾಗಿವೆ.

ರಷ್ಯಾ–ಉಕ್ರೇನ್ ಮಧ್ಯೆ ನಡೆಯುತ್ತಿರುವ ಯುದ್ಧದಲ್ಲಿ ರಷ್ಯಾವು ಇರಾನ್‌ನಲ್ಲಿ ತಯಾರಾದ ಕಾಮಿಕಾಝ್ ಡ್ರೋನ್ ಬಳಸುತ್ತಿದ್ದರೆ, ಉಕ್ರೇನ್ ಸೇನೆಯು ಟರ್ಕಿಯ ಬೈರೆಕ್ಟರ್ ಡ್ರೋನ್‌ಗಳನ್ನು ಪ್ರಯೋಗಿಸಿ ರಷ್ಯಾಕ್ಕೆ ಭಾರಿ ನಷ್ಟ ಉಂಟು ಮಾಡಿದೆ. ಇಸ್ರೇಲ್ ಲೆಬನಾನ್‌ನಲ್ಲಿರುವ ಹೆಜ್ಬುಲ್ ಉಗ್ರರನ್ನು ನಾಶ ಮಾಡಲು ಲೆಬನಾನ್ ಮೇಲೆ ದಾಳಿ ಮಾಡಿತು. ಆದರೆ ಹೆಜ್ಬುಲ್ಲಾಗಳು ಪ್ರಯೋಗಿಸಿದ ತೀರಾ ಸಾಮಾನ್ಯವಾದ ಸಾವಿರಾರು ಸಂಖ್ಯೆಯ ಡ್ರೋನ್‌ಗಳು ಇಸ್ರೇಲ್‌ಗೆ ಭಾರಿ ನಷ್ಟ ಉಂಟು ಮಾಡಿದವು. ಪ್ರಸ್ತುತ ಅಮೆರಿಕವು ಕೆಂಪು ಸಮುದ್ರದಲ್ಲಿ ಯೆಮೆನ್ ಬೆಂಬಲಿತ ಹೌತಿ ಸಮುದ್ರ ಕಳ್ಳರ ಮೇಲೆ ಡ್ರೋನ್ ದಾಳಿ ನಡೆಸುತ್ತಿದೆ. ಯುದ್ಧ ವಿಮಾನ, ಕ್ಷಿಪಣಿಗಳು, ಹೆಲಿಕಾಪ್ಟರ್‌ಗಳಿಗಿಂತ ಕಡಿಮೆ ಖರ್ಚಿನಲ್ಲಿ ಡ್ರೋನ್‌ಗಳನ್ನು ನಿರ್ಮಿಸಬಹುದು. ಕೆಲವು ಮಾದರಿಯ ಡ್ರೋನ್‌ಗಳು ಸ್ವಯಂ ಸ್ಫೋಟಿಸುತ್ತದೆ. ಸ್ವಾರ್ಮ್ (SWARM) ಡ್ರೋನ್‌ಗಳು ಮಿಡಿತೆಗಳಂತೆ ಗುಂಪಾಗಿ ದಾಳಿ ಮಾಡಿದರೆ, ಶತ್ರುಗಳ ವಾಯು ರಕ್ಷಣಾ ವ್ಯವಸ್ಥೆ ಗಲಿ–ಬಿಲಿಗೊಳ್ಳುತ್ತದೆ. ಇಸ್ರೇಲ್ ತನ್ನ ಗಡಿಗಳನ್ನು ವೈಮಾನಿಕ, ಕ್ಷಿಪಣಿ ಮತ್ತಿತರರ ಶತ್ರು ದಾಳಿಗಳಿಂದ ರಕ್ಷಿಸಲು ಲೇಸರ್ ತಂತ್ರಜ್ಞಾನ ಆಧಾರಿತ ಐರನ್ ಡೋಂ ಮತ್ತು ಐರನ್ ಬೀಂ ವ್ಯವಸ್ಥೆಯನ್ನು ನಿಯೋಜಿಸಿತ್ತು. ಆದರೆ ಹೆಜ್ಬುಲ್ಲಾಗಳು ಸಾವಿರಾರು ಡ್ರೋನ್‌ಗಳನ್ನು ಪ್ರಯೋಗಿಸಿದ ಸಂದರ್ಭದಲ್ಲಿ ಈ ಸ್ವಯಂ ಚಾಲಿತ ವ್ಯವಸ್ಥೆ ಬಹುತೇಕ ವಿಫಲಗೊಂಡಿತ್ತು. ಪ್ರಸ್ತುತ ಯುದ್ಧಗಳಲ್ಲಿ ಡ್ರೋನ್‌ಗಳನ್ನು ಭಾರಿ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಡ್ರೋನ್‌ಗಳನ್ನು ಹೊಡೆದುರುಳಿಸಲು ಕ್ಷಿಪಣಿ ಬಳಕೆ ದುಬಾರಿಯಾಗುತ್ತದೆ. ಒಂದು ರೀತಿಯಲ್ಲಿ ಉಗುರಿನಿಂದ ಚಿವುಟಿ ಹಾಕಬಹುದಾದ್ದಕ್ಕೆ ಕೊಡಲಿಯಿಂದ ತೆಗೆದಂತಾಗುತ್ತದೆ. ಆದ್ದರಿಂದ ಸರಿಯಾದ ಪ್ರತ್ಯಸ್ತ್ರವಿಲ್ಲದಿದ್ದರೆ ಡ್ರೋನ್ ಹೊಂದಿರುವ ದೇಶಗಳು ಯುದ್ಧಗಳಲ್ಲಿ ಮೇಲುಗೈ ಸಾಧಿಸಲಿವೆ. ಡ್ರೋನ್‌ಗಳನ್ನು ನಾಶಪಡಿಸಲು ಕಡಿಮೆ ಖರ್ಚಿನ ಪರ್ಯಾಯ ರಕ್ಷಣಾ ವ್ಯವಸ್ಥೆ ನಿರ್ಮಿಸಲು ಸರಕಾರಗಳು, ರಕ್ಷಣಾ ಪರಿಣತರು ಅನ್ವೇಷಣೆಯನ್ನು ಈಗಾಗಲೇ ಆರಂಭಿಸಿದ್ದಾರೆ. ಕೆಲವು ದೇಶಗಳು, ಡ್ರೋನ್ ಅದರ ಸಂಪರ್ಕ ಜಾಲ ವ್ಯವಸ್ಥೆ ನಾಶಪಡಿಸುವ ಆಯುಧಗಳನ್ನು ಕಂಡುಹಿಡಿದಿದ್ದಾರೆ. ಬಲಾಢ್ಯ ದೇಶಗಳು ಎಲ್ಲ ಮಾದರಿಯ ಡ್ರೋನ್‌ಗಳನ್ನು ನಾಶಪಡಿಸುವ ಕಡಿಮೆ ವೆಚ್ಚದ ಆಯುಧಗಳ ಅನ್ವೇಷಣೆಯಲ್ಲಿವೆ. ಡ್ರೋನ್‌ಗಳನ್ನು ನಿಷ್ಕ್ರಿಯ ಅಥವಾ ನಾಶಪಡಿಸಲು ಪ್ರಸ್ತುತ ಇರುವ ಮಿತವ್ಯಯಕಾರಿ, ಪರಿಣಾಮಕಾರಿ ಏಕೈಕ ಅಸ್ತ್ರ ಲೇಸರ್ (LASER) ಕಿರಣಾಸ್ತ್ರವಾಗಿದೆ. ಈ ಅಸ್ತ್ರದಿಂದ ರಕ್ಷಿಸಿಕೊಳ್ಳುವ ಡ್ರೋನ್ ಅನ್ನು ಇದುವರೆಗೆ ಯಾವುದೇ ದೇಶ ಕಂಡುಹಿಡಿದಿಲ್ಲ.

ಲೇಸರ್ ಶಸ್ತ್ರ ಕಾರ್ಯ ವಿಧಾನ

ಡ್ರೋನ್‌ಗಳನ್ನು ನಾಶಪಡಿಸಲಿರುವ ಡೈರೆಕ್ಟೆಡ್ ಎನರ್ಜಿ ವೆಪನ್ (ಡಿಇಡಬ್ಲ್ಯೂ) ಅಂದರೆ ಪ್ರಖರ ವಿದ್ಯುತ್ ಅಥವಾ ಯಾವುದೇ ಶಕ್ತಿಯನ್ನು ಲೇಸರ್ ಕಿರಣದ ಮೂಲಕ ಒಂದು ಅಥವಾ ಒಂದೇ ಬಾರಿ ಹಲವು ಗುರಿಗಳನ್ನು ನಾಶಪಡಿಸುವುದು. ಈ ವಿಧಾನದಲ್ಲಿ ಕ್ಷಿಪಣಿ ಅಥವಾ ಬೇರಾವುದೆ ವಾಹಕಗಳ ಅಗತ್ಯವಿರುವುದಿಲ್ಲ. ಈ ಸಾಧನಾ ಮಿತವ್ಯಯ ಕೂಡ.

ಒಮ್ಮೆ ಕಿರಣಗಳ ಶಕ್ತಿ ಪ್ರಹಾರಕ್ಕೆ ಬೇಕಾದ ವ್ಯವಸ್ಥೆಯಾದ ನಂತರ ಕೇವಲ ಶಕ್ತಿಯ ಉತ್ಪಾದನಾ ಖರ್ಚು ಮಾತ್ರವಿರುತ್ತದೆ. ಸ್ಫೋಟಕದ ಸದ್ದು ಇಲ್ಲ, ನಿಖರ ಗುರಿ, ಮಿತ ವ್ಯಯಕರ, ಅಸೀಮಿತ ತೀಕ್ಷ್ಣ ಬೆಂಕಿಯ ಕಿರಣ, ಸಂಕ್ಷಿಪ್ತ ಕ್ಷಣದಲ್ಲಿ ನಿಗದಿತ ಗುರಿಯನ್ನು ನಿಖರವಾಗಿ ನಾಶಪಡಿಸುವುದು. ಇವು ಈ ಲೇಸರ್ ಶಸ್ತ್ರದ ವೈಶಿಷ್ಟ್ಯಗಳಾಗಿವೆ.

ಭಾರತಕ್ಕೆ ಲೇಸರ್ ಶಸ್ತ್ರಗಳ ಅನಿವಾರ್ಯತೆ

ಭಾರತದ ಗಡಿಗಳಲ್ಲಿ ಧೂರ್ತ ಮನೋಭಾವದ ಶಕ್ತಿಶಾಲಿ ರಾಷ್ಟ್ರವಾಗಿರುವ ಚೀನಾ, ಪಾಶವಿ ಮನೋಭಾವದ ಪಾಕಿಸ್ತಾನ ಹಾಗೂ ವಿಶ್ವಾಸಘಾತಕ ಬಾಂಗ್ಲಾದೇಶಗಳಿರುವುದರಿಂದ ಸದಾ ಕಾಲ ಯುದ್ಧ ಸನ್ನದ್ಧವಾಗಿರಬೇಕಾದ ಪರಿಸ್ಥಿತಿ ಇದೆ. ಭಾರತಕ್ಕೆ ಬಹುಕ್ಷೇತ್ರದಲ್ಲಿ ಬಹು ಆಯಾಮದ ಹೋರಾಟ ನಡೆಸಬೇಕಾದ ಅನಿವಾರ್ಯತೆ ಇದೆ. ಭಾರತವು ಪಾಕಿಸ್ತಾನದ ಸೇನೆ ಮಾತ್ರವಲ್ಲ ಡ್ರೋನ್‌ಗಳಂತಹ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿರುವ ಭಯೋತ್ಪಾದಕ ಸಂಘಟನೆಗಳೊಂದಿಗೂ ಸಂಘರ್ಷ ನಡೆಸಬೇಕಾಗಿದೆ. ಈ ವರ್ಷ ಇದುವರೆಗೆ ಸುಮಾರು 50ಕ್ಕೂ ಹೆಚ್ಚು ಡ್ರೋನ್‌ಗಳು ಪಾಕ್‌ನಿಂದ ಭಾರತದ ಗಡಿಯೊಳಗೆ ಬಂದಿವೆ.

ಪ್ರಬಲ ರಾಷ್ಟ್ರ ಚೀನಾ ಮುಂಬರುವ ಯುದ್ಧಗಳಲ್ಲಿ ಭಾರಿ ಸಂಖ್ಯೆಯಲ್ಲಿ ಡ್ರೋನ್‌ಗಳನ್ನು ಪ್ರಯೋಗಿಸಲು ಸಿದ್ಧತೆ ನಡೆಸುತ್ತಿದೆ. ವಿವಿಧ ಮಾದರಿಯ ವಿವಿ ಧೋದ್ದೇಶಗಳ ಐವತ್ತಕ್ಕೂ ಹೆಚ್ಚು ಬಗೆಯ ಡ್ರೋನ್‌ಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ತಯಾರಿಸುತ್ತಿದೆ. ಇದಕ್ಕೆ ಚೀನಾದಲ್ಲಿರುವ ಖಾಸಗಿ ಸಂಸ್ಥೆಗಳು ನೆರವು ನೀಡುತ್ತಿವೆ. 2026ರ ಹೊತ್ತಿಗೆ ಶತ್ರು ರಾಷ್ಟ್ರಗಳ ರಾಡಾರ್‌ಗಳಿಗೂ ಸಿಗದೆ ಅಗೋಚರವಾಗಿ ಕಾರ್ಯಾಚರಿಸುವಂತಹ ಡ್ರೋನ್‌ಗಳನ್ನು ತಯಾರಿಸಲಿದೆ.

ಪ್ರಸ್ತುತ ಚೀನಾ ಬಳಿ ಒಂದು ಲಕ್ಷ ಅಡಿ ಎತ್ತರದಲ್ಲಿ ಮ್ಯಾಕ್–3 ವೇಗದಲ್ಲಿ ಸಾಗುವ ಅತ್ಯಾಧುನಿಕವಾದ WZ-8E ಹೈಪರ್ ಸಾನಿಕ್ ಡ್ರೋನ್‌ಗಳಿವೆ. ಇವು ಶತ್ರು ರಾಷ್ಟ್ರಗಳ ರಕ್ಷಣಾ ಕವಚವನ್ನು ಭೇದಿಸಿ ಸಾಕಷ್ಟು ಒಳಕ್ಕೆ ನುಗ್ಗಿ ದಾಳಿ ನಡೆಸುತ್ತವೆ. ಸಿಹೆಚ್–9 ಎಂಬ ಡ್ರೋನ್ ವಿವಿಧ ಬಗೆಯ ಶಸ್ತ್ರಗಳನ್ನು ಹೊತ್ತು ನಿರಂತರವಾಗಿ 40 ಗಂಟೆಗಳ ಕಾಲ ಆಗಸದಲ್ಲಿದ್ದೇ ಕಾರ್ಯಾಚರಿಸುತ್ತವೆ. ಇಂತಹ ಡ್ರೋನ್‌ಗಳು ಸಾವಿರಾರು ಸಂಖ್ಯೆಯಲ್ಲಿ ಏಕಾಲದಲ್ಲಿ ರಾಡಾರ್ ಕಣ್ಣಿಗೆ ಬೀಳದೆ ದಾಳಿ ನಡೆಸಿದರೆ ವೈರಿಯ ವಿನಾಶ ನಿಶ್ಚಿತ. ಚೀನಾ ಇಂತಹ ವ್ಯವಸ್ಥೆ ರೂಪಿಸಲು ವ್ಯಸ್ತವಾಗಿದೆ. ಚೀನಾದ ಪ್ರಥಮ, ಶತ್ರು ಭಾರತ. ಆದ್ದರಿಂದ ಭಾರತವೀಗ ಸುಮ್ಮನೆ ಇರುವಂತಿಲ್ಲ. ಇವುಗಳಿಂದ ರಕ್ಷಣೆಗೆ ಪ್ರತಿ ರಕ್ಷಣಾ ವ್ಯವಸ್ಥೆಯನ್ನು ಮಾಡಬೇಕಾಗಿದ್ದು, ಈ ನಿಟ್ಟಿನಲ್ಲಿ ಭಾರತಕ್ಕೆ ಇತ್ತೀಚೆಗೆ ಮಹತ್ವದ ಯಶಸ್ಸು ಲಭಿಸಿದೆ.

ಭಾರತದಿಂದ ಯಶಸ್ವಿ ಲೇಸರ್ ಶಸ್ತ್ರ ಪರೀಕ್ಷೆ

ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ದೇಶದ ರಕ್ಷಣೆಯ ದೃಷ್ಟಿಯಿಂದ ಮಹತ್ವದ ಸಾಧನೆ ಮಾಡಿದೆ. ರಕ್ಷಾ ಕ್ಷೇತ್ರದಲ್ಲಿ ಆತ್ಮನಿರ್ಭರವಾಗಬೇಕೆಂಬ ದಿಕ್ಕಿನಲ್ಲಿ ಭಾರಿ ಯಶಸ್ಸು ಸಾಧಿಸಿದೆ. ಭಾರತವೀಗ ಲೇಸರ್ ಶಸ್ತ್ರವಿರುವ ನಾಲ್ಕು ರಾಷ್ಟ್ರಗಳಾದ ಅಮೇರಿಕ, ರಷ್ಯಾ, ಚೀನಾ ಮತ್ತು ಇಸ್ರೇಲ್‌ನ ಗುಂಪಿಗೆ ಐದನೇ ರಾಷ್ಟ್ರವಾಗಿ ಸೇರ್ಪಡೆಯಾಗಿದೆ. ಈ ಲೇಸರ್ ಶಸ್ತ್ರವನ್ನು ನಿರ್ಮಿಸಲು ವಿದೇಶಗಳಿಂದ ಯಾವುದೇ ರೀತಿಯ ತಂತ್ರಜ್ಞಾನವಾಗಲೀ, ಬಿಡಿ ಭಾಗಗಳಾಗಲೀ ಎರವಲು ಪಡೆಯದೇ, ಖರೀದಿಸದೆ ಡಿಆರ್‌ಡಿಓ ವಿಜ್ಞಾನಿಗಳೇ ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಡಿಆರ್‌ಡಿಓದ ಈ ಸಾಧನೆಗೆ ಭಾರತೀಯರು ಹೆಮ್ಮೆ ಪಟ್ಟು ಸಂಭ್ರಮಿಸಬೇಕಾಗಿದೆ. ವಿಜ್ಞಾನಿಗಳನ್ನು ಅಭಿನಂದಿಸಬೇಕಾಗಿದೆ. ಈ ಅತ್ಯಂತ ಮಿತವ್ಯಯದ ಭಯಾನಕ ಅಸ್ತ್ರ ಅಭಿವೃದ್ಧಿಪಡಿಸಿದ ಡಿಆರ್‌ಡಿಒ ಯಾವುದೇ ಹೇಳಿಕೆ ನೀಡಲಿಲ್ಲ. ಡಿಆರ್‌ಡಿಒ ಒಂದು ವೀಡಿಯೋ ಬಿಡುಗಡೆ ಮಾಡಿತು. ಇದರಲ್ಲಿ ದಿನಾಂಕ 13.4.2025 ರಂದು ಆಂಧ್ರಪ್ರದೇಶದ ಕರ್ನೂಲ್‌ನಲ್ಲಿರುವ ರಾಷ್ಟ್ರೀಯ ಮುಕ್ತವಾಯು ಶ್ರೇಣಿಯಲ್ಲಿ (NOAR) ಲೇಸರ್ ಡೈರೆಕ್ಟೆಡ್ ಎನರ್ಜಿ ವೆಪನ್‌ನ (ಡಿಇಡಬ್ಲ್ಯು) ಸಫಲ ಪರೀಕ್ಷೆ ನಡೆಯಿತು. ಇದೊಂದು ಟ್ರಕ್ ಮೌಂಟೆಡ್ ಸಾಧನವಾಗಿದೆ. ಇದರಲ್ಲಿ ಲೇಸರ್ ಕಿರಣವನ್ನು ಹೊರಸೂಸುವ ಭಾಗವೂ ಸ್ವಯಂಚಾಲಿತವಾಗಿ ತಿರುಗುತ್ತಾ ತನ್ನ ಗುರಿಯನ್ನು ಪತ್ತೆ ಹಚ್ಚುತ್ತದೆ. ಇದರಲ್ಲಿರುವ ವಿಶೇಷ ವ್ಯವಸ್ಥೆಯು ಗುರಿಯನ್ನು ನಿಖರವಾಗಿ ಗುರುತಿಸಿ ಅದರ ಅಥವಾ ಅವುಗಳ ಮೇಲೆ ತೀಕ್ಷ್ಣವಾದ ಲೇಸರ್ ಬೀಮ್ (ಕಿರಣ) ಪ್ರಯೋಗಿಸುತ್ತದೆ. ಕೆಲವೇ ಕ್ಷಣಗಳಲ್ಲಿ ಈ ಕಿರಣ ಶಸ್ತ್ರವು ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿನ ಡ್ರೋನ್‌ಗಳು, ಕ್ಷಿಪಣಿಗಳು, ಮಾನವ ರಹಿತ ವೈಮಾನಿಕ ವಾಹನಗಳನ್ನು (ಯುಎವಿ) ನಾಶಪಡಿಸಿತು. ಪ್ರತ್ಯೇಕವಾಗಿ ಡ್ರೋನ್‌ಗಳಲ್ಲಿರುವ ಕ್ಯಾಮರಾಗಳು, ಸಂವೇದಕಗಳನ್ನು ಬೆಳಕಿನ ವೇಗದಲ್ಲಿ ಹೊಡೆದು ಸುಟ್ಟು ಕರಕಲಾಗಿಸಿತು. ಅದರಲ್ಲಿ ಅಳವಡಿಸಿದ ಸ್ಫೋಟಕಗಳನ್ನು ಭಸ್ಮಗೊಳಿಸಿತು. ಡಿಆರ್‌ಡಿಒದ ಸೆಂಟರ್ ಫಾರ್ ಹೈ ಎನರ್ಜಿ ಸಿಸ್ಟಮ್ಸ್ ಆಂಡ್ ಸೈನ್ಸ್‌ನಿಂದ ಅಭಿವೃದ್ಧಿಪಡಿಸಿರುವ ಈ ಲೇಸರ್ DW-MARK-2 (A) ಅಸ್ತ್ರವು ಪ್ರಯೋಗಾರ್ಥ ಪರೀಕ್ಷೆಯಲ್ಲಿ ಯಶಸ್ವಿಯಾಗಿದೆ. ಬ್ರಹ್ಮೋಸ್, ನಾಗ್, ಆಕಾಶ್, ಅಗ್ನಿ ಮೊದಲಾದ ಕೋಟ್ಯಾಂತರ ರೂ. ವೆಚ್ಚದಲ್ಲಿ ನಿರ್ಮಾಣವಾಗುವ ಸಾಂಪ್ರದಾಯಿಕ ಕ್ಷಿಪಣಿ ವ್ಯವಸ್ಥೆಗಳಿಗಿಂತ ಮಾರ್ಕ್ 2ಎ ಅತ್ಯಂತ ಮಿತವ್ಯಯಕರವಾಗಿದೆ. ಪ್ರತಿ ಬಾರಿ ಈ ಶಸ್ತ್ರದ ಬಳಕೆಗೆ ಕೇವಲ ರೂ. 200ರಿಂದ 300ರಷ್ಟು ಖರ್ಚಾಗುವುದು.

ಇಂತಹ ಶಸ್ತ್ರದ ಪರೀಕ್ಷೆಯನ್ನು ಭಾರತವು ಈ ಹಿಂದೆಯೂ ಮಾಡಿತ್ತು. ಮೊದಲ ಪರೀಕ್ಷೆಯಲ್ಲಿ 2 ಕಿಲೋ ವ್ಯಾಟ್ ನಂತರ ಹತ್ತು ಕಿಲೋವ್ಯಾಟ್ ಸಾಮರ್ಥ್ಯದ ಡಿಇಡಬ್ಲ್ಯು ಸುಮಾರು 1.5 ಕಿ.ಮೀ. ದೂರದ ಶತ್ರು ಸಾಧನ ಗಳನ್ನು ಹೊಡೆದು ಹಾಕುವಲ್ಲಿ ಯಶಸ್ವಿ ಯಾಗಿತ್ತು. ಈ ಬಾರಿ 30 ಕಿ.ವ್ಯಾಟ್ ಶಕ್ತಿಯ ಡಿಇಡಬ್ಲ್ಯು ಅಸ್ತ್ರವು 3.5 ಕಿ.ಮೀ. ದೂರದ ಗುರಿಯನ್ನು ಹೊಡೆದು ಕೆಡವಿದೆ. 5 ಕಿ.ಮೀ. ವರೆಗಿನ ವ್ಯಾಪ್ತಿಯುಳ್ಳ ಮಾರ್ಕ್–2 (ಎ) ಚೀನಾದ ಲೇಸರ್ ಅಸ್ತ್ರಕ್ಕೆ ಪ್ರಬಲ ಪ್ರತಿಸ್ಪರ್ಧಿಯಾಗಿದೆ. ಇದರ ಸಾಮರ್ಥ್ಯ ವನ್ನು ಇನ್ನಷ್ಟು ಹೆಚ್ಚಿಸುವ ಮೂಲಕ 50 ರಿಂದ 100 ಕಿಲೋವ್ಯಾಟ್ ಶಕ್ತಿಯ ಶಸ್ತ್ರ ತಯಾರಿಯ ಯತ್ನಗಳು ನಡೆದಿವೆ ಎಂದು ಡಿಆರ್‌ಡಿಒ ಬಹಿರಂಗಪಡಿಸಿದೆ. ಸ್ವಯಂ ನಿರ್ಧಾರದ ಸಾಮರ್ಥ್ಯ, ಸದ್ದಿಲ್ಲದೆ ಸಂಚಲನ ಬೆಳಕಿನ ವೇಗದಲ್ಲಿ ತೀಕ್ಷ್ಣ ಹೊಡೆತ ಈ ಮೂಲಕ ಫಿಕ್ಸೆಡ್ ವಿಂಗ್ ಡ್ರೋನ್‌ನ ನಾಶ, ಬಹು ಡ್ರೋನ್‌ಗಳ ಏಕಕಾಲದಲ್ಲಿ ನಾಶ, ಗುರಿಗಳನ್ನು ಗುರುತಿಸಿದ ತಕ್ಷಣ ತೀಕ್ಷ್ಣವಾದ ಅಗ್ನಿಕಿರಣವನ್ನು ಪ್ರಯೋಗಿಸಿ ಎಲ್ಲವನ್ನು ಸುಟ್ಟು ಭಸ್ಮ ಮಾಡುತ್ತದೆ. ಪರಶಿವನ ಮೂರನೇ ಕಣ್ಣಿನಂತೆ ಈ ಅಸ್ತ್ರ ಕಾರ್ಯಾಚರಿಸುತ್ತದೆ. ಈ ರೀತಿ ಮಾರ್ಕ್–2 (ಎ) ಲೇಸರ್ ಶಸ್ತ್ರವು ಕ್ಷಣಮಾತ್ರದಲ್ಲಿ ಕೋಟ್ಯಾಂತರ ರೂ. ಬೆಲೆಯ ಡ್ರೋನ್ ಕ್ಷಿಪಣಿಗಳನ್ನು ಕೆಲವೇ ನೂರು ರೂ. ಖರ್ಚಿನಲ್ಲಿ ನಾಶಪಡಿಸುವುದು. ಈ ಅಸ್ತ್ರವನ್ನು ಡಿಆರ್‌ಡಿಒ ಇನ್ನಷ್ಟು ಪರೀಕ್ಷೆಗೆ ಒಳಪಡಿಸಿ ಇನ್ನಷ್ಟು ಸಾಮರ್ಥ್ಯ ಹೆಚ್ಚಿಸುವ ಯತ್ನದಲ್ಲಿದೆ.

ಎಲ್ಲಾ ಪರೀಕ್ಷೆಗಳು ಸಮರ್ಪಕವಾಗಿ ನಡೆದು ಯಶಸ್ವಿಯಾದಲ್ಲಿ ಮುಂದಿನ ವರ್ಷದಿಂದ ಈ ಅಸ್ತ್ರದ ಉತ್ಪಾದನೆ ಆರಂಭವಾಗಿ ಭಾರತೀಯ ಸೇನಾ ಪಡೆಗಳಿಗೆ ಸೇರ್ಪಡೆಯಾಗಲಿವೆ. ಭಾರತಕ್ಕೆ ಬರಬಹುದಾದ ಶತ್ರುಗಳ ಕಠಿಣ ಬೆದರಿಕೆಗಳನ್ನು ಮಾರ್ಕ್ –2 (ಎ) ಲೇಸರ್ ಅಸ್ತ್ರವು ಕಡಿಮೆ ಖರ್ಚಿನಲ್ಲಿ ಸಾಟಿಯಿಲ್ಲದ ನಿಖರತೆಯೊಂದಿಗೆ ನಾಶಗೊಳಿಸುವ ಮೂಲಕ ಭಾರತದ ಪ್ರಮುಖ ರಕ್ಷಣಾ ಕೇಂದ್ರಗಳು. ನಗರಗಳನ್ನು ರಕ್ಷಿಸಲಿದೆ. ಭಾರತದ ಆತ್ಮನಿರ್ಭರ ದೃಷ್ಟಿಕೋನಕ್ಕೆ ಪೂರಕವಾಗಿ ಡಿಆರ್‌ಡಿಒ ಈ ಲೇಸರ್ ಅಸ್ತ್ರವನ್ನು ಅಭಿವೃದ್ಧಿಪಡಿಸಿದೆ. ಭಾರತಕ್ಕೆ ಈ ಅಸ್ತ್ರ ಲಭಿಸಿರುವುದು ರಕ್ಷಣಾ ಕ್ಷೇತ್ರದ ಮಹತ್ವದ ಸಂಶೋಧನೆಗಿಂತಲೂ ಹೆಚ್ಚಾಗಿ STAR WAR ಮೊದಲಾದ ಶಕ್ತಿಶಾಲಿ ತಂತ್ರಜ್ಞಾನ ಗಳಿಸುವ ದಿಕ್ಕಿನಲ್ಲಿ ಒಂದು ದೃಢ ಹೆಜ್ಜೆಯಾಗಿದೆ. DRDOದ CHESS ವಿಭಾಗದ ಅಧ್ಯಕ್ಷರಾಗಿರುವ ಡಾ.ಸಮೀರ್ ವಿ. ಕಾಮತ್‌ರವರು 'ಇದು ಭಾರತದ 'ಸ್ಟಾರ್ ವಾರ್' ಪಯಣದ ಆರಂಭ' ಎಂದು ಹೇಳಿದ್ದಾರೆ. ಭಾರತಕ್ಕೆ ಈ ಲೇಸರ್ ಅಸ್ತ್ರ ನೀಡಿರುವ ಡಿಆರ್‌ಡಿಒದ ಎಲ್ಲಾ ವಿಜ್ಞಾನಿಗಳಿಗೆ ಭಾರತೀಯರಾದ ನಾವು ಹೆಮ್ಮೆಯಿಂದ ಸೆಲ್ಯೂಟ್ ನೀಡಿ ಗೌರವಿಸೋಣ.

ಬಸ್ಸು ಹತ್ತಿಸುವ ನೆಪದಲ್ಲಿ ಮಾಜಿ ಸೈನಿಕನ ಪತ್ನಿಯ ಬಂಗಾರದ ಸರ ಕದ್ದು ಪರಾರಿ

ಮೈಸೂರು,ಮೇ8(ಜಿಎ)–ಬಸ್ ಹತ್ತಿಸುವ ನೆಪದಲ್ಲಿ ಮಾಜಿ ಸೈನಿಕರ ಪತ್ನಿಯ ಚಿನ್ನದ ಸರ ಕಸಿದು ಪರಾರಿಯಾಗಿರುವ ಘಟನೆ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ಸಂಭವಿಸಿದೆ.

ಮೈಸೂರಿನ ರಾಮಕೃಷ್ಣನಗರದ ನಿವಾಸಿ, ಮಾಜಿ ಸೈನಿಕರೂ ಆದ ಸಿದ್ದಣ್ಣಯ್ಯ ಅವರ 79 ವರ್ಷದ ಪತ್ನಿ ಕೆ.ಎಸ್.ರಾಜಮ್ಮ 70 ಗ್ರಾಂ ಚಿನ್ನದ ಸರ ಕಳೆದುಕೊಂಡವರು.

ಘಟನೆ ವಿವರ: ಸಿದ್ದಣ್ಣಯ್ಯ ಪತ್ನಿ ರಾಜಮ್ಮ ಅವರು ಮೈಸೂರಿನಿಂದ ಹಾಸನದ ಮಗನ ಮನೆಗೆ ತೆರಳಲು ಏ.28 ರಂದು ರಾಮಕೃಷ್ಣನಗರದಿಂದ ಮೈಸೂರಿನ ನಗರ ಬಸ್ ನಿಲ್ದಾಣಕ್ಕೆ ನಗರ ಸಾರಿಗೆ ಮೂಲಕ ತಲುಪಿ ನಂತರ ಅಲ್ಲಿಂದ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಆಟೋ ಮೂಲಕ ಬಂದಿದ್ದಾರೆ. ನಂತರ 2.15ರ ಸಮಯದ ಹಾಸನ ಬಸ್ ತಪ್ಪಿದ ಕಾರಣ 3.25ರ ವೇಳೆಗೆ ನಾನ್‌ಸ್ಟಾಪ್ ಬಸ್ ಮೂಲಕ ಹಾಸನಕ್ಕೆ ತೆರಳಲು ನಿರ್ಧರಿಸಿದ್ದಾರೆ.

ಬಸ್ ಹತ್ತುವ ವೇಳೆ ನೂಕು ನುಗ್ಗಲು ಉಂಟಾದಾಗ ಸಿದ್ದಣ್ಣಯ್ಯ ಅವರಿಗೆ ಕೆಲವರು 'ನೀವು ಬಸ್ ಹತ್ತಿ ಸಾರ್ ನಾವು ಮೇಡಂ ಹತ್ತಿಸುತ್ತೇವೆ' ಎಂದು ಹೇಳಿದ್ದಾರೆ. ಈ ಮಾತು ಕೇಳುತ್ತಿದ್ದಂತೆ ಸಿದ್ದಣ್ಣಯ್ಯ ಬಸ್ ಒಳಗೆ ತೆರಳಿದ್ದಾರೆ. ಬಸ್ ಹತ್ತಿ ಕೆಲವು ನಿಮಿಷಗಳು ರಾಜಮ್ಮ ಬಸ್ ಒಳಗೆ ಬರಲಿಲ್ಲ. ನಂತರ ಬಂದಿದ್ದಾರೆ. ಸಿದ್ದಣ್ಣಯ್ಯ ಅವರು ತಮ್ಮ ಪತ್ನಿ ನೋಡಿ ಕುತ್ತಿಗೆಯಲ್ಲಿ ಸರ ಇಲ್ಲದಿರುವುದನ್ನು ಗಮನಿಸಿ ಪತ್ನಿಯನ್ನು ಪ್ರಶ್ನಿಸಿದ್ದಾರೆ. ಆದರೆ, ಅವರ ಪತ್ನಿಗೂ ಈ ಬಗ್ಗೆ ತಿಳಿಯದೆ ಕಂಗಾಲಾಗಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಘಟನೆ



ತಕ್ಷಣ ಸಿದ್ದಣ್ಣಯ್ಯ ದಂಪತಿಗಳು ಬಸ್‌ನಿಂದ ಕೆಳಗೆ ಇಳಿದು ಬಸ್ ನಿಲ್ದಾಣದ ಒಳಗೆ ಇರುವ ಉಪ ಪೊಲೀಸ್ ಠಾಣೆಗೆ ತೆರಳಿ ಸರ ಕಳುವಾಗಿರುವ ಬಗ್ಗೆ ಮಾಹಿತಿ ನೀಡಿದ ತಕ್ಷಣ ಪೊಲೀಸರು ಪರಿಶೀಲಿಸಿ, ಸಮಾಧಾನಪಡಿಸಿದ್ದಾರೆ. ಅಕ್ಕಪಕ್ಕ ಪೊಲೀಸರು ಪರಿಶೀಲಿಸಿದ ನಂತರ ದೂರು ಸ್ವೀಕರಿಸಿ, ಇಬ್ಬರನ್ನು ಹಾಸನ ಬಸ್ ಹತ್ತಿಸಿದ್ದಾರೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರ ಬಸ್ ನಿಲ್ದಾಣದಿಂದ ಆಟೋದಲ್ಲಿ ಪ್ರಯಾಣಿಸಿ, ಗ್ರಾಮಾಂತರ ಬಸ್ ನಿಲ್ದಾಣದವರೆಗೂ ಬಂದಾಗ ಕುತ್ತಿಗೆಯಲ್ಲಿ ಸರ ಇದ್ದು, ಸಿಸಿ ಕ್ಯಾಮರದಲ್ಲಿಯೂ ಕಾಣಿಸುತ್ತಿದೆ. ಆದರೆ ಬಸ್ ಹತ್ತುವ ಸಂದರ್ಭದಲ್ಲಿ ಕಳುವಾಗಿದೆ ಎಂದು ಸಿದ್ದಣ್ಣಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದೂರಿನ ಪ್ರತಿ ಸ್ವೀಕರಿಸಲು ಏ.7ರಂದು ಲಷ್ಕರ್ ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಠಾಣೆಯಲ್ಲಿದ್ದ ಸಿಬ್ಬಂದಿ ನೀವೇ ಎಲ್ಲಿಯೋ ಇಟ್ಟು ಮರೆತಿರಬೇಕು ನೋಡಿ ಎಂದು ಉದಾಸೀನದ ಉತ್ತರ ನೀಡಿದರು ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ಸಮಾರೋಪ

ಮೈಸೂರು, ಮೇ 8– ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿಜಯನಗರ ವತಿಯಿಂದ ಸಾಂಸ್ಕೃತಿಕ ಕ್ರೀಡಾ, ಎನ್.ಎಸ್.ಎಸ್, ಎನ್.ಸಿಸಿ, ಸ್ಕೌಟ್ಸ್ ಮತ್ತು ಗೈಟ್ಸ್ ಹಾಗೂ ರೆಡ್‌ಕ್ರಾಸ್ ಚಟುವಟಿಕೆಗಳು ಮೇ 9 ರಂದು ಬೆಳಗ್ಗೆ 11 ಗಂಟೆಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿಜಯನಗರ ಕಾಲೇಜಿನ ಆವರಣದಲ್ಲಿ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿದೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಸಮಾರೋಪ ನುಡಿಯನ್ನು ಆಡುವರು. ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್ ಮತ್ತು ಜೀ ಕನ್ನಡ ವಾಹಿನಿಯ ಸರಿಗಮಪ ಗ್ರಾಂಡ್ ಪರ್ಫಾರ್ಮರ್ ಅಮೂಲ್ಯ ಮೈಸೂರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ನಟರಾಜ ಜಿ.ಆರ್. ಅಧ್ಯಕ್ಷತೆಯನ್ನು ವಹಿಸುವರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಬಣಜಿಗ ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ನೆರವು ನೀಡುವೆ

● ಶಾಸಕ ಕೆ.ಹರೀಶ್‌ಗೌಡರ ಭರವಸೆ ● ಶ್ರೀ ಯೋಗಿನಾರೇಯಣ ಬಣಜಿಗ ಸಂಘದ ಅಧ್ಯಕ್ಷ ಎಂ.ನಾರಾಯಣರಿಗೆ ಅಭಿನಂದನೆ

ಮೈಸೂರು,ಮೇ 8(ಪಿಎಂ)– ನಗರದಲ್ಲಿರುವ ಬಣಜಿಗ (ಬಲಿಜ) ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ಹೆಚ್ಚುವರಿಯಾಗಿ ಇನ್ನು 50 ವಿದ್ಯಾರ್ಥಿನಿಯರ ಪ್ರವೇಶಾತಿಗಾಗಿ ಅಗತ್ಯ ಮೂಲಸೌಕರ್ಯ ಒದಗಿಸಲು ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಭರವಸೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ನಿವೃತ್ತ ಇಂಜಿನಿಯರ್ ಹಾಗೂ ಶ್ರೀ ಯೋಗಿನಾರೇಯಣ ಬಣಜಿಗ (ಬಲಿಜ) ಸಂಘದ ಅಧ್ಯಕ್ಷ ಎಂ.ನಾರಾಯಣ ಅವರ 90ನೇ ಜನ್ಮದಿನೋತ್ಸವ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ಬಣಜಿಗ ವಿದ್ಯಾರ್ಥಿನಿಯರ ಹಾಸ್ಟೆಲ್ ಮೂಲಕ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ. ಈಗ ಹಾಸ್ಟೆಲ್‌ನಲ್ಲಿ 50 ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶ ಕಲ್ಪಿಸಿರುವುದಾಗಿ ಹೇಳಿದ್ದೀರಿ. ಹೆಚ್ಚುವರಿಯಾಗಿ ಇನ್ನು 50 ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಲು ಅಗತ್ಯವಿರುವ ಮೂಲಸೌಕರ್ಯ ಒದಗಿಸಲು ಸಂಪೂರ್ಣ ಸಹಕಾರ ನೀಡುತ್ತೇನೆ ಎಂದರು.

ಮೈಸೂರು ಮಹಾರಾಣಿ ಕಾಲೇಜಿನ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮೂರು ವಿಭಾಗಗಳಿಂದ ಸುಮಾರು 14 ಸಾವಿರ ವಿದ್ಯಾರ್ಥಿನಿಯರು ಪ್ರತಿವರ್ಷ ಪ್ರವೇಶ ಪಡೆಯುತ್ತಿದ್ದಾರೆ. ಖಾಸಗಿ ಕಾಲೇಜುಗಳಲ್ಲಿ ಪದವಿ ಶಿಕ್ಷಣ ಪಡೆಯಲು ಶಕ್ತಿ ಇಲ್ಲದ ಹೆಣ್ಣು ಮಕ್ಕಳಿಗೆ ಇಲ್ಲಿ ಶಿಕ್ಷಣ ದೊರೆಯುತ್ತಿದೆ. ಆದರೆ ಪ್ರತಿವರ್ಷ ಹಾಸ್ಟೆಲ್‌ಗೆ ಪ್ರವೇಶ ದೊರೆಯದೇ ಸುಮಾರು ಸಾವಿರ ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮುಂದುವರೆಸುವ ಆಕಾಂಕ್ಷೆ ಇದ್ದಾಗ್ಯೂ ತಮ್ಮ ಊರುಗಳಿಗೆ ಮರಳುವ ಪರಿಸ್ಥಿತಿ ಇದೆ. ಹಾಗಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜಿಸಲು ಹಾಸ್ಟೆಲ್ ಸೌಲಭ್ಯ ಕಲ್ಪಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಸಮುದಾಯ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಸೌಕರ್ಯ ಒದಗಿಸಿರುವುದು ಉತ್ತಮ ಕೆಲಸ ಎಂದು ಹೇಳಿದರು.

ಎಂ.ನಾರಾಯಣ ಅವರು ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವ ಹಿರಿಯರು. ಅಂತಹವರಿಗೆ ಅಭಿನಂದನೆ ಸಲ್ಲಿಸಿರುವುದು ಶ್ಲಾಘನೀಯ. ನಾರಾಯಣ ಅವರು 25 ವರ್ಷಗಳಿಂದ ವಿದ್ಯಾರ್ಥಿನಿಲಯದ ಉಸ್ತುವಾರಿ ವಹಿಸಿಕೊಂಡು ಉತ್ತಮವಾಗಿ ನಡೆಸಿಕೊಂಡು ಹೋಗುತ್ತಿರುವುದು ನಿಜಕ್ಕೂ ಖುಷಿಯ ವಿಚಾರ. ನಾರಾಯಣ ಅವರು ಸರ್ಕಾರಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಂತರ ಸಮುದಾಯ ಮತ್ತು ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮನಸ್ಸು ಶುದ್ಧಿ ಇದ್ದರೆ ಮಾತ್ರ ಈ ರೀತಿ ಮಾಡಲು ಸಾಧ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಅರಗು ಮತ್ತು ಬಣ್ಣದ ಕಾರ್ಖಾನೆ ಮಾಜಿ ಅಧ್ಯಕ್ಷ ಹೆಚ್.ಎ. ವೆಂಕಟೇಶ್, ಎಂ.ನಾರಾಯಣ ಅವರು ಅತ್ಯಂತ ಕಳಕಳಿಯಿಂದ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. ಬಣಜಿಗ ವಿದ್ಯಾರ್ಥಿನಿಲಯದ ನಿರ್ದೇಶಕರಾಗಿ ಹಾಗೂ ಮೂರನೇ ಬಾರಿಗೆ ಬಣಜಿಗ ಸಂಘದ ಅಧ್ಯಕ್ಷರಾಗಿ ವಿದ್ಯಾರ್ಥಿನಿಲಯದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಶ್ರಮಿಸುತ್ತಾ ಬಂದಿದ್ದಾರೆ. ಇವರು ಎಲ್ಲಾ ಸಮುದಾಯಗಳೊಂದಿಗೆ ಒಡನಾಟ ಹೊಂದಿದ್ದಾರೆ. ಜೊತೆಗೆ ಬಹಳಷ್ಟು ದೇವಸ್ಥಾನಕ್ಕೆ ಆರ್ಥಿಕ ನೆರವು ನೀಡಿದ್ದಾರೆ. ಸಮುದಾಯ ಮತ್ತು ಸಮಾಜ ಸೇವೆಗಾಗಿ ಶ್ರಮಿಸುತ್ತಿರುವ ಅವರನ್ನು ಗೌರವಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಇದೇ ವೇಳೆ ಎಂ.ನಾರಾಯಣ ಮತ್ತು ಅವರ ಪತ್ನಿ ಸರೋಜಮ್ಮ ನಾರಾಯಣ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಮೈಸೂರು ವಿವಿ ಮಾಜಿ ಕುಲಸಚಿವ ಪ್ರೊ.ಆರ್.ಶಿವಪ್ಪ, ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್. ಶಿವರಾಜಪ್ಪ, ಹಿರಿಯ ಲೆಕ್ಕ ಪರಿಶೋಧಕ ಕೆಎನ್.ಮೋಹನ್ ಕುಮಾರ್, ಮುಖಂಡ ಹೆಚ್.ಆರ್. ಗೋಪಾಲಕೃಷ್ಣ ಮತ್ತಿತರರು ಹಾಜರಿದ್ದರು.



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ಶ್ರೀ ಯೋಗಿನಾರೇಯಣ ಬಣಜಿಗ (ಬಲಿಜ) ಸಂಘದ ಅಧ್ಯಕ್ಷ ಎಂ.ನಾರಾಯಣ ಅವರನ್ನು ಅವರ ಪತ್ನಿ ಸರೋಜಮ್ಮ ಅವರೊಂದಿಗೆ ಅಭಿನಂದಿಸಲಾಯಿತು.

ಗಂಗೋತ್ರಿ ದೇಗುಲಕ್ಕೆ ಹೋಗುತ್ತಿದ್ದ ಹೆಲಿಕಾಪ್ಟರ್ ಪತನ

ಆರು ಮಂದಿ ಸಾವು, ಪೈಲಟ್‌ಗೆ ಗಂಭೀರ ಗಾಯ

ಡೆಹ್ರಾಡೂನ್, ಮೇ.8– ಉತ್ತರಾಖಂಡದ ಗಂಗೋತ್ರಿ ದೇಗುಲಕ್ಕೆ ತೆರಳುತ್ತಿದ್ದ ಖಾಸಗಿ ಹೆಲಿಕಾಪ್ಟರ್ ಉತ್ತರಕಾಶಿ ಜಿಲ್ಲೆಯ ಗಂಗಾನಿ ಬಳಿ ಪತನಗೊಂಡು, ಆರು ಪ್ರವಾಸಿಗರು ಮೃತಪಟ್ಟು, ಪೈಲಟ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ಎಸ್‌ಡಿಆರ್‌ಎಫ್ ಮೂಲಗಳಿಂದ ಬಂದ ಮಾಹಿತಿಯ ಪ್ರಕಾರ ಏರೋಟ್ರಾನ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ವಿಟಿ–ಓಎಕ್ಸ್‌ಎಫ್) ನಿರ್ವಹಿಸುವ ಕ್ಯಾಪ್ಟನ್ ರಾಬಿನ್ ಸಿಂಗ್ ಪೈಲಟ್ ಮಾಡಿದ ಹೆಲಿಕಾಪ್ಟರ್ ಇಂದು ಬೆಳಗ್ಗೆ 8.50ಕ್ಕೆ ಡೆಹ್ರಾಡೂನ್‌ನ ಸಹಸ್ತ್ರಧಾರ ಹೆಲಿಪ್ಯಾಡ್‌ನಿಂದ ಆರು ಪ್ರಯಾಣಿಕರೊಂದಿಗೆ ಟೇಕ್‌ಆಫ್ ಆಗಿತ್ತು.

ಗಂಗೋತ್ರಿ ಧಾಮದಿಂದ ಸುಮಾರು ಆರು ಕಿಲೋ ಮೀಟರ್ ದೂರದಲ್ಲಿರುವ ಖರ್ಸಾಲಿ ಹೆಲಿಪ್ಯಾಡ್‌ನಲ್ಲಿ ಹೆಲಿಕಾಪ್ಟರ್ ಇಳಿಯಬೇಕಿತ್ತು, ರಿಷಿಕೇಶ–ಗಂಗೋತ್ರಿ ರಾಷ್ಟ್ರೀಯ ಹೆದ್ದಾರಿಯ ಬಳಿ ಅಪಘಾತ ಸಂಭವಿಸಿದೆ.

ಮೃತರನ್ನು ಮುಂಬೈನ ಕಲಾ ಸೋನಿ (61), ವಿಜಯ ರೆಡ್ಡಿ (57) ಮತ್ತು ರುಚಿ ಅಗರ್ವಾಲ್ (56), ಉತ್ತರಪ್ರದೇಶದ ರಾಧಾ ಅಗರ್ವಾಲ್(79) ಆಂಧ್ರಪ್ರದೇಶದ ವೇದಾವತಿ ಕುಮಾರಿ (48) ಮತ್ತು ಪೈಲಟ್ ಗುಜರಾತ್‌ನವರು. ಗಾಯಗೊಂಡ ವ್ಯಕ್ತಿಯನ್ನು ಆಂಧ್ರಪ್ರದೇಶದ ಭಾಸ್ಕರ್ ಎಂದು ಗುರುತಿಸಲಾಗಿದೆ

ಎಸ್‌ಡಿಆರ್‌ಎಫ್ ಕಮಾಂಡೆಂಟ್ ಅರ್ಪಣ್ ಯದುವಂಶಿ, ಉತ್ತರಕಾಶಿ ಪೊಲೀಸರು ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ತಂಡಗಳು ಸ್ಥಳದಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿವೆ.

ಅಪಘಾತದ ಸ್ಥಳವನ್ನು ತಲುಪಿದ ಭಟ್ವಾಡಿಯ ಎಸ್‌ಡಿಆರ್‌ಎಫ್ ತಂಡವು ಹೆಲಿಕಾಪ್ಟರ್ ಸುಮಾರು 200 ರಿಂದ 250 ಮೀಟರ್ ಆಳದ ಕಂದಕಕ್ಕೆ ಬಿದ್ದಿರುವುದನ್ನು ಗಮನಿಸಿತು. ತಂಡವು ಸ್ಥಳದಲ್ಲಿ ನೆಲೆಯನ್ನು ಸ್ಥಾಪಿಸಿ, ಕಮರಿಗೆ ಇಳಿಯಲು ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ಗರ್ವಾಲ್ ವಿಭಾಗೀಯ ಆಯುಕ್ತ ವಿನಯ್ ಶಂಕರ್ ಪಾಂಡೆ, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ದೃಢಪಡಿಸಿದ್ದಾರೆ. ಆಡಳಿತ ಮತ್ತು ಪರಿಹಾರ ತಂಡಗಳು ಸ್ಥಳದಲ್ಲಿವೆ.

ಹೆಲಿಕಾಪ್ಟರ್ ಅಪಘಾತದ ಬಗ್ಗೆ ದುಃಖ ವ್ಯಕ್ತಪಡಿಸಿದ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಘಟನೆಯ ತನಿಖೆಗೆ ಆದೇಶಿಸಿದರು.

ಇಟ್ಟಿಗೆಗೂಡು ವಾರ್ಡ್ ನಂ.52ಕ್ಕೆ ಹೆಚ್ಚಿನ ಪೌರಕಾರ್ಮಿಕರ ನಿಯೋಜನೆಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹ

ಮೈಸೂರು, ಮೇ 8(ಎಸ್‌ಬಿಡಿ)– ಮೈಸೂರಿನ ಅತ್ಯಂತ ವಿಸ್ತಾರವಾದ ಇಟ್ಟಿಗೆಗೂಡು 52ನೇ ವಾರ್ಡ್‌ಗೆ ಅಗತ್ಯಾನುಸಾರ ಪೌರಕಾರ್ಮಿಕರನ್ನು ನಿಯೋಜಿಸುವಂತೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.



ಇಟ್ಟಿಗೆಗೂಡು ವಾರ್ಡ್ ವ್ಯಾಪ್ತಿ ಅತ್ಯಂತ ವಿಸ್ತಾರವಾಗಿದ್ದು, ಇಂದಿರಾನಗರ, ಕೆ.ಸಿ.ಲೇಔಟ್, ಜಾಕಿ ಕ್ವಾರ್ಟರ್ಸ್, ಜೆಸಿ ನಗರ, ವೆಂಕಟಲಿಂಗಯ್ಯ ಲೇಔಟ್, ಇನ್‌ಕಮ್ ಟ್ಯಾಕ್ಸ್ ಲೇಔಟ್, ಇಟ್ಟಿಗೆಗೂಡು ಮಾಡಲ್ ಹೌಸ್ ಸೇರಿದಂತೆ ಹಲವು ವಸತಿ ಬಡಾವಣೆಗಳಿವೆ. ಮೃಗಾಲಯ, ಅಕ್ವೇರ್ ಮ್ಯೂಸಿಯಂ, ವಸ್ತುಪ್ರದರ್ಶನ, ಕಾರಂಜಿಕೆರೆ, ಲಲಿತ ಮಹಲ್ ಇನ್ನಿತರ ಪ್ರವಾಸಿ ತಾಣಗಳಿವೆ. ಅಲ್ಲದೆ ಮೈಸೂರು ಮಾಲ್, ರೇಸ್ ಕೋರ್ಸ್, ಪೊಲೀಸ್ ಆಯುಕ್ತರ ಕಚೇರಿ, ಡಿಎಆರ್, ಸಿಎಆರ್ ಕಚೇರಿಗಳಿವೆ. ಗಣ್ಯಾತಿಗಣ್ಯರು ನಿತ್ಯ ಸಂಚರಿಸುವ ರಸ್ತೆಗಳೂ ಈ ವಾರ್ಡ್ ವ್ಯಾಪ್ತಿಗೆ ಬರುತ್ತವೆ. ಆದರೆ ಇಲ್ಲಿಗೆ ಅಗತ್ಯವಿರುವಷ್ಟು ಪೌರಕಾರ್ಮಿಕರನ್ನು ನಿಯೋಜಿಸದ ಕಾರಣ ಸ್ವಚ್ಛತೆ ನಿರ್ವಹಣೆ ಕಷ್ಟಸಾಧ್ಯವಾಗಿದೆ.

ಇಟ್ಟಿಗೆಗೂಡು ವಾರ್ಡ್‌ನಲ್ಲಿ 12 ಮಹಿಳೆಯರು ಹಾಗೂ 19 ಪುರುಷರು ಸೇರಿ ಒಟ್ಟು 31 ಪೌರಕಾರ್ಮಿಕರಿದ್ದು, ಇವರಲ್ಲಿ ಐವರನ್ನು ಕಸ ಸಾಗಿಸುವ ವಾಹನಗಳಿಗೆ ನಿಯೋಜಿಸಲಾಗಿದೆ. ಕೆಲವರಿಗೆ ಮೋರಿ ಸ್ವಚ್ಛತೆ ಸೇರಿದಂತೆ ಇತರೆ ಕೆಲಸ ವಹಿಸಲಾಗುತ್ತದೆ. ವಿಸ್ತಾರವಾದ ವಸತಿ ಪ್ರದೇಶ ಹಾಗೂ ಪ್ರವಾಸಿತಾಣಗಳಿರುವ ಈ ವಾರ್ಡ್‌ನಲ್ಲಿ ಸಮರ್ಪಕ ಸ್ವಚ್ಛತೆ ಕಾಣದಾಗಿದೆ. ಮೈಸೂರಿನ ಅಭಿವೃದ್ಧಿ ಹಾಗೂ ಸ್ವಚ್ಛತೆ ಬಗ್ಗೆ ಆಸಕ್ತಿ ಹೊಂದಿರುವ ನಗರ ಪಾಲಿಕೆ ಆಯುಕ್ತರು ಇಟ್ಟಿಗೆಗೂಡು ವಾರ್ಡ್‌ನ ಸಮಸ್ಯೆಗಳನ್ನು ಪರಿಶೀಲಿಸಿ, ಅಗತ್ಯಾನುಸಾರ ಪೌರಕಾರ್ಮಿಕರನ್ನು ನಿಯೋಜಿಸಬೇಕು.

ಈ ಹಿಂದೆ ಖಾಯಂ ಪೌರಕಾರ್ಮಿಕರೊಂದಿಗೆ ಅಗತ್ಯಾನುಸಾರ ಹೊರಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು ಆದರೀಗ ಈ ವ್ಯವಸ್ಥೆಗೂ ಅವಕಾಶವಿಲ್ಲವಾಗಿದೆ. ಮೈಸೂರಿನ ಜನಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಪಾಲಿಕೆಯಲ್ಲಿ 3 ಸಾವಿರ ಮಂದಿ ಪೌರಕಾರ್ಮಿಕರ ಅಗತ್ಯವಿದೆ. ಆದರೆ ಪ್ರಸ್ತುತ ಸುಮಾರು 2 ಸಾವಿರ ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸ್ವಚ್ಛತೆಗೆ ಆದ್ಯತೆ ನೀಡದಿರುವುದರಿಂದಲೇ ಇತ್ತೀಚಿನ ವರ್ಷಗಳಲ್ಲಿ ಮೈಸೂರು 25ನೇ ಸ್ಥಾನಕ್ಕಿಳಿದಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮಕ್ಕೆ ಮುಂದಾಗಬೇಕು ಎಂದು ಪಾಲಿಕೆ ಆಯುಕ್ತರನ್ನು ಸಂದೇಶ್ ಸ್ವಾಮಿ ಒತ್ತಾಯಿಸಿದ್ದಾರೆ.

ಸ್ಪೀಕರ್ ರಾಜೀನಾಮೆಗೆ ಮಾಜಿ ಉಪಮೇಯರ್ ಶೈಲೇಂದ್ರ ಆಗ್ರಹ

ಮೈಸೂರು, ಮೇ 8– ಮಂಗಳೂರಿನ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಆರೋಪಿಗಳೊಂದಿಗೆ ನಂಟಿರುವ ಸ್ಪೀಕರ್ ಯು.ಟಿ.ಖಾದರ್ ಅವರು ರಾಜೀನಾಮೆ ನೀಡುವ ಮೂಲಕ ಆ ಸ್ಥಾನದ ಗೌರವ ರಕ್ಷಿಸಬೇಕು ಎಂದು ಮೈಸೂರಿನ ಮಾಜಿ ಉಪಮೇಯರ್ ವಿ.ಶೈಲೇಂದ್ರ ಆಗ್ರಹಿಸಿದ್ದಾರೆ.



ಈ ಹಿಂದೆ ಹತ್ಯೆಯಾಗಿದ್ದ ಮಹಮ್ಮದ್ ಫಾಜಿಲ್ ಕುಟುಂಬಕ್ಕೆ ಸರ್ಕಾರದಿಂದ ನೀಡಿದ್ದ 25 ಲಕ್ಷದಲ್ಲಿ ಸ್ವಲ್ಪ ಹಣವನ್ನು ಸುಹಾಸ್ ಶೆಟ್ಟಿ ಹತ್ಯೆಗೆ ಸುಪಾರಿ ನೀಡಲು ಬಳಸಲಾಗಿದೆ ಎಂದು ತಿಳಿದುಬಂದಿದೆ. ಆದರೆ ತನಿಖೆ ನಡೆಯುತ್ತಿರುವಾಗಲೇ ಸ್ಪೀಕರ್ ಖಾದರ್ ಅವರು ಈ ಪ್ರಕರಣದಲ್ಲಿ ಫಾಜಿಲ್ ಕುಟುಂಬದವರ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಆದ್ದರಿಂದ ಕೂಡಲೇ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ನೀಡುತ್ತದೆ ಎಂಬ ನಂಬಿಕೆ ನನಗಿಲ್ಲ. ಜನಗಣತಿ ನಡೆಸಲು ಯಾವುದೇ ರಾಜ್ಯ ಸರ್ಕಾರಗಳಿಗೂ ಅಧಿಕಾರವಿಲ್ಲ. ಸದ್ಯ ಕೇಂದ್ರ ಸರ್ಕಾರ ಜನಗಣತಿ ಸಮೀಕ್ಷೆಗೆ ನಿರ್ಧರಿಸಿದೆ. ಕೇಂದ್ರ ಹಾಗೂ ರಾಜ್ಯ ಸಮೀಕ್ಷೆಯ ಅಂಕಿಅಂಶಗಳಲ್ಲಿ ವ್ಯತ್ಯಾಸವಾದರೆ ಮತ್ತೊಂದು ರೀತಿಯ ಗೊಂದಲ ಸೃಷ್ಟಿಯಾಗುತ್ತದೆ. ಅದಕ್ಕೆ ಉತ್ತರದಾಯಿಗಳು ಯಾರಾಗುತ್ತಾರೆ ಎಂದು ಶೈಲೇಂದ್ರ ಪ್ರಶ್ನಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾ/ವಿತ/ವಲಯ–2/2025–26 ದಿನಾಂಕ: 06–05–2024.

ಪತ್ರಿಕಾ ಪ್ರಕಟಣೆ

ಶ್ರೀ ನಂಜುಂಡೇಗೌಡ ಮನೆ ನಂ. 643/ಸಿ ಸರಸ್ವತಿಪುರಂ ಟಿ ಕೊಪ್ಪಲು, ಮೈಸೂರು ಇವರಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥಮಂಡಳಿ ಯಿಂದ ಹುಡ್ಕೋ ಯೋಜನೆಯಡಿ ಸರಸ್ವತಿಪುರಂ ಟಿ ಕೊಪ್ಪಲು ಬಡಾವಣೆಯಲ್ಲಿ, ಅಳತೆ **40x60** ಅಡಿಗಳ ನಿವೇಶನ ಸಂಖ್ಯೆ **643/ಸಿ** ದಿನಾಂಕ: **12–11–1972** ರಂದು ಮಂಜೂರಾಗಿದ್ದು, ದಿನಾಂಕ:**04–01–1988** ರಂದು ಸ್ವಾಧೀನಪತ್ರ ಪಡೆದು ದಿನಾಂಕ: **23.12.2006** ರಂದು ಕ್ರಯಪತ್ರ ನೋಂದಾಯಿಸಿಕೊಂಡಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ. ನಂಜುಂಡೇಗೌಡ ರವರು ದಿನಾಂಕ: **06.01.2007** ರಂದು ಮೃತರಾಗಿದ್ದು, ಇವರ ಹೆಂಡತಿಯಾದ ಶ್ರೀಮತಿ ನಾಗಮ್ಮ ಮತ್ತು ಮಕ್ಕಳುಗಳಾದ **1.** ಶ್ರೀಮತಿ. ಜಯಮ್ಮ **2.** ಪುಟ್ಟಸ್ವಾಮಿಗೌಡ ಹೆಚ್.ಎನ್ **3.** ರಮೇಶ ಹೆಚ್.ಎನ್ **4.** ಶಕುಂತಲ **5.** ನಾಗೇಶ್ ಹೆಚ್.ಎನ್ ಇವರುಗಳು ಸೇರಿ ಮೈಸೂರು ಮಹಾ ನಗರ ಪಾಲಿಕೆಯಲ್ಲಿ ದಿನಾಂಕ: **25.06.2024** ರಂದು ಜಂಟಿ ಪೌತಿ ಖಾತಾ ನೋಂದಾಯಿಸಿಕೊಂಡಿರುತ್ತಾರೆ. ಪೌತಿ ಖಾತಾ ನೋಂದಾಯಿಸಿಕೊಂಡು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ದಿನಾಂಕ: **08.04.2025** ರಂದು ಮನವಿ ಸಲ್ಲಿಸಿ ಮನವಿ ಪತ್ರದಲ್ಲಿ ಪ್ರಾಧಿಕಾರವು ನೀಡಿರುವ ಕ್ರಯಪತ್ರದಲ್ಲಿ ಮಂಜೂರಾತಿದಾರರ ತಂದೆಯ ಹೆಸರು ನಿಂಗೇಗೌಡ ಎಂದು ನಮೂದಾಗುವ ಬದಲು ನಂಜುಂಡೇಗೌಡ ಎಂದು ತಪ್ಪಾಗಿ ನಮೂದಾಗಿರುವುದಾಗಿ ಹಾಗೂ ಚೆಕ್ಕು ಬಂದಿಯಲ್ಲಿ ಪೂರ್ವ ದಿಕ್ಕಿಗೆ ಇರುವ ಸ್ವತ್ತಿನ ಸಂಖ್ಯೆ:**641/ಎ2** ಎಂದು ನಮೂದಾಗುವ ಬದಲು ನಿ. ಸಂ:**641/ಬಿ** ಎಂದು ತಪ್ಪಾಗಿರುವುದಾಗಿ ಕ್ರಯಪತ್ರ ತಿದ್ದುಪಡಿ ಕೋರುತ್ತಾರೆ.

ಅದರಂತೆ ಪರಿಶೀಲಿಸಲಾಗಿ ಮೂಲ ಮಂಜೂರಾತಿದಾರರು ದಿನಾಂಕ: **16.11. 2006**ರಲ್ಲಿ ಕ್ರಯಪತ್ರ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ತಂದೆಯ ಹೆಸರನ್ನು ನಮೂದಿಸುವ ಕಾಲಂನಲ್ಲಿ ನಂಜುಂಡೇಗೌಡ ಎಂಬುದಾಗಿ ನಮೂದಿಸಿರುವಂತೆಯೇ ಇವರಿಗೆ ದಿನಾಂಕ: **22.12.2006** ರಂದು ಕ್ರಯಪತ್ರ ನೀಡಲಾಗಿರುತ್ತದೆ. ಆದರೆ, ಪೌತಿ ರೀತ್ಯಾ ವರ್ಗಾವಣೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಮಂಜೂರಾತಿದಾರರು ಮೃತರಾಗಿರುವ ಬಗ್ಗೆ ದಿನಾಂಕ:**03.03.2007** ರಂದು ಪಡೆದು ಸಲ್ಲಿಸಿರುವ ಮರಣ ಪ್ರಮಾಣ ಪತ್ರದಲ್ಲಿ ಮಂಜೂರಾತಿದಾರರಾದ ಶ್ರೀ ನಂಜುಂಡೇಗೌಡ ರವರ ತಂದೆಯ ಹೆಸರು ನಿಂಗೇಗೌಡ ಎಂಬುದಾಗಿ ಹಾಗೂ ಭಾರತ ಚುನಾವಣಾ ಆಯೋಗವು ನೀಡಿರುವ **KT/14/108/033144** ಸಂಖ್ಯೆಯ ಗುರುತಿನ ಚೀಟಿಯಲ್ಲಿ ತಂದೆಯ ಹೆಸರು ನಿಂಗೇಗೌಡ ಎಂಬುದಾಗಿ ಇರುತ್ತದೆ. ಆದುದರಿಂದ ಸದರಿ ನಿವೇಶನದ ಕ್ರಯಪತ್ರದಲ್ಲಿ ತಂದೆಯ ಹೆಸರನ್ನು ನಂಜುಂಡೇಗೌಡ ಎಂಬುದರ ಬದಲಾಗಿ ನಿಂಗೇಗೌಡ ಎಂಬುದಾಗಿ ಹಾಗೂ ಸದರಿ ನಿವೇಶನದ ಚೌತರ್ಫು ತಿದ್ದುಪಡಿ ಮಾಡುವ ಸಂಬಂಧ ಈ ಪ್ರಕಟಣೆ ಹೊರಡಿಸಿದ ಏಳು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು. ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು. ನಿಗಧಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ಸಹಿ/– ಕಾರ್ಯದರ್ಶಿ
ವಲಯ ಕಛೇರಿ–2
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಬೆಂಗಳೂರು, ಕೊಮ್ಮಘಟ್ಟ, ಕೆಂಗೇರಿ ಹೋಬಳಿ, ನನಸು ಹೊಂಗೆಲಕ್ಷ್ಮಿ ನಿಲಯ, ನಂಬರ್ 8 ಮತ್ತು 9 ರ ನಿವಾಸಿಯಾದ ರೂಪೇಶ್ ಬಿ. ನಿಂಗೇಗೌಡ ಬಿನ್. ನಿಂಗೇಗೌಡ ರವರು ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್: 133/11 ರಲ್ಲಿನ ಒಂದು ಎಕರೆ (1.00.00.00) ಖುಷ್ಕಿ ಜಮೀನು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂಬರ್: 133; ಉತ್ತರಕ್ಕೆ: ಸರ್ವೆ ನಂಬರ್: 133 ; ದಕ್ಷಿಣಕ್ಕೆ: ಸರ್ವೆ ನಂಬರ್: 133/10

Sd/- M.N. Prakash Kalappa KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಮೈಸೂರು ನಗರ, ರಾಮಕೃಷ್ಣನಗರ, ಹೆಚ್ ಬ್ಲಾಕ್, 4ನೇ ಮೇನ್, ನಂಬರ್ 203 ರ ನಿವಾಸಿಯಾದ ಜಗದೀಶ್ ಎನ್. ಎಮ್. ಬಿನ್ ಲೇಟ್ ಮಲ್ಲಪ್ಪ ಎನ್.ಎಸ್. ರವರು ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್: 129/1ಎ ರಲ್ಲಿನ ಮೂವತ್ತೈದು ಗುಂಟೆ (0.35.00.00) ಖುಷ್ಕಿ ಜಮೀನು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್: 128 ; ಪಶ್ಚಿಮಕ್ಕೆ: ಸರ್ವೆ ನಂಬರ್: 131/1, 130/1, 2, 3 ; ಉತ್ತರಕ್ಕೆ: ಸರ್ವೆ ನಂಬರ್: 122/1 ; ದಕ್ಷಿಣಕ್ಕೆ:– ಸರ್ವೆ ನಂಬರ್: 129/1ಬಿ.

Sd/- M.N. Prakash Kalappa KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಜಿಲ್ಲಾ ಪಂಚಾಯತ್ ಮೈಸೂರು — ಕರ್ನಾಟಕ ಸರ್ಕಾರ — ತಾಲ್ಲೂಕು ಪಂಚಾಯತ್ ಪಿರಿಯಾಪಟ್ಟಣ

ಆವರ್ತಿ ಗ್ರಾಮ ಪಂಚಾಯ್ತಿ ಕಾರ್ಯಾಲಯ

e-mail: avarthi.pptn.mys@gmail.com

ಸಂಖ್ಯೆ: ಗ್ರಾಪಂಆ:2025–26/35, ದಿ: 08–05–2025

ಕೋಳಿಮಾಂಸ & ಆಡು /ಕುರಿ ಮಾಂಸ ಮಾರಾಟ ಹಾಗೂ ಕೆರೆಗಳ ಮೀನು ಪಾಶುವಾರು ಹಕ್ಕಿನ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಪಿರಿಯಾಪಟ್ಟಣ ತಾಲ್ಲೂಕು, ಆವರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಆವರ್ತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಈ ಕೆಳಕಂಡ ಕೋಳಿ ಮಾಂಸ & ಆಡು/ಕುರಿ ಮಾಂಸದ ಮಾರಾಟ ಹಾಗೂ ಕೆರೆಗಳ ಮೀನು ಪಾಶುವಾರು ಹರಾಜನ್ನು, 2025–26ನೇ ಸಾಲಿನಲ್ಲಿ ದಿನಾಂಕ: 15.05.2025 ಕ್ಕೆ ನಿಗದಿಮಾಡಿ ಆವರ್ತಿ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯು ತೀರ್ಮಾನ ಕೈಗೊಂಡಿರುತ್ತದೆ. ಆಸಕ್ತಿಯುಳ್ಳವರು ಕೋಳಿಮಾಂಸ & ಆಡು/ಕುರಿ ಮಾಂಸ ಮಾರಾಟ ಹಾಗೂ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದು ಮತ್ಸ್ಯಪಾಲನೆ ಮೂಲಕ ಲಾಭವನ್ನು ಪಡೆಯಬಹುದಾಗಿದೆ.

ಷರತ್ತುಗಳು ಮತ್ತು ನಿಬಂಧನೆಗಳಿಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಿ

ಪ್ರತಿ ವಾರ್ಷಿಕ ನವೀಕರಣಕ್ಕೆ ಗ್ರಾಮ ಪಂಚಾಯಿತಿಯು ಸೂಚನೆಯನ್ನಾಗಲಿ ಅಥವಾ ತಿಳುವಳಿಕೆ ಪತ್ರವನ್ನಾಗಲಿ ನೀಡುವುದಿಲ್ಲ. ಬಿಡ್ಡುದಾರರು ಆವರ್ತಿ ಗ್ರಾಮ ಪಂಚಾಯಿತಿ ಕಛೇರಿಗೆ ಖುದ್ದು ಆಗಮಿಸಿ ನಿಯಮಾನುಸಾರ ನವೀಕರಿಸಿಕೊಳ್ಳಬೇಕಾಗಿ ಈ ಮೂಲಕ ತಿಳಿಸಿದೆ. ತಪ್ಪಿದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು.

ಕ್ರ.ಸಂ	ಗ್ರಾಮದ ಹೆಸರು	ಕೆರೆಗಳ ಹೆಸರು
1	ಆವರ್ತಿ	ಅರಸಿಕೆರೆ
2	ಆವರ್ತಿ	ಪಿಕಾಪ್ ಕೆರೆ

ಕೋಳಿ & ಆಡು/ಕುರಿ ಮಾಂಸ ಮಾರಾಟ ಹರಾಜು

ಕ್ರ.ಸಂ	ಗ್ರಾಮದ ಹೆಸರು	ಕೋಳಿ ಮಾಂಸ ಮಾರಾಟ ಸ್ಥಳಗಳ ಸಂಖ್ಯೆ	ಕುರಿ/ಆಡು ಮಾಂಸ ಮಾರಾಟ ಸ್ಥಳಗಳ ಸಂಖ್ಯೆ
1	ಆವರ್ತಿ	2	1
2	ಸುಂಕದಹಳ್ಳಿ	1	1
3	ಮರಡಿಯೂರು	1	0
4	ಮುತ್ತಿನ ಮುಳುಸೋಗೆ	1	0

ಪ್ರಕಟಣೆ: ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಸರ್ವ ಸದಸ್ಯರು ಮತ್ತು ಆಡಳಿತ ಮಂಡಳಿ, ಆವರ್ತಿ, ಗ್ರಾಮ ಪಂಚಾಯತ್ ಕಾರ್ಯಾಲಯ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು–570026, ರಾಜರಾಜೇಶ್ವರಿನಗರ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹಿಂಭಾಗ, ಕುಮಾರಸ್ವಾಮಿ ಲೇಔಟ್, ಮನೆ ನಂ.1777 ರಲ್ಲಿ ವಾಸವಾಗಿರುವ ಸುಮ ಎಂ ಕೋಂ ಪ್ರಭಾಕರ ಎ ರವರಿಗೆ ಸೇರಿದ ಸ್ವತ್ತಿನ ಕ್ರಯ ಪತ್ರ, ನಂ.30684/2011–2012, ದಿನಾಂಕ 04/05/2025 ರಂದು ಕಳೆದು ಹೋಗಿರುತ್ತದೆ. ಇದರ ಸಂಬಂಧ ದಿನಾಂಕ 07/05/2025 ರಂದು ಮೈಸೂರಿನ ಪೊಲೀಸ್ ಠಾಣೆಗೆ ದೂರಿನ ಸಂಖ್ಯೆ 1597319/2025 ರಂತೆ ದೂರನ್ನು ದಾಖಲಿಸಿರುತ್ತಾರೆ. ಸದರಿ ಕ್ರಯಪತ್ರ ಯಾರಿಗಾದರೂ ದೊರಕಿದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಕ್ರಯ ಪತ್ರವನ್ನು ದುರುಪಯೋಗಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಲೋಹಿತ್.ಎನ್., ವಕೀಲರು
ವಿಳಾಸ : ಶ್ರೀ ಸಾಯಿ ಲಾ–ಅಸೋಸಿಯೇಟ್ಸ್ #2967/2, 14ನೇ ಮೇನ್ , 2ನೇ ಕ್ರಾಸ್, ಸರಸ್ವತಿಪುರಂ –570009.
ಮೊ : 9611113323

ದಿನಾಂಕ: 08/05/2025
ಸ್ಥಳ : ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಬೆಂಗಳೂರು, ಕಾಮಾಕ್ಷಿಪಾಳ್ಯ, ಮೀನಾಕ್ಷಿನಗರ, ಎಸ್–304, ಚತುರ ಹೋಮ್ಸ್, 2ನೇ ಮುಖ್ಯ ರಸ್ತೆ, ನಂಬರ್ 36 ರ ನಿವಾಸಿಯಾದ ಮಂಜುನಾಥ ಡಿ. ಬಿನ್ ಲೇಟ್ ದೊಡ್ಡಯ್ಯ ರವರು ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್: 133/14 ರಲ್ಲಿನ ಒಂದು ಎಕರೆ (1.00.00.00) ಖುಷ್ಕಿ ಜಮೀನು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂಬರ್: 133/11 ; ಉತ್ತರಕ್ಕೆ: ಸರ್ವೆ ನಂಬರ್: 131 ; ದಕ್ಷಿಣಕ್ಕೆ: ಸರ್ವೆ ನಂಬರ್: 133.

Sd/- M.N. Prakash Kalappa KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಆಂಧ್ರ ಪ್ರದೇಶ, ಕುರ್ನೂಲ್, ಬೆಥಮ್‌ಚೆರ್ಲ, ಸಿಮೆಂಟ್ ನಗರ್, ನಂಬರ್ 15 52 ರ ನಿವಾಸಿಯಾದ ಕಂಜುಲ ಪ್ರೇಮಲತ ಅಲಿಯಾಸ್ ಕೆ. ಪ್ರೇಮಲತ ರವರು ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಭಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು

ಸರ್ವೇ ನಂಬರ್	ವಿಸ್ತೀರ್ಣ		ಚಕ್ಕುಬಂದಿ			
	ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
126/2B	00	12	ಮರಗಡಪ್ಪ ರವರ ಜಮೀನು	ಜಯಮ್ಮ ರವರ ಜಮೀನು	Sy. No. 129/5	ಕುಳ್ಳಪ್ಪನ ಪುಟ್ಟಲಿಂಗಪ್ಪ ರವರ ಜಮೀನು
129/5	00	35	ಎ. ಬಸವರಾಜಪ್ಪ ರವರ ಜಮೀನು	Sy. No. 129/6	ಪುಟ್ಟಸ್ವಾಮಿ ರವರ ಜಮೀನು	Sy. No. 126/2B
129/6	01	00	Sy. No. 129/5	ರಸ್ತೆ	Sy. No. 129/3	Sy. No. 126

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಪೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಮೈಸೂರು ನಗರ, ಶ್ರೀರಾಂಪುರ 2ನೇ ಹಂತ, ಪಿನ್ನಕಲ್ ಪರ್ಲ್, ನಂಬರ್ 04 ರ ನಿವಾಸಿಯಾದ ಕೆ. ಟಿ. ರಾಮಚಂದ್ರರಾಜು ಅಲಿಯಾಸ್ ಕಮ್ಮಿಲಿ ತ್ರಿನಧ ರಾಮ ಚಂದ್ರ ರಾಜು ಬಿನ್. ಕೆ. ಸಿ. ಕಾಸಿರಾಜು ರವರು ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು.

ಸರ್ವೇ ನಂಬರ್	ವಿಸ್ತೀರ್ಣ		ಚಕ್ಕುಬಂದಿ			
	ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
151/2	00	09	Sy. No. 151/1	Sy. No. 151/3	ಮಾರಮ್ಮ ದೇವಸ್ಥಾನ ಇನಾಂ	Sy. No. 197/2
197/2	00	36	Sy. No. 197/1	Sy. No. 197/3, 4	Sy. No. 151/2	ಹಳ್ಳ

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಡಜನ ಅಂಚೆ, ಮಾರಶೆಟ್ಟಿಹಳ್ಳಿ ಗ್ರಾಮ, ಶಿರೂರ್ ಫಾರ್ಮ್ಸ್ ನಿವಾಸಿಗಳಾದ (1). ಆರತಿ ಅಶೋಕ್ ಶಿರೂರ್ ಕೋಂ. ಅಶೋಕ್ ಮಂಜುನಾಥ್ ಶಿರೂರ್, (2). ಅಶೋಕ್ ಎಂ. ಶಿರೂರ್ ಬಿನ್. ಮಂಜುನಾಥ್ ಆನಂದರಾವ್ ಶಿರೂರ್, (3). ಕೇದರ್ ಅಶೋಕ್ ಶಿರೂರ್ ಬಿನ್ ಅಶೋಕ್ ಮಂಜುನಾಥ್ ಶಿರೂರ್, ಎಲ್ಲರೂ ಹಿಂದು ಅವಿಭಕ್ತ ಕುಟುಂಬದ **(HUP)** ಸದಸ್ಯರು, ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವದಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು

ಸರ್ವೇ ನಂಬರ್	ವಿಸ್ತೀರ್ಣ		ಚಕ್ಕುಬಂದಿ			
	ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
122/1	01	16	ದೇವರಾಜಪ್ಪ ಮತ್ತು ಯಲವಿ ರವರ ಜಮೀನು ಹಾಗು ಸರ್ವೇ ನಂಬರ್ 128	ನೀರು ಹರಿಯುವ ಹಳ್ಳ	ನೀರು ಹರಿಯುವ ಹಳ್ಳ ಮತ್ತು ಜವರಪ್ಪ ರವರ ಜಮೀನು	ಜಬಲಯ್ಯ ರವರ ಜಮೀನು ಮತ್ತು ಸರ್ವೇ ನಂಬರ್ 129/1ಬಿ
130/1	02	03				
130/2	01	13				
130/3	01	22				
132/1	01	03				
132/2	00	39				
132/3	00	21				

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ – ನಮೂದಿಸಿರುವ ಸ್ವತ್ತನ್ನು ಜಂಟೀಯಾಗಿ ಅಭಿವೃದ್ಧಿಪಡಿಸಲು, ಸ್ವತ್ತಿನ ಮಾಲೀಕರಾದ, ಮೈಸೂರು ನಗರ, ಶ್ರೀರಾಂಪುರ, ಪಿನ್ನಕಲ್ ಪರ್ಲ್, ನಂಬರ್ 04 ರ ನಿವಾಸಿಯಾದ ಸಿಂದೂರಿ ಕಾಂಜುಲ ಕೋಂ. ಈಶ್ವರ್ ಕನುಮುರು ರವರು ನನ್ನ ಕಕ್ಷೀದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮಾರಶೆಟ್ಟಿಹಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು.

ಸರ್ವೇ ನಂಬರ್	ವಿಸ್ತೀರ್ಣ		ಚಕ್ಕುಬಂದಿ			
	ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
131/1	00	33	ನಟೇಶ್ ಮತ್ತು ಇತರರ ಜಮೀನು	Sy. No. 133	Sy. No. 131/3	Sy. No. 131/2
131/2	00	33	ರಸ್ತೆ	Sy. No. 132	Sy. No. 131/1	Sy. No. 133
133/15	00	33	Sy. No. 133/11	ಹಳ್ಳ ಮತ್ತು Sy. No. 132	Sy. No. 132	Sy. No. 133/10
197/4	00	20	Sy. No. 197/2	ಹಳ್ಳ	Sy. No. 197/10	ಹಳ್ಳ

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 01–05–2025

ಮೈಶುಗರ್ ಕಾರ್ಖಾನೆಯ ವಿದ್ಯುತ್ ಬಿಲ್, ದಂಡ ಎರಡೂ ಮನ್ನಾ

ಹಾಸ್ಟೆಲ್ ಕಟ್ಟಡ ಗುದ್ದಲಿ ಪೂಜೆ ಸಮಾರಂಭದಲ್ಲಿ ಸಿಎಂ



ಕುರುಬರ ಸಂಘದ ವತಿಯಿಂದ ನಿರ್ಮಿಸಲಾಗುತ್ತಿರುವ ನೂತನ ಹಾಸ್ಟೆಲ್ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿ ನಂತರ ನಡೆದ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಮಂಡ್ಯ ಜನ ಒರಟರಂತೆ ಕಂಡರೂ, ಸಹಾಯ ಸ್ಮರಿಸುವ ಹೃದಯವಂತರು. ನಾಡಿಗೆ ಕೃಷಿ ಮೂಲಕ ಅನ್ನ ಕೊಡುವ ಅನ್ನದಾತರು. ನೂತನ ಹಾಸ್ಟೆಲ್ ಕೇವಲ ಕುರುಬರ ಮಕ್ಕಳಿಗೆ ಮಾತ್ರವಲ್ಲ, ಎಲ್ಲಾ ಜಾತಿಯ ಬಡವರಿಗೂ ಅವಕಾಶ ಇರುತ್ತದೆ. ದಾನಿಗಳು ಕೊಟ್ಟಷ್ಟು ಕೊಡಲಿ. ನಾನೂ ಸಹಾಯ ಮಾಡುತ್ತೇನೆ. ಮಂಡ್ಯದ ಜನ ಹತ್ತಾರು ವರ್ಷಗಳಿಂದ ನನಗೆ ಬೆಂಬಲ ಕೊಡುತ್ತಲೇ ಬರುತ್ತಿದ್ದಾರೆ. –ಸಿಎಂ ಸಿದ್ದರಾಮಯ್ಯ

ಮಂಡ್ಯ,ಮೇ 8– ನಮ್ಮ ಸರ್ಕಾರ ಮೈಶುಗರ್ ಕಾರ್ಖಾನೆ ಅಭಿವೃದ್ಧಿಗೆ 50 ಕೋಟಿ ಕೊಟ್ಟಿದ್ದಲ್ಲದೇ ಬಾಕಿ ಇದ್ದ ವಿದ್ಯುತ್ ಬಿಲ್ ಹಾಗೂ ದಂಡ ಎರಡನ್ನೂ ಮನ್ನಾ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗುರುವಾರ ಬೆಂಗಳೂರು–ಮೈಸೂರು ಹೆದ್ದಾರಿ ಬಳಿ ಕುರುಬರ ಸಂಘ ಆಯೋಜಿಸಿದ್ದ ನೂತನ ಹಾಸ್ಟೆಲ್ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಇವತ್ತೇನಾದರೂ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಉಳಿದಿದ್ದರೆ, ವೈದ್ಯಕೀಯ ಕಾಲೇಜು, ಕೃಷಿ ವಿ.ವಿ. ಬಂದಿದೆ ಎಂದರೆ ಅದಕ್ಕೆ ಕಾಂಗ್ರೆಸ್ ಸರ್ಕಾರದ ಸಚಿವ ಚಲುವರಾಯಸ್ವಾಮಿ ಅವರ ಕಾಳಜಿ, ಶ್ರಮ ಕಾರಣ ಎಂದು ಸ್ಪಷ್ಟಪಡಿಸಿದರು.

ನಾಲ್ವಡಿ ಅರಸರನ್ನು ನಾವು ಸದಾ ಸ್ಮರಿಸಬೇಕು. ಮಂಡ್ಯದ ಪ್ರಗತಿಯಲ್ಲಿ ಇವರ ಕೊಡುಗೆ ಅಪಾರ. ನಾನು ಮಂಡ್ಯದ ಈ ಹಾಸ್ಟೆಲ್ ಕಟ್ಟಡ ಶಿಥಿಲ ಆಗಿದ್ದನ್ನು ನೋಡಿದ್ದೆ. ಅನುದಾನ ಕೊಡಲು ಸರ್ಕಾರ ಸಿದ್ಧವಿದೆ ಎಂದು ಹೇಳಿದ್ದೆ. ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣ ಸಿಗಬೇಕು ಎನ್ನುವ ಉದ್ದೇಶ ಈಡೇರಬೇಕಾದರೆ ಹಾಸ್ಟೆಲ್‌ಗಳ ಅಗತ್ಯವಿದೆ. ಹಳ್ಳಿಗಾಡಿನ ಮಕ್ಕಳೂ ವೈದ್ಯರು, ಎಂಜಿನಿಯರ್‌ಗಳಾಗಬೇಕು. ಕೇವಲ ಒಂದು ವರ್ಗದವರು ಮಾತ್ರ ಆಗಬಾರದು, ಎಲ್ಲರಿಗೂ ಶಿಕ್ಷಣ ಸಿಗಬೇಕು ಎಂದು ಹೇಳಿದರು.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, 16 ಬಜೆಟ್ ಮಂಡಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ನಾವು ಭಾವನಾತ್ಮಕವಾಗಿ ಸರ್ಕಾರ ನಡೆಸುತ್ತಿಲ್ಲ. ಜನರ ಮನಸ್ಸನ್ನು ಕೆದಡುವ ಕೆಲಸ ಮಾಡುತ್ತಿಲ್ಲ. ಬದಲಾಗಿ ನಾವು ಜನರ ಅಭಿವೃದ್ಧಿಯ ಕೆಲಸ ಮಾಡುತ್ತೇವೆ. ಕೆಲವರು ಭಾವನೆಗಳನ್ನು ಹಿಡಿದುಕೊಳ್ಳುವ ಕೆಲಸ ಮಾಡುತ್ತಾರೆ. ಭಾವನೆಗಳನ್ನು ಹಿಡಿದುಕೊಂಡರೆ ಹೊಟ್ಟೆ ತುಂಬಲ್ಲ ಎಂದು ಪರೋಕ್ಷವಾಗಿ ಬಿಜೆಪಿ ವಿರುದ್ಧ ಕಿಡಿಕಾರಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾತನಾಡಿ, ಸಿದ್ದರಾಮಯ್ಯ ಹಾಲಿನಂತ ಮನಸ್ಸು ಉಳಿಸಿಕೊಂಡಿದ್ದಾರೆ. 16 ಬಾರಿ ಬಜೆಟ್ ಮಂಡಿಸಿದ್ದು, ಎರಡು ಬಾರಿ ಡಿಸಿಎಂ ಆಗಿ, ಎರಡು ಬಾರಿ ಸಿಎಂ ಆಗಿ ಕೆಲಸ ಮಾಡಿದ್ದಾರೆ. ಅವರು ಕುರುಬ ಸಮುದಾಯದಲ್ಲಿ ಹುಟ್ಟಿರೋದು ಹೆಮ್ಮೆ ವಿಚಾರವಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ರವಿಕುಮಾರ್ ಗಣಿಗ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ಕೆ.ಎಂ.ಉದಯ್, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಎನ್.ಅಪ್ಪಾಜಿಗೌಡ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಮುಖಂಡರಾದ ಎಂ.ಎಸ್.ಚಿದಂಬರ್, ಮಳವಳ್ಳಿ ಶಿವಣ್ಣ, ಜಿಲ್ಲಾಧಿಕಾರಿ ಡಾ.ಕುಮಾರ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಉಗ್ರರ ನೆಲೆಗಳ ಮೇಲೆ ದಾಳಿ ಹಿನ್ನೆಲೆ

ರಾಜ್ಯದ ಡ್ಯಾಂಗಳಲ್ಲಿ ಕಟ್ಟೆಚ್ಚರ

ಮಂಡ್ಯ,ಮೇ 8– ಪಾಕಿಸ್ತಾನದಲ್ಲಿ ಅಡಗಿರುವ ಉಗ್ರರ ನೆಲೆಗಳ ಮೇಲೆ ಭಾರತದ ಸೇನಾ ತಂಡ ದಾಳಿ ಮಾಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸೂಚನೆಯಂತೆ ಎಲ್ಲೆಡೆ ಅಣುಕು ಕವಾಯತು ಮಾಡಲಾಗುತ್ತಿದ್ದು, ರಾಜ್ಯದ ಎಲ್ಲಾ ಡ್ಯಾಂಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಿಲ್ಲೆಯ ಗೆಜ್ಜಲಗೆರೆ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಣೆಕಟ್ಟುಗಳ ಸುರಕ್ಷತೆಯ ದೃಷ್ಟಿಯಲ್ಲಿ ಎಲ್ಲೆಡೆ ಎಚ್ಚರಿಕೆ ವಹಿಸಲಾಗಿದ್ದು, ಯಾವ ಘಳಿಗೆಯಲ್ಲಿ ಏನಾದರೂ ಆಗಬಹುದು ಎಂದು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಮುಜರಾಯಿ ಇಲಾಖೆ ದೇವಾಲಯಗಳಲ್ಲಿ ಪೂಜೆ ಮಾಡುವ ಬಗ್ಗೆ ಸಚಿವ ರಾಮಲಿಂಗಾರೆಡ್ಡಿಯವರೊಂದಿಗೆ ಮಾತನಾಡಿ ಕ್ರಮ ತೆಗೆದುಕೊಂಡಿದ್ದಾರೆ ಎಂದ ಅವರು, ಪಾಕಿಸ್ತಾನದ ಪ್ರಜೆಗಳನ್ನು ಗಡಿಪಾರು ಮಾಡಿಲ್ಲ ಎಂದು ಬಿಜೆಪಿ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಗಡಿಪಾರು ಮಾಡಲಾಗಿದೆ. ಮೈಸೂರಿನಲ್ಲಿ ಇರುವವರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಅಂಥವರು ಮಾತ್ರ ಉಳಿದುಕೊಂಡಿರುವುದು ಬಿಟ್ಟರೆ ಬಹುತೇಕ ಎಲ್ಲರೂ ಗಡೀಪಾರು ಆಗಿದ್ದಾರೆ, ಎಷ್ಟು ಜನ ಉಳಿದಿದ್ದಾರೆ ಎಂಬ ಮಾಹಿತಿ ಇಲ್ಲ ಎಂದು ಹೇಳಿದರು.

ಡಿಸಿಸಿ ಬ್ಯಾಂಕ್ ನೂತನ ಕಟ್ಟಡ, ಮೈಶುಗರ್‌ನ ಟರ್ಬೋ ಜನರೇಟರ್‌ಗೆ ಸಿಎಂ ಚಾಲನೆ

ಮೈಶುಗರ್ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಕಂಚಿನ ಪುತ್ಥಳಿ ಅನಾವರಣ

ಮಂಡ್ಯ,ಮೇ 8– ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡ್ಯ ನಗರದಲ್ಲಿ ಡಿಸಿಸಿ ಬ್ಯಾಂಕ್ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಮೈಶುಗರ್ ಕಾರ್ಖಾನೆಯ ಟರ್ಬೋ ಜನರೇಟರ್‌ಗೆ ಚಾಲನೆ ನೀಡಿದರು. ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಂಚಿನ ಪುತ್ಥಳಿ ಅನಾವರಣಗೊಳಿಸಿದರು.

ಮಂಡ್ಯ ನಗರದ ಗಿರಿಜಾ ಚಿತ್ರಮಂದಿರದ ಪಕ್ಕದಲ್ಲಿರುವ ಜಾಗದಲ್ಲಿ ಡಿಸಿಸಿ ಬ್ಯಾಂಕ್‌ನ ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿದರು. ಈಗಾಗಲೇ ಡಿಸಿಸಿ ಬ್ಯಾಂಕ್ ಕಚೇರಿ ಮಂಡ್ಯ ನಗರದ ರೈತ ಸಭಾಂಗಣದ ಬಳಿ ಇದ್ದು, ಇದೀಗ ಸುಸಜ್ಜಿತ ನೂತನ ಕಟ್ಟಡಕ್ಕೆ ಸಿಎಂ ಗುದ್ದಲಿ ಪೂಜೆ ನೆರವೇರಿಸಿ, ಶಂಕುಸ್ಥಾಪನೆ ಮಾಡಿದರು.

ಬಳಿಕ ಮೈಶುಗರ್ ಸಕ್ಕರೆ ಕಾರ್ಖಾನೆ ಆವರಣಕ್ಕೆ ಆಗಮಿಸಿದ ಸಿದ್ದರಾಮಯ್ಯ, 30 ಮೆಗಾವ್ಯಾಟ್ ಟರ್ಬೋ ಜನರೇಟರ್‌ಗೆ ಪ್ರಾಯೋಗಿಕ ಚಾಲನೆ ನೀಡಿದರು. ನಂತರ ಕಾರ್ಖಾನೆ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಂಚಿನ ಪುತ್ಥಳಿ ಅನಾವರಣಗೊಳಿಸಿದರು.



ಮೈಶುಗರ್ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಂಚಿನ ಪುತ್ಥಳಿಯನ್ನು ಸಿಎಂ ಸಿದ್ದರಾಮಯ್ಯ ಅನಾವರಣಗೊಳಿಸಿದರು.

ಅಮ್ಯೂಸ್ಮೆಂಟ್ ಪಾರ್ಕ್, ಕಾವೇರಿ ಆರತಿ ವಿರೋಧಿಸಿ ಸಿಎಂಗೆ ಮನವಿ

ಮಂಡ್ಯ,ಮೇ 8– ವಿಶ್ವಪ್ರಸಿದ್ಧ ಕೃಷ್ಣರಾಜ ಸಾಗರ ಅಣೆಕಟ್ಟೆ ಬಳಿ ಅಮ್ಯೂಸ್ಮೆಂಟ್ ಪಾರ್ಕ್ ಹಾಗೂ ಗಂಗಾರತಿ ಮಾದರಿಯಲ್ಲಿ ಕಾವೇರಿಗೆ ಆರತಿ ಮಾಡುವುದಕ್ಕೆ ರೈತ ಮುಖಂಡರು, ಪ್ರಗತಿಪರ ಸಂಘಟನೆಗಳು ಹಾಗೂ ಸಿಪಿಐ(ಎಂ) ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ ಪತ್ರ ಸಲ್ಲಿಸಿದರು.



ಗುರುವಾರ ಮಂಡ್ಯ ನಗರ ಪ್ರವಾಸದಲ್ಲಿದ್ದ ಸಿಎಂ ಸಿದ್ದರಾಮಯ್ಯ ಡಿಸಿಸಿ ಬ್ಯಾಂಕ್ ನೂತನ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ರೈತ ಮುಖಂಡರ ಮನವಿ ಪತ್ರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ನಾಯಕಿ ಸುನಂದಾ ಜಯರಾಂ, ಕೆಆರ್‌ಎಸ್ ಅಣೆಕಟ್ಟೆ ಬಳಿ ಅಮ್ಯೂಸ್ಮೆಂಟ್ ಪಾರ್ಕ್‌ನ್ನು ಯಾರು ಕೇಳಿದ್ದರು. 2663 ಕೋಟಿ ವೆಚ್ಚ ಮಾಡಿ ಪಾರ್ಕ್ ನಿರ್ಮಿಸುವ ಅವಶ್ಯಕತೆ ಇದೆಯೇ? ಯಾರೇ ಬಂಡವಾಳ ಹೂಡಿಕೆ ಮಾಡಲಿ, ನಾವು ಅಣೆಕಟ್ಟೆ ಬಳಿ ಪಾರ್ಕ್ ನಿರ್ಮಿಸಲು ಕೇಳಿದ್ವಾ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಪ್ರವಾಸಿ ತಾಣವಾಗಿರುವುದರಿಂದ ಇದನ್ನು ನಿರ್ಮಿಸುತ್ತಿದ್ದೇವೆ ಎಂದಾಗ ಮಧ್ಯ ಪ್ರವೇಶಿಸಿದ ಸುನಂದಾ, ಕೆಆರ್‌ಎಸ್ ಬಳಿಯೇ ಈ ಪಾರ್ಕ್ ಬೇಕೇ? ಪರಿಸರ ಮಾಲಿನ್ಯ, ವಾಯು ಮಾಲಿನ್ಯ, ಅಣೆಕಟ್ಟೆ ಭದ್ರತೆ ಈ ಎಲ್ಲಾ ಸಮಸ್ಯೆ ಇರುವಾಗ ಇಷ್ಟೊಂದು ಹಣ ತಂದು ಕಟ್ಟೆ ಬಳಿಯೇ ಏಕೆ ಹೂಡಬೇಕು? ಪಾರ್ಕ್‌ಗೆ ನಮ್ಮ ವಿರೋಧವಿಲ್ಲ. ಆಯಾಕಟ್ಟಿನ ಸ್ಥಳದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ ನಿರ್ಮಿಸಿ ಎಂದು ಮನವಿ ಮಾಡಿದರು. 92 ಕೋಟಿ ಹಣ ವ್ಯಯ ಮಾಡಿ, ಕಾವೇರಿ ಆರತಿ ಏಕೆ ಮಾಡಬೇಕು? ವೈಚಾರಿಕ, ವೈಜ್ಞಾನಿಕ ಮುಖ್ಯಮಂತ್ರಿಗಳು ನಮ್ಮ ಮುಂದೆ ಇದ್ದಾರೆ ಎಂದು ನಾವು ಭಾವಿಸಿದ್ದೇವೆ. ಇಂತಹ ಸಂದರ್ಭದಲ್ಲಿ 92 ಕೋಟಿ ಖರ್ಚು ಮಾಡಿ ಆರತಿ ಮಾಡಿ ಜನ ಪೂಜೆ ಮಾಡಬೇಕೆ? ಮೌಢ್ಯತೆಗೆ ನಮ್ಮ ವಿರೋಧವಿದೆ ಎಂದರು.

ಸಿಎಂಗೆ ಕಪ್ಪು ಬಾವುಟ ಪ್ರದರ್ಶಿಸಲು ಮುಂದಾದ ನೂರಾರು ದಸಂಸ ಮುಖಂಡರ ಬಂಧನ

ಮಂಡ್ಯ,ಮೇ 8– ಶೋಷಿತ ಸಮುದಾಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ವಂಚಿಸುತ್ತಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡಲು ಮುಂದಾಗಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನೂರಾರು ಕಾರ್ಯಕರ್ತರನ್ನು ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಪೊಲೀಸರು ಬಂಧಿಸಿದರು.



ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡ್ಯ ನಗರ ಪ್ರವಾಸದಲ್ಲಿದ್ದ ವೇಳೆ ಡಿಸಿಸಿ ಬ್ಯಾಂಕ್‌ಗೆ ಶಂಕು ಸ್ಥಾಪನೆ ಹಾಗೂ ಮೈಷುಗರ್ ಕಾರ್ಖಾನೆಯಲ್ಲಿ ನಾಲ್ವಡಿ ಪುತ್ಥಳಿ ಅನಾವರಣಗೊಳಿಸಿ, ಮೈಷುಗರ್ ವೃತ್ತದಿಂದ ಜೆ.ಸಿ.ವೃತ್ತದ ಮಾರ್ಗವಾಗಿ, ಕುರುಬರ ಹಾಸ್ಟೆಲ್‌ಗೆ ತೆರಳುವಾಗ ಜೆ.ಸಿ.ವೃತ್ತದಲ್ಲಿ ಕಪ್ಪು ಬಾವುಟ ಪ್ರದರ್ಶಿಸಲು ನೂರಾರು ಕಾರ್ಯಕರ್ತರು ಸಜ್ಜಾಗಿ ನಿಂತಿದ್ದರು. ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಸಿಎಂ ಭಾಷಣ ಮಾಡುವಾಗ ಬಿಜೆಪಿ ಕಾರ್ಯಕರ್ತರು ಕಪ್ಪುಪಟ್ಟಿ ಪ್ರದರ್ಶನ ಮಾಡಿದಾಗ ಪೊಲೀಸರ ವಿರುದ್ಧ ಕೆಂಡಾಮಂಡಲರಾಗಿದ್ದ ಸಿಎಂ, ಎಎಸ್ಪಿಗೆ ಕೈ ಕೂಡ ಎತ್ತಿದ್ದರು. ಇದರಿಂದ ನಗರದಾದ್ಯಂತ ಖಾಕಿ ಸರ್ಪಗಾವಲು ಹಾಕಿದ್ದ ಜಿಲ್ಲಾ ಪೊಲೀಸ್ ಕಟ್ಟೆಚ್ಚರ ವಹಿಸಿದ್ದರು. ಜೆ.ಸಿ. ವೃತ್ತದಲ್ಲಿ ದಸಂಸ ಕಾರ್ಯಕರ್ತರು ಜಮಾವಣೆಗೊಳ್ಳುತ್ತಿದ್ದಂತೆಯೇ ಬಂಧಿಸಲು ಸಜ್ಜಾಗಿ ನಿಂತಿದ್ದ ಪೊಲೀಸರು ಬಂಧಿಸಿದರು.

ಪಾಂಡವಪುರ ಬಳಿ ಚಿರತೆ ದಾಳಿಗೆ 10 ಮೇಕೆಗಳ ಬಲಿ

ಪಾಂಡವಪುರ, ಮೇ 8– ಚಿರತೆಗಳ ಹಿಂಡು ಮೇಕೆ ಕೊಟ್ಟಿಗೆಯ ಮೇಲೆ ದಾಳಿ ನಡೆಸಿ ಸುಮಾರು ಹತ್ತು ಮೇಕೆಗಳನ್ನು ಕೊಂದು ಪರಾರಿಯಾಗಿರುವ ಘಟನೆ ತಾಲೂಕಿನ ಚಿಕ್ಕಮರಳಿ ಗ್ರಾಮದಲ್ಲಿ ಬುಧವಾರ ಸಂಭವಿಸಿದೆ.

ಗ್ರಾಮದ ಚಿಕ್ಕಬೋರೇಗೌಡ ಎಂಬುವರ ಪುತ್ರ ನಿತಿನ್ ಎಂಬುವರಿಗೆ ಸೇರಿದ ಮೇಕೆಗಳು ಸಾವನ್ನಪ್ಪಿದ್ದು, ರೈತನಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ.



ಬುಧವಾರ ಮಧ್ಯರಾತ್ರಿ ಮನೆ ಪಕ್ಕದಲ್ಲಿ ಇರುವ ಮೇಕೆಯ ಕೊಟ್ಟಿಗೆಗೆ ಚಿರತೆಗಳ ಹಿಂಡು ದಾಳಿ ನಡೆಸಿ ಮೇಕೆಗಳ ಕುತ್ತಿಗೆ ಭಾಗವನ್ನು ಹಿಡಿದು ಮೇಕೆಗಳನ್ನು ಸಾಯಿಸಿ ರಕ್ತ ಕುಡಿದು ಪರಾರಿಯಾಗಿವೆ. ಘಟನೆಯಲ್ಲಿ ಸುಮಾರು 10 ಮೇಕೆಗಳು ಸಾವನ್ನಪ್ಪಿವೆ. ಮೇಕೆಗಳನ್ನು ಕೊಂದಿರುವ ಚಿರತೆಗಳು ಎರಡು ಮೇಕೆಯನ್ನು ಹೊತ್ತೊಯ್ದಿವೆ. ಉಳಿದ ಎಂಟು ಮೇಕೆಗಳನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿವೆ. ಗುರುವಾರ ಬೆಳಿಗ್ಗೆ ಎದ್ದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಸಾವನ್ನಪ್ಪಿರುವ ಮೇಕೆಗಳು ಹೈಬ್ರಿಡ್ ಥಳಿಯ ಮೇಕೆಗಳಾಗಿದ್ದು ಒಂದೊಂದು ಮೇಕೆಗಳು ಸಹ 18 ರಿಂದ 20 ಸಾವಿರ ಬೆಲೆ ಬಾಳುತ್ತಿದ್ದವು ಎನ್ನಲಾಗಿದ್ದು, ಘಟನೆಯಿಂದ ಅಂದಾಜು 2 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ. ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳು, ಪಶುಸಂಗೋಪನ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಮೂರನೇ ಪುಟದಿಂದ

ಭಾರತದ 'ಸುದರ್ಶನ ಚಕ್ರ'!

ಅಷ್ಟಕ್ಕೇ ನಿಲ್ಲದ ಪಾಕ್ ಇಂದು ಮುಂಜಾನೆ ಸುಮಾರು 1 ಗಂಟೆ ವೇಳೆ ಯಲ್ಲಿ ಭಾರತದತ್ತ ಹಾರಿಸಿದ ಕ್ಷಿಪಣಿ ಗಳನ್ನು ಭಾರತದ S-400 'ಸುದರ್ಶನ ಚಕ್ರ' ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆ ಯು ಯಶಸ್ವಿಯಾಗಿ ಹೊಡೆದುರುಳಿಸಿತು. ಅದೇ ವೇಳೆ ಪಾಕಿಸ್ತಾನದ ಅಪ್ರಚೋದಿತ ದಾಳಿಗೆ ಪ್ರತೀಕಾರವಾಗಿ ಇಂದು ಸಂಜೆ ಭಾರತೀಯ ಸೇನೆ ಲಾಹೋರ್ ಮೇಲೆ ಡ್ರೋನ್ ದಾಳಿ ನಡೆಸಿ, ಏರ್ ಡಿಫೆನ್ಸ್ ಸಿಸ್ಟಮ್ ಅನ್ನು ಧ್ವಂಸಗೊಳಿಸಿತ್ತು.

ಭಾರತದ ಶ್ರೀನಗರ, ಜಮ್ಮು, ಅಮೃತಸರ, ಲುಧಿಯಾನ, ಭಟಿಂಡಾ, ಚಂಡೀಗಢ, ಫಲೋಡಿ ಮತ್ತು ಭುಜ್‌ನಲ್ಲಿರುವ ಪ್ರಮುಖ ನೆಲೆಗಳು ಸೇರಿದಂತೆ ಉತ್ತರ ಮತ್ತು ಪಶ್ಚಿಮ ಭಾರತದಾದ್ಯಂತ 15 ಮಿಲಿಟರಿ ಘಟಕಗಳನ್ನು ಗುರಿಯಾಗಿಸಿಕೊಂಡು ಪಾಕ್ ದಾಳಿಗೆ ಯತ್ನಿಸಿ, ವಿಫಲವಾ ಗಿದ್ದ ಪಾಕಿಸ್ತಾನ, ಇಂದು ರಾತ್ರಿ 9 ಗಂಟೆ ಸುಮಾರಿಗೆ ಜಮ್ಮುವಿನ ಜನ ವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿದ್ದು, ಭಾರತೀಯ ಸೇನೆ S-400 'ಸುದರ್ಶನ ಚಕ್ರ' ಮೂಲಕ ಅವೆಲ್ಲವನ್ನೂ ಧ್ವಂಸ ಗೊಳಿಸಿದೆ. ಇಂದು ರಾತ್ರಿ ಪಾಕ್ ಸೇನೆ ಜಮ್ಮು ಏರ್‌ಪೋರ್ಟ್, ಜಮ್ಮು ವಿವಿ, ಪಠಾಣ್ ಕೋಟ್, ಪೂಂಚ್, ಥಾಂಗ್ಧಾರ್, ಕುಪ್ವಾರ ಪಟ್ಟಣ, ಪಂಜಾಬ್‌ನ ಗುರುದಾಸಪುರ, ರಾಜಾಸ್ತಾನದ ಜೈಸಲ್ಮೇರ್ ಮುಂತಾದೆಡೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿ ವಿಫಲವಾಗಿದೆ.

ಮುನ್ನೆಚ್ಚರಿಕೆ: ಪಾಕಿಸ್ತಾನ ದಾಳಿ ಆರಂಭವಾಗುತ್ತಿದ್ದಂತೆಯೇ ಸ್ಥಳೀಯ ಪೊಲೀಸರು ಧ್ವನಿವರ್ಧಕದ ಮೂಲಕ ಲೈಟ್‌ಗಳು ಮತ್ತು ವಾಹನಗಳಲ್ಲಿ ತೆರಳುವವರು ಹೆಡ್‌ಲೈಟ್‌ಗಳನ್ನು ಹಾಫ್ ಮಾಡುವಂತೆ ಸೂಚಿಸುತ್ತಿದ್ದರು. ಕೆಲ ಸಮಯದಲ್ಲೇ ಈ ಎಲ್ಲಾ ಪ್ರದೇಶ ಗಳಲ್ಲೂ ಬ್ಲಾಕ್‌ಔಟ್ (ವಿದ್ಯುತ್ ಕಡಿತ) ಮಾಡಲಾಗಿತ್ತು. ಈ ದಾಳಿ ಸಂಬಂಧ ಸುದ್ದಿ ಮಾಧ್ಯಮಕ್ಕೆ ದೂರವಾಣಿ ಮೂಲಕ ವಿವರಣೆ ನೀಡಿದ ಜಮ್ಮುವಿನಲ್ಲಿರುವ ವಿಧಿ–ವಿಜ್ಞಾನ ತಜ್ಞ ಡಾ. ದಿನೇಶ್ ರಾವ್ ಅವರು, ಪಾಕಿಸ್ತಾನ ಸೇನೆಯು ಜಮ್ಮು ಏರ್‌ಪೋರ್ಟ್ ಹಾಗೂ ಜನವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಿದ್ದು, ಅದನ್ನು ಭಾರತೀಯ ಸೇನೆ ಸಮರ್ಥವಾಗಿ ಎದುರಿಸಿದೆ. ಪಾಕಿಸ್ತಾನ ಕ್ಷಿಪಣಿಗಳಿಗಿಂತ ಹೆಚ್ಚಾಗಿ ಡ್ರೋನ್‌ಗಳನ್ನು ಬಳಸುತ್ತಿದೆ. ಆದರೆ ಈ ಡ್ರೋನ್‌ಗಳೂ ಕೂಡ ಶಕ್ತಿಯುತವಾದ ಸ್ಫೋಟಕಗಳನ್ನು ಹೊತ್ತು ಬರುತ್ತಿದ್ದು, ಭಾರತೀಯ ಸೇನೆ ಆಗಸದಲ್ಲೇ ಅವುಗಳನ್ನು ಹೊಡೆದು ರುಳಿಸುತ್ತಿದೆ ಎಂದು ತಿಳಿಸಿದರು.

ಸುದರ್ಶನ ಚಕ್ರ ವಿಶೇಷತೆ: ಸುದರ್ಶನ ಚಕ್ರ ಎಂದು ಕರೆಯಲ್ಪಡುವ S-400 ಟ್ರಯಂಫ್, ವಿಶ್ವದ ಅತ್ಯಂತ ಮುಂದುವರಿದ ದೀರ್ಘ–ಶ್ರೇಣಿಯ ವಾಯು ರಕ್ಷಣಾ ವ್ಯವಸ್ಥೆಗಳಲ್ಲಿ ಒಂದಾಗಿದೆ. ರಷ್ಯಾ ನಿರ್ಮಿತ ಮತ್ತು ಭಾರತದ ಕಾರ್ಯ ತಂತ್ರದ ವಾಯು ರಕ್ಷಣಾ ಕಮಾಂಡ್‌ಗೆ ಇದು ಸಂಯೋಜಿಸಲ್ಪಟ್ಟಿದೆ. ರಹಸ್ಯ ವಿಮಾನಗಳು, ಕ್ರೂಸ್ ಕ್ಷಿಪಣಿಗಳು, ಡ್ರೋನ್ ಗಳು ಮತ್ತು ಯುದ್ಧತಂತ್ರದ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಸೇರಿದಂತೆ ವ್ಯಾಪಕ ಶ್ರೇಣಿಯ ವಾಯುಗಾಮಿ ಬೆದರಿಕೆಗಳನ್ನು ಪತ್ತೆಹಚ್ಚುವ ಮತ್ತು ಹೊಡೆದು ರುಳಿಸುವ ಸಾಮರ್ಥ್ಯವನ್ನು ಹೊಂದಿದೆ.

ಹೇಗೆ ಕೆಲಸ ಮಾಡುತ್ತೆ?: ಈ ವ್ಯವಸ್ಥೆಯು 360–ಡಿಗ್ರಿ ಕಣ್ಗಾವಲು ನೀಡುವ ಬಹು–ಬ್ಯಾಂಡ್ ಹಂತದ ಅರೇ ರಾಡಾರ್‌ಗಳ ಜಾಲವನ್ನು ಬಳಸಿಕೊಳ್ಳು ತ್ತದೆ. 600 ಕಿ.ಮೀ ದೂರದಿಂದ ಏಕಕಾಲ ದಲ್ಲಿ ಎದುರಾಗುವ 300 ಗುರಿಗಳನ್ನು ಪತ್ತೆಹಚ್ಚುತ್ತದೆ. ಬೆದರಿಕೆಗಳನ್ನು ಗುರುತಿಸಿದ ನಂತರ, ಕಮಾಂಡ್ ಸೆಂಟರ್ ತನ್ನ ಲೇಯರ್ಡ್ ಆರ್ಸೆನಲ್‌ನಿಂದ ಸೂಕ್ತ ಕ್ಷಿಪಣಿಯನ್ನು ಆಯ್ಕೆ ಮಾಡಿ ಅದನ್ನು ಉಡಾಯಿಸುತ್ತದೆ. ಪ್ರತಿಯೊಂದು ಕ್ಷಿಪಣಿಯು ಜಡತ್ವ, ಸಕ್ರಿಯ ಮತ್ತು ನಿಷ್ಕ್ರಿಯ ಹೋಮಿಂಗ್ ತಂತ್ರಜ್ಞಾನಗಳ ಸಂಯೋಜನೆಯನ್ನು ಬಳಸುತ್ತದೆ. ಇದು ಜಾಮಿಂಗ್ ಮತ್ತು ಎಲೆಕ್ಟ್ರಾನಿಕ್ ಯುದ್ಧಕ್ಕೆ ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ನೀಡುತ್ತದೆ.

ಯುದ್ಧ ಪರಿಸ್ಥಿತಿಗಳಲ್ಲಿ, S-400 ಏಕಕಾಲದಲ್ಲಿ 36 ಟಾರ್ಗೆಟ್ ಗಳನ್ನು ವಿಫಲಗೊಳಿಸಬಹುದು. ವಿವಿಧ ಶ್ರೇಣಿಗಳಲ್ಲಿ ಗುರಿಗಳನ್ನು ನಿಗ್ರಹಿಸಲು ಸೂಕ್ತವಾದ ಕ್ಷಿಪಣಿಗಳನ್ನು ಉಡಾಯಿಸುತ್ತದೆ. ಇವುಗಳಲ್ಲಿ ದೂರದ ಗುರಿಗಳಿಗೆ 40N6 (400 ಕಿಮೀ ವರೆಗೆ), ಫೈಟರ್ ಜೆಟ್‌ಗಳು ಅಥವಾ ನಿಖರ–ನಿರ್ದೇಶಿತ ಯುದ್ಧ ಸಾಮಗ್ರಿಗಳಂತಹ ವೇಗದ, ಚುರುಕಾದ ಕ್ಷಿಪಣಿಗಳನ್ನು ವಿಫಲಗೊಳಿಸಲು ವಿನ್ಯಾಸಗೊಳಿಸಲಾದ 48N6DM (250 ಕಿಮೀ ವರೆಗೆ), ಮತ್ತು 9M96E/E2 (120 ಕಿಮೀ ವರೆಗೆ) ಸೇರಿವೆ. ಈ ವ್ಯವಸ್ಥೆಯು 30 ಕಿಮೀ ವರೆಗಿನ ಎತ್ತರವನ್ನು ಆವರಿಸುತ್ತದೆ. ಎತ್ತರಕ್ಕೆ ಹಾರುವ ಬ್ಯಾಲಿಸ್ಟಿಕ್ ಬೆದರಿಕೆಗಳ ವಿರುದ್ಧವೂ ದೃಢವಾದ ರಕ್ಷಣೆ ನೀಡುತ್ತದೆ.

'ಆಪರೇಷನ್ ಸಿಂಧೂರ್' ನಿರಂತರ

ಪ್ರತಿಯಾಗಿ ಪಾಕಿಸ್ತಾನ ಪ್ರತೀಕಾರ ತೀರಿಸಿ ಕೊಂಡರೆ ಭಾರತ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ. ಆದರೆ ಈಗಾಗಲೇ ಆಪರೇಷನ್ ಸಿಂಧೂರ್‌ಗೆ ಪ್ರತಿಯಾಗಿ, ಪಾಕಿಸ್ತಾನಿ ಸೇನೆಯು ಪೂಂಚ್–ರಾಜೌರಿ ಪ್ರದೇಶದ ನಿಯಂತ್ರಣ ರೇಖೆಯುದ್ದಕ್ಕೂ ಫಿರಂಗಿ ದಾಳಿ ನಡೆಸಿ 15 ನಾಗರಿಕರನ್ನು ಬಲಿಪಡೆದುಕೊಂಡಿದೆ ಎಂದರು.

ಸಿಂಧೂರ್ ಕಾರ್ಯಾಚರಣೆಗೆ ವಿಪಕ್ಷಗಳ ಮೆಚ್ಚುಗೆ!: ಸರ್ವಪಕ್ಷಗಳ ಸಭೆಯಲ್ಲಿ ಆಪರೇಷನ್ ಸಿಂಧೂರ್ ಕಾರ್ಯಾ ಚರಣೆಗೆ ವಿಪಕ್ಷಗಳು ಮೆಚ್ಚುಗೆ ಸೂಚಿಸಿದವು. ಈ ವೇಳೆ ಕಾರ್ಯಾ ಚರಣೆಯ ಮಾಹಿತಿಯನ್ನು ಬಿಚ್ಚಿಟ್ಟ ರಾಜನಾಥ್ ಸಿಂಗ್ ಭಾರತದ ದಾಳಿಗೆ 100ಕ್ಕೂ ಹೆಚ್ಚು ಉಗ್ರರು ಸಾವನ್ನಪ್ಪಿದ್ದಾರೆ. ಆದರೆ, ಇದು ಅಂತಿಮ ಮಾಹಿತಿಯಲ್ಲ. ಎಲ್ಲ ಅಂಕಿ–ಅಂಶಗಳನ್ನು ಕ್ರೋಢೀಕರಿಸುತ್ತಿ ದ್ದೇವೆ. ಅದಾದ ಬಳಿಕ ಸ್ಪಷ್ಟ ಸಾವಿನ ಸಂಖ್ಯೆ ಸಿಗಲಿದೆ ಎಂದು ಹೇಳಿದ್ದಾರೆ. ಅದಲ್ಲದೇ ಒಂದಿಷ್ಟು ಮಾಹಿತಿಗಳನ್ನು ದೇಶದ ಸುರಕ್ಷತೆ ದೃಷ್ಟಿಯಿಂದ ಹೇಳಲು ಆಗಲ್ಲ ಎಂದು ಕೂಡ ರಾಜನಾಥ್ ಸಿಂಗ್ ಹೇಳಿದ್ದಾರೆ.

ರಾಜನಾಥ್ ಸಿಂಗ್ 5 ನಿಮಿಷ ಮಾತನಾಡಿದರೆ, ಉಳಿದ ನಾಯಕರಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ತಲಾ 4–5 ನಿಮಿಷ ಕಾಲಾವಕಾಶ ನೀಡಲಾಗಿತ್ತು. ಈ ವೇಳೆ ಪ್ರತಿಪಕ್ಷಗಳ ನಾಯಕರು ಸಶಸ್ತ್ರ ಪಡೆಗಳಿಗೆ ಅಭಿನಂದನೆ ಸಲ್ಲಿಸಿದ್ದು, ಸರ್ಕಾರದ ಕ್ರಮಗಳನ್ನು ಬೆಂಬಲಿಸಿವೆ. ಆರಂಭದಿಂದಲೂ ನಾವು ಸರ್ಕಾರದೊಂದಿಗೆ ಇದ್ದೇವೆ. ಮುಂದೆಯೂ ಈ ವಿಚಾರದಲ್ಲಿ ಸರ್ಕಾರದ ಪರ ಇರುತ್ತೇವೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಸಭೆಗೆ ಗೈರಾಗಿದ್ದ ಪ್ರಧಾನಿ ನರೇಂದ್ರ ಮೋದಿ ವಿಪಕ್ಷಗಳಿಗೆ ಸಂದೇಶವನ್ನು ಕಳುಹಿಸಿ ದ್ದರು. ಇಂತಹ ಟೈಮ್‌ನಲ್ಲಿ ಎಲ್ಲರೂ ಒಟ್ಟಿಗೆ ದೇಶದ ಪರ ನಿಲ್ಲಬೇಕು ಎಂದು ಹೇಳಿದರು.

ಪ್ರಧಾನಿ ಮೋದಿ ಗೈರಿಗೆ ವಿಪಕ್ಷಗಳು ಆಕ್ಷೇಪ: ಲೋಕಸಭೆ ವಿಪಕ್ಷನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಎಂಐಎಂ ಸಂಸದ ಅಸಾದುದ್ದೀನ್ ಸೇರಿ ಹಲವರು ಭಾಗವಹಿಸಿದ್ದರು. ಸರ್ವಪಕ್ಷ ಸಭೆಯ ನೇತೃತ್ವವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಹಿಸಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಸಭೆಯಲ್ಲಿ ಭಾಗವಹಿಸಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಸರ್ವಪಕ್ಷಗಳ ಸಭೆಗೆ ಗೈರಾಗಿದ್ದು, ವಿಪಕ್ಷಗಳ ಕೋಪಕ್ಕೆ ಕಾರಣವಾಯಿತು. ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿಯವರ ಅನುಪಸ್ಥಿತಿಯನ್ನು ಪ್ರಶ್ನಿಸಿದರು. ಅದಾದ ಬಳಿಕ ಮೋದಿ ಗೈರನ್ನು ಆಮ್ ಆದ್ಮಿ ಪಕ್ಷ ಮತ್ತು ಸಮಾಜವಾದಿ ಪಕ್ಷಗಳು ಕೂಡ ಪ್ರಶ್ನಿಸಿದವು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್‌ಗಿಂತ ಮೇಲಿರುವವರು, ಸರ್ವಪಕ್ಷಗಳ ಸಭೆಗೆ ಬರಲ್ಲ ಏನು ಮಾಡೋದು ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಒಟ್ಟಿನಲ್ಲಿ, ಆಪರೇಷನ್ ಸಿಂಧೂರ ಕಾರ್ಯಾಚರಣೆಗೆ ಸರ್ವಪಕ್ಷಗಳ ಸಭೆಯಲ್ಲಿ ಸಂಪೂರ್ಣ ಬೆಂಬಲ ವ್ಯಕ್ತವಾಗಿದ್ದು, ಸೇನೆಯ ಸಾಧನೆಗೆ ಮೆಚ್ಚುಗೆ ವ್ಯಕ್ತವಾಗಿದೆ. ಈ ಸಮಯದಲ್ಲಿ ರಾಜನಾಥ್ ಸಿಂಗ್ ಆಪರೇಷನ್ ಸಿಂಧೂರ್ ಇನ್ನೂ ಮುಗಿದಿಲ್ಲ ಎಂದಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಸಭೆಯ ಬಳಿಕ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ನಾವು ಸರ್ಕಾರಕ್ಕೆ ನಮ್ಮ ಸಂಪೂರ್ಣ ಬೆಂಬಲ ನೀಡುವುದನ್ನು ಮುಂದುವರಿಸುತ್ತೇವೆ. ಆದರೆ ಅವರು (ಕೇಂದ್ರ ಸರ್ಕಾರ) ನಾವು ಚರ್ಚಿಸಲು ಬಯಸದ ಕೆಲವು ವಿಷಯಗಳಿರುವುದಾಗಿ ಹೇಳಿದ್ದಾರೆ ಎಂದು ತಿಳಿಸಿದರು.

ಭಾರತದ ದಾಳಿಗೆ ಪತರಗುಟ್ಟಿದ ಪಾಕಿಸ್ತಾನ

ವಿಮಾನಗಳನ್ನು ಗುರುತಿಸುವ ಏರ್ ಡಿಫೆನ್ಸ್‌ಗಳನ್ನು ಭಾರತೀಯ ವಾಯು ಪಡೆ ಧ್ವಂಸಗೊಳಿಸಿತ್ತು. ಆನಂತರ ಈ ನಗರಗಳ ಮೇಲೆ ವಾಯು ಸೇನೆ ದಾಳಿ ನಡೆಸಿದರೆ ಮತ್ತೊಂದೆಡೆ ನೌಕಾಸೇನೆಯೂ ಕಾರ್ಯಾಚರಣೆಗಿಳಿದಿದ್ದು, ಕರಾಚಿ ಬಂದರು ಮೇಲೆ ದಾಳಿ ನಡೆಸಿದೆ.

ಇಂದು ಪಾಕ್ ಸೇನೆ ಜೊತೆ ಭಯೋತ್ಪಾದಕರೂ ಕೂಡ ಕೈಜೋಡಿಸಿದ್ದು, ಜಮ್ಮು ಪ್ರದೇಶವನ್ನು ಭಯೋತ್ಪಾದ ಕರ ಸೂಸೈಡ್ ಬಾಂಬರ್ ಗಳ ಪ್ರಯೋಗಿಸಿದ್ದು, ಅವು ಗಳನ್ನೂ ವಿಫಲಗೊಳಿಸಲಾಗಿದೆ. ಭಾರತೀಯ ಸೇನಾ ನೆಲೆಗೆ ಯಾವುದೇ ಹಾನಿ ಯಾಗಿಲ್ಲ. ಗಡಿಯಲ್ಲಿ ಅನುಮಾ ನಾಸ್ಪದವಾಗಿ ಯಾರೇ ಕಂಡು ಬಂದರೂ ಎಚ್ಚರಿಕೆಯನ್ನೂ ನೀಡದೆಯೇ ಗುಂಡು ಹಾರಿಸುವಂತೆ ಸೇನಾ ಪಡೆಗಳಿಗೆ ಸೂಚನೆ ನೀಡಲಾಗಿದೆ.

ಪಾಕ್‌ಗೆ ಅಂತಿಮ ಎಚ್ಚರಿಕೆ: ಇಸ್ಲಮಾಬಾದ್ ಸೇರಿದಂತೆ ಐದು ಪ್ರಮುಖ ನಗರಗಳ ಮೇಲೆ ಭಾರತೀಯ ಸೇನೆ ದಾಳಿ ನಡೆಸುವ ಮುನ್ನ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರು, ಯುದ್ಧ ಪ್ರಚೋದಿತ ದಾಳಿಗಳನ್ನು ನಿಲ್ಲಿಸುವಂತೆ ಪಾಕ್‌ಗೆ ಎಚ್ಚರಿಕೆ ನೀಡಿದ್ದರು. ಯುದ್ಧ ಪ್ರಚೋದನೆ ನಿಲ್ಲದಿದ್ದರೆ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಖಡಕ್ ಎಚ್ಚರಿಕೆ ನೀಡಿದ್ದರು. ಆದರೆ, ಪಾಕ್ ಕಡೆಯಿಂದ ಹಮಾಸ್ ಮಾದರಿಯ ಕ್ಷಿಪಣಿ ದಾಳಿ ಆರಂಭವಾದ ಹಿನ್ನೆಲೆಯಲ್ಲಿ ಭಾರತೀಯ ಸೇನೆ ಇಸ್ಲಮಾ ಬಾದ್ ಸೇರಿದಂತೆ ಪ್ರಮುಖ ನಗರಗಳ ಮೇಲೆ ಕ್ಷಿಪಣಿ ದಾಳಿ ನಡೆಸುವ ಮೂಲಕ ಪ್ರತಿದಾಳಿ ನಡೆಸಿದೆ.

ಅಡಗಿದ ಪಾಕ್ ಪ್ರಧಾನಿ: ಇಸ್ಲಾಮಾಬಾದ್‌ನಲ್ಲಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ನಿವಾಸಕ್ಕೆ 20 ಕಿ.ಮೀ. ಸನಿಹದಲ್ಲೇ ಭಾರೀ ಕ್ಷಿಪಣಿ ಸ್ಫೋಟ ನಡೆದಿರುವುದರಿಂದ ಷರೀಫ್ ಅವರನ್ನು ರಹಸ್ಯ ಅಡಗುತಾಣಕ್ಕೆ ಸ್ಥಳಾಂತರಿಸಲಾಗಿದೆ. ಎಲ್‌ಓಸಿಯಿಂದ ನೂರಾರು ಕಿ.ಮೀ. ದೂರದ ನಗರಗಳಿಗೂ ಮುನ್ನುಗ್ಗಿ ಬರುತ್ತಿರುವ ಕ್ಷಿಪಣಿ ದಾಳಿಗೆ ಪಾಕಿಸ್ತಾನ ಪತರಗುಟ್ಟುವಂತಾಗಿದೆ.

ಶಾಲಾ–ಕಾಲೇಜಿಗೆ ರಜೆ: ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿರುವುದರಿಂದ ಜಮ್ಮು–ಕಾಶ್ಮೀರ ಹಾಗೂ ಪಂಜಾಬ್‌ನಲ್ಲಿ ಮೂರು ದಿನ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಜಮ್ಮುವಿನ ನಿವಾಸಿಗಳು ಮುಂಜಾಗ್ರತೆಯಿಂದ ಬಂಕರ್‌ಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಇಬ್ಬರು ಪೈಲೆಟ್ಸ್ ವಶಕ್ಕೆ: ಭಾರತದ ಮೇಲೆ ವಾಯುದಾಳಿ ನಡೆಸಲು ಬಂದ ಎಫ್–16 ಫೈಟರ್ ಜೆಟ್‌ಗಳನ್ನು ಭಾರತೀಯ ಸೇನೆ ಉಡಾಯಿಸಿದ ವೇಳೆ ಅದರಿಂದ ಕೆಳಗೆ ಹಾರಿದ ಇಬ್ಬರು ಪೈಲೆಟ್‌ಗಳನ್ನು ಸೇನೆ ವಶಕ್ಕೆ ಪಡೆದಿದೆ. ಅಕ್ನೂರ್‌ನಲ್ಲಿ ಓರ್ವ ಫೈಲೆಟ್ ಸಿಕ್ಕಿಬಿದ್ದರೆ, ಜೆಸೆಲ್ಮೇರ್‌ನಲ್ಲಿ ಮತ್ತೋರ್ವ ಫೈಲೆಟ್ ಭಾರತೀಯ ಸೇನೆಗೆ ಸಿಕ್ಕಿ ಬಿದ್ದಿದ್ದಾನೆ.



ಲಾಹೋರ್ ಜಿನ್ನಾ ಮಾರ್ಕೆಟ್ ಧ್ವಂಸ: ಪಾಕಿಸ್ತಾನದ ಪ್ರಮುಖ ನಗರ ಲಾಹೋರ್ ಮೇಲೆ ಭಾರತೀಯ ವಾಯುಪಡೆ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಅಲ್ಲಿನ ಪ್ರತಿಷ್ಠಿತ ಜಿನ್ನಾ ಮಾರ್ಕೆಟ್ ಸಂಪೂರ್ಣವಾಗಿ ಧ್ವಂಸವಾಗಿದೆ.

ಗಡಿಯಲ್ಲಿ ಗುಂಡಿನ ಚಕಮಕಿ: ವಾಯು ದಾಳಿ ನಡುವೆ ಭಾರತ–ಪಾಕ್ ಗಡಿಯಲ್ಲಿ ಉಭಯ ಸೇನೆಗಳು ಗುಂಡಿನ ಚಕಮಕಿ ಮುಂದುವರೆದಿದೆ. ಭಾರತ ಸೇನೆ ಪಾಕಿಸ್ತಾನದ ಪ್ರಮುಖ ನಗರಗಳನ್ನು ಗುರಿಯಾಗಿಸಿ ಕ್ಷಿಪಣಿ ನಡೆಸುತ್ತಿರುವುದರಿಂದ ಪಾಕಿಸ್ತಾನ ಸೈನಿಕರು ಜಮ್ಮು ಗಡಿಯಲ್ಲಿ ಗುಂಡಿನ ದಾಳಿ ಹೆಚ್ಚಿಸಿದ್ದಾರೆ. ಇದಕ್ಕೆ ಭಾರತದ ಸೈನಿಕರೂ ಪ್ರತ್ಯುತ್ತರ ನೀಡುತ್ತಿದ್ದಾರೆ. ಮತ್ತೊಂದೆಡೆ ಬಲೂಚಿಸ್ತಾನ್ ಪಡೆ, ಪಾಕಿಸ್ತಾನದ ಸೇನೆ ಮೇಲೆ ದಾಳಿ ಮುಂದುವರೆಸಿದೆ.

ಪಶ್ಚಿಮ ಭಾರತದ 24 ವಿಮಾನ ನಿಲ್ದಾಣ ಬಂದ್

ಉಳಿದೆಡೆ ಪ್ರಯಾಣಿಕರು 3 ಗಂಟೆ ಮುಂಚಿತವಾಗಿ ತಪಾಸಣೆಗೊಳಪಡಲು ಕಟ್ಟುನಿಟ್ಟಿನ ಸೂಚನೆ

ನವದೆಹಲಿ, ಮೇ 8– ದೇಶದಲ್ಲಿ ಯುದ್ಧದ ವಾತಾವರಣ ನಿರ್ಮಾಣವಾಗಿರುವುದರಿಂದ ಭಾರತ ಮತ್ತು ಪಾಕಿಸ್ತಾನಕ್ಕೆ ಹೊಂದಿಕೊಂಡಂತಿರುವ ಪಶ್ಚಿಮ ಭಾರತದ 24 ವಿಮಾನ ನಿಲ್ದಾಣಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

ಇಂದು ರಾತ್ರಿ ಆದೇಶ ಹೊರಡಿಸಿರುವ ವಿಮಾನ ಯಾನ ಸಚಿವಾಲಯವು ತಕ್ಷಣದಿಂದಲೇ ದೆಹಲಿ, ಶ್ರೀನಗರ, ಅಮೃತಸರ ಸೇರಿದಂತೆ 24 ವಿಮಾನ ನಿಲ್ದಾಣಗಳನ್ನು ಬಂದ್ ಮಾಡಿರುವುದಾಗಿ ತಿಳಿಸಿದೆ. ಅಲ್ಲದೇ ಈ ವಿಮಾನ ನಿಲ್ದಾಣಗಳಿಗೆ ವಿಮಾನ ಹಾರಾಟ ನಡೆಸದಂತೆ ಸಂಬಂಧಿಸಿದ ಸಂಸ್ಥೆಗಳಿಗೆ ಸೂಚಿಸಲಾಗಿದೆ.

ದೇಶದ ಉಳಿದ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರು 3 ಗಂಟೆ ಮುಂಚಿತವಾಗಿಯೇ ಆಗಮಿಸಿ ತಪಾಸಣೆಗೆ ಒಳಪಡಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಪಶ್ಚಿಮ ಭಾರತದ ವಿಮಾನ ನಿಲ್ದಾಣಗಳಿಂದ ವಿಮಾನ ಹಾರಾಟ ನಡೆದರೆ ಅದರ ಮೇಲೆ ಪಾಕಿಸ್ತಾನ ಸೇನೆ ಕ್ಷಿಪಣಿ ದಾಳಿ ನಡೆಸುವ ಸಾಧ್ಯತೆ ಇದೆ. ಅಲ್ಲದೇ ವಿಮಾನ ಹಾರಾಟವಿದ್ದಲ್ಲಿ ನಮ್ಮ ವಾಯು ಮಾರ್ಗಕ್ಕೆ ಅನ್ಯ ಮಾರ್ಗದಿಂದ ಶತ್ರು ದೇಶದ ವಿಮಾನಗಳು ನುಸುಳಿದಾಗ ಪತ್ತೆ ಹಚ್ಚಲು ತುಸು ಸಮಯ ಬೇಕಾಗಬಹುದು. ಅಷ್ಟರಲ್ಲಿ ಅನಾಹುತ ಸಂಭವಿಸದಂತೆ ಈ ಕ್ರಮವನ್ನು ಕೈಗೊಳ್ಳಲಾಗಿದೆ.



ಭಾರತದಿಂದ ರಕ್ಷಿಸಿ ಎಂದು ಸಂಸತ್ತಿನಲ್ಲೇ ಕಣ್ಣೀರಿಟ್ಟ ಪಾಕ್ ಸಂಸದ



ಇಸ್ಲಾಮಾಬಾದ್, ಮೇ 8– ಪಹಲ್ಗಾಮ್ ದಾಳಿ ನಂತರ ಭಾರತ ನಡೆಸಿದ ದಾಳಿಯಿಂದಾಗಿ ಪಾಕಿಸ್ತಾನದಲ್ಲಿ ಭೀತಿ ಆವರಿಸಿದೆ. ಭಾರತ ರಾವಲ್ಪಿಂಡಿಯ ಕ್ರಿಕೆಟ್ ಕ್ರೀಡಾಂಗಣವನ್ನು ಈಗಾಗಲೇ ಡ್ರೋನ್ ಮೂಲಕ ಭಾರತೀಯ ಸೇನೆ ನಾಶಪಡಿಸಿದೆ. ಈ ಪರಿಣಾಮ ಪಾಕಿಸ್ತಾನ ಸಂಸತ್ತಿನಲ್ಲಿ ಸಂಸದ ತಹೀರ್ ಇಕ್ಬಾಲ್ ಕಣ್ಣೀರಿಡುತ್ತಿರುವ ವಿಡಿಯೋವೊಂದು ಬಹಿರಂಗವಾಗಿದೆ. ಇದರಲ್ಲಿ ಅವರು ಭಾರತದ ದಾಳಿಯ ಭಯದಲ್ಲಿ, ಓ ದೇವರೇ, ದಯವಿಟ್ಟು ನಮ್ಮನ್ನು ರಕ್ಷಿಸು ಎಂದು ಹೇಳುತ್ತಿರುವುದು ದಾಖಲಾಗಿದೆ. ಅಲ್ಲಾಹನು ನಮ್ಮನ್ನು ರಕ್ಷಿಸಲಿ ಎಂದು ತಾಹಿರ್ ಇಕ್ಬಾಲ್ ಪಾಕಿಸ್ತಾನ ಸಂಸತ್ತಿನಲ್ಲಿ ಗದ್ಗದಿತರಾಗಿ ನುಡಿದಿದ್ದಾರೆ.

ಬೀದಿಗಿಳಿದ ಪಾಕ್ ಜನ: ಈ ಮಧ್ಯೆ ಪಾಕಿಸ್ತಾನದ ಸರ್ಕಾರವ ವೈಫಲ್ಯ ಖಂಡಿಸಿ, ಅಲ್ಲಿನ ಜನ ಬೀದಿಗಿಳಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲಾಹೋರ್‌ನಲ್ಲಿ ಬೀದಿಗಿಳಿದಿರುವ ಪಾಕ್ ಜನತೆ ಪ್ರಧಾನಿ ಷರೀಫ್ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಬಿಡುಗಡೆ ಮಾಡಬೇಕೆಂದು ಬೈಕ್ ರ್‍ಯಾಲಿ ನಡೆಸಿ ದ್ದಾರೆ. ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರು ಸೇನಾ ಮುಖ್ಯಸ್ಥರೊಂದಿಗೆ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮುಂದಿನ ನಡೆ ಬಗ್ಗೆ ಚರ್ಚಿಸಿದ್ದಾರೆ. ಈ ಮಧ್ಯೆ ಪಾಕಿಸ್ತಾನದ ಸೇನಾ ಮುಖ್ಯಸ್ಥನನ್ನು ಪದಚ್ಯುತಗೊಳಿಸುವ ವದಂತಿ ದಟ್ಟವಾಗಿ ಹರಡಿದೆ.

ಶಾಸಕ ಸ್ಥಾನದಿಂದ ಜನಾರ್ದನ ರೆಡ್ಡಿ ಅನರ್ಹ

ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಭಾರತ ಸಂವಿಧಾನದ 191 (1) (ಇ) ವಿಧಿಯ ನಿಬಂಧನೆಗಳ ಪ್ರಕಾರ, 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8ರಂತೆ ಶಿಕ್ಷೆ ಪ್ರಕರಣಗೊಂಡ ಮೇ 6ರಿಂದ ಅನರ್ಹತೆ ಜಾರಿಯಾಗಿದೆ. ಸಕ್ಷಮ ನ್ಯಾಯಾಲಯವು ಶಿಕ್ಷೆಗೆ ತಡೆ ನೀಡದ ಹೊರತು ಅವರ ಬಿಡುಗಡೆಯಾದ ದಿನಾಂಕದಿಂದ ಇನ್ನೂ ಆರು ವರ್ಷಗಳವರೆಗೆ ಈ ಅನರ್ಹತೆಯು ಮುಂದುವರೆಯುತ್ತದೆ. ಹೀಗಾಗಿ ಕರ್ನಾಟಕ ವಿಧಾನಸಭೆಯ ಒಂದು ಸ್ಥಾನ ಖಾಲಿಯಾಗಿದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಗಳು ಗುರುವಾರ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 9 ಮೇ 2025

ಕ್ಯಾತಮಾರನಹಳ್ಳಿಯಲ್ಲಿ ಅರೇಬಿಕ್ ಶಾಲೆಗೆ ಡಿಸಿ ನೀಡಿದ್ದ ಆದೇಶಕ್ಕೆ ಹೈಕೋರ್ಟ್ ತಡೆ

ಪೊಲೀಸ್ ಆಯುಕ್ತರ ವರದಿ ಆಧರಿಸಿ ಯಥಾಸ್ಥಿತಿಗೆ ನ್ಯಾಯಾಲಯ ಆದೇಶ



ಮೈಸೂರು, ಮೇ.8(ಬಿಎಲ್ ಯು)– ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ನಡೆಸಲು ಅನುಮತಿ ನೀಡಿದ್ದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರ ಆದೇಶಕ್ಕೆ ತಡೆಯಾಜ್ಞೆ ನೀಡಿರುವ ಹೈಕೋರ್ಟ್ ಯಥಾಸ್ಥಿತಿ ಕಾಪಾಡಲು ಮಧ್ಯಂತರ ಆದೇಶ ನೀಡಿದೆ.

ನ್ಯಾಯಮೂರ್ತಿ ಉಮಾ ನೇತೃತ್ವದ ಏಕ ಸದಸ್ಯ ಪೀಠ ವಿವಾದಿತ ಸ್ಥಳದ ಯಥಾಸ್ಥಿತಿಗೆ ಆದೇಶಿಸಿದೆ.

ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ನಡೆಸಲು ಅಲೀಂ ಸಾಧಿಯಾ ಎಜುಕೇಷನಲ್ ಟ್ರಸ್ಟ್ ಮತ್ತು ಮಸ್ಜೀದ್ ಇ–ಸಿದ್ಧಿಕಿ–ಇ–ಅಕ್ಬರ್ ಟ್ರಸ್ಟ್ ಜಿಲ್ಲಾಡಳಿತಕ್ಕೆ ಮನವಿ ಮಾಡಿತ್ತು. ಅರೇಬಿಕ್ ಶಾಲೆ ನಡೆಸಲು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಅನುಮತಿ ಸಹ ನೀಡಿದ್ದರು. ಹಾಗಾಗಿ ಟ್ರಸ್ಟ್‌ನವರು ವಿವಾದಿತ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಕೂಡ ಆರಂಭಿಸಿದ್ದರು.

ಆದರೆ ಇದಕ್ಕೆ ಕ್ಯಾತಮಾರನಹಳ್ಳಿಯ ಹುಲಿಯಮ್ಮ ದೇವಸ್ಥಾನ ಟ್ರಸ್ಟ್ ಆಕ್ಷೇಪ ವ್ಯಕ್ತಪಡಿಸಿ, ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಿತ್ತು ಈ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ನಾಗಪ್ರಸನ್ನ ನೇತೃತ್ವದ ಏಕ ಸದಸ್ಯ ಪೀಠದಲ್ಲಿ, ಮೇ 2 ರಂದು ವಿಚಾರಣೆ ನಡೆಯಿತು.

ವಿವಾದಿತ ಸ್ಥಳವಿರುವ ಕ್ಯಾತಮಾರನಹಳ್ಳಿ ಕೋಮು ಸೂಕ್ಷ್ಮ ಪ್ರದೇಶವಾಗಿದೆ. ಇಲ್ಲಿ ಆಗಿಂದಾಗೆ ಗಲಭೆಗಳು ನಡೆದು ಸಾರ್ವಜನಿಕರ ಆಸ್ತಿ ಪಾಸ್ತಿಗೆ ನಷ್ಟ ಉಂಟಾಗಿದೆ. ಇದರಿಂದ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ನಡೆಸಲು ಅನುಮತಿ ನೀಡಿದರೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತದೆ ಎಂದು ಮೈಸೂರು ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಜಿಲ್ಲಾಧಿಕಾರಿಗಳಿಗೆ ಫೆಬ್ರವರಿ 14 ರಂದು ಸಲ್ಲಿಸಿದ್ದ ವರದಿಯನ್ನು ಹುಲಿಯಮ್ಮ ದೇವಸ್ಥಾನ ಟ್ರಸ್ಟ್ ಪರ ವಕೀಲ ಮಧುಕರ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಈ ಮೂಲಕ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ಆರಂಭವಾದರೆ ಕ್ಯಾತಮಾರನಹಳ್ಳಿಯಲ್ಲಿ ಕೋಮು ಘರ್ಷಣೆ ಉಂಟಾಗಲಿದೆ ಎಂದು ನ್ಯಾಯಾಲಯಕ್ಕೆ ಮನದಟ್ಟು ಮಾಡಿದರು.

ನ್ಯಾಯಮೂರ್ತಿ ನಾಗಪ್ರಸನ್ನ ರಜೆ ಮೇಲೆ ಹೋಗಬೇಕಿದ್ದ ಹಿನ್ನೆಲೆಯಲ್ಲಿ ಮೂರು ದಿನ ಜಿಲ್ಲಾಧಿಕಾರಿಗಳ ಆದೇಶಕ್ಕೆ ಮಧ್ಯಂತರ ತಡೆ ನೀಡಿ ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿದ್ದರು.

ಮೇ 6 ರಂದು ನ್ಯಾಯಮೂರ್ತಿ ಉಮಾ ನೇತೃತ್ವದ ಏಕ ಸದಸ್ಯ ಪೀಠದಲ್ಲಿ ವಿಚಾರಣೆ ನಡೆಯಿತು. ಈ ಸಂದರ್ಭದಲ್ಲಿ ಪೊಲೀಸ್ ಆಯುಕ್ತರು ನೀಡಿದ್ದ ವರದಿಯನ್ನು ನ್ಯಾಯಾಲಯದ ಮುಂದೆ ಮಂಡಿಸಿ ಅಲ್ಲಿನ ಪರಿಸ್ಥಿತಿಯನ್ನು ವಕೀಲ ಮಧುಕರ್ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು. ಹೈಕೋರ್ಟ್ ಈಗ ಮಧ್ಯಂತರ ತಡೆಯಾಜ್ಞೆ ಮುಂದುವರೆಸಿ ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿ ವಿಚಾರಣೆ ಮುಂದೂಡಿದ್ದಾರೆ. ಆದರೆ ಮುಂದಿನ ವಿಚಾರಣೆ ದಿನಾಂಕವನ್ನು ನ್ಯಾಯಾಧೀಶರು ತಿಳಿಸಿಲ್ಲ.

ಜಿಲ್ಲಾಧಿಕಾರಿಗಳ ಆದೇಶದ ತರುವಾಯ ವಿವಾದಿತ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಆರಂಭಿಸಲಾಗಿತ್ತು. ಆದರೆ ಈಗ ಯಥಾಸ್ಥಿತಿ ಕಾಪಾಡುವಂತೆ ಹೈಕೋರ್ಟ್ ಆದೇಶ ನೀಡಿರುವುದರಿಂದ ಕಟ್ಟಡ ಕಾಮಗಾರಿ ಮುಂದುವರೆಸಿದರೆ ನ್ಯಾಯಾಂಗ ನಿಂದನೆ ಆಗುತ್ತದೆ ಎಂದು ಟ್ರಸ್ಟ್ ಪರ ವಕೀಲ ಅ.ಮ.ಭಾಸ್ಕರ್ ಎಚ್ಚರಿಸಿದ್ದಾರೆ.

ಶಿವಿನಯ್ ಎಸ್.ಆರ್ಯಗೆ ಶೇ.87ರಷ್ಟು ಅಂಕ



ಮೈಸೂರು: ಐಸಿಎಸ್‌ಇ ಬೋರ್ಡ್‌ನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಮೈಸೂರು ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಶಿವಿನಯ್ ಎಸ್.ಆರ್ಯ ಶೇ.87ರಷ್ಟು ಅಂಕ ಪಡೆದಿದ್ದಾರೆ.

ಈತ ಸಮಾಜ ಸೇವಕರೂ ಆದ ಉದ್ಯಮಿ ಎಸ್.ಶ್ರೀಕಾಂತ್–ಸರಸ್ವತಿ ದಂಪತಿ ಪುತ್ರ. ಈತನನ್ನು ಮೈಸೂರು ಪಬ್ಲಿಕ್ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಅಭಿನಂದಿಸಿದ್ದಾರೆ.

ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ತಾಯಿ ಪ್ರೀತಿ ಲಭಿಸಬೇಕು

ವಿಶೇಷ ಪುನಶ್ಚೇತನ ಕಾರ್ಯಾಗಾರದ ಸಮಾರೋಪದಲ್ಲಿ ನಿಲಯಪಾಲಕರಿಗೆ ಮಹಾಮೇದಾನಂದ ಸ್ವಾಮೀಜಿ ಸಲಹೆ



ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡುಗೆ ಸಿಬ್ಬಂದಿ ಹಾಗೂ ನಿಲಯಪಾಲಕರಿಗಾಗಿ ಆಯೋಜಿಸಿದ್ದ ವಿಶೇಷ ಪುನಶ್ಚೇತನ ಕಾರ್ಯಾಗಾರದಲ್ಲಿ ವಿದ್ಯಾರ್ಥಿನಿಲಯದ ಸಿಬ್ಬಂದಿಗೆ ರಾಮಕೃಷ್ಣ ಆಶ್ರಮದ ಮಹಾಮೇದಾನಂದ ಸ್ವಾಮೀಜಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಪ್ರಮಾಣ ಪತ್ರ ವಿತರಿಸಿದರು.

ಮೈಸೂರು,ಮೇ 8(ಎಂಟಿವೈ)– ವಿದ್ಯಾರ್ಥಿನಿಲಯಗಳಲ್ಲಿರುವ ಮಕ್ಕಳನ್ನು ನಿಲಯಪಾಲಕರು ತಾಯಿ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದು ರಾಮಕೃಷ್ಣ ಆಶ್ರಮದ ಮಹಾಮೇದಾನಂದ ಸ್ವಾಮೀಜಿ ಸಲಹೆ ನೀಡಿದ್ದಾರೆ.


ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಡುಗೆ ಸಿಬ್ಬಂದಿ ಹಾಗೂ ನಿಲಯ ಪಾಲಕರಿಗಾಗಿ ಆಯೋಜಿಸಿದ್ದ ಮೂರು ದಿನಗಳ ವಿಶೇಷ ಪುನಶ್ಚೇತನ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯಾವುದೇ ವಿದ್ಯಾರ್ಥಿನಿಲಯಗಳಾಗಿದ್ದರೂ, ಅಲ್ಲಿನ ವಿದ್ಯಾರ್ಥಿಗಳ ಯೋಗಕ್ಷೇಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅದರಲ್ಲೂ ನಿಲಯ ಪಾಲಕರು ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳನ್ನು ತಾಯಿ ಪ್ರೀತಿಯಿಂದ ಕಾಣಬೇಕು. ಪೋಷಕರಿಂದ ದೂರ ಇದ್ದು, ವಿದ್ಯಾಭ್ಯಾಸಕ್ಕಾಗಿ ಬರುವ ಹಾಸ್ಟೆಲ್ ವಿದ್ಯಾರ್ಥಿಗಳ ಏಳಿಗೆಯಲ್ಲಿ ನಿಲಯಪಾಲಕರ ಪಾತ್ರವೂ ಬಹುಮುಖ್ಯವಾಗಿರುತ್ತದೆ. ಆ ಕಾರಣದಿಂದ ನಿಲಯಪಾಲಕರು ಮಕ್ಕಳನ್ನು ತಾಯಿಯಂತೆ ನೋಡಿಕೊಂಡು, ತಂದೆಯಂತೆ ದಂಡಿಸಬೇಕು. ಅಡುಗೆ ತಯಾರಕರು ರುಚಿ–ಶುಚಿಯಾಗಿ ಅಡುಗೆ ಮಾಡಿ, ಮಕ್ಕಳಿಗೆ ಪ್ರೀತಿಯಿಂದ ಊಟ ಬಡಿಸಬೇಕು. ವಿದ್ಯಾರ್ಥಿಗಳ ಮುಂದೆ ಅಹಂಕಾರ ತೋರಿಸಬಾರದು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಅದ್ಭುತವಾದ ಶಕ್ತಿ ಇರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹ ನೀಡಬೇಕು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ ಮಾತನಾಡಿ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಡುಗೆ ತಯಾರಕರು ಹಾಗೂ ನಿಲಯಪಾಲಕರಿಗೆ ಸೇವಾ ದಕ್ಷತೆ ಮತ್ತು ಸೇವಾ ಮನೋಭಾವ ಹೆಚ್ಚಿಸುವ ನಿಟ್ಟಿನಲ್ಲಿ ರಾಮಕೃಷ್ಣ ಆಶ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ವಿಶೇಷ ಪುನಶ್ಚೇತನ ಕಾರ್ಯಾಗಾರ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದರು.

ಕಾರ್ಯಾಗಾರದಲ್ಲಿ ಎರಡೂ ಜಿಲ್ಲೆಗಳ 300ಕ್ಕೂ ಹೆಚ್ಚು ಅಡುಗೆಯವರು, ನಿಲಯ ಪಾಲಕರು, ಅಡುಗೆ ಸಹಾಯಕರು, ನಿಲಯ ಮೇಲ್ವಿಚಾರಕರು ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ದಾಖಲೆಗಳ ನಿರ್ವಹಣೆ, ಆಸ್ತಿಗಳ ನಿರ್ವಹಣೆ, ಸಮಯಪ್ರಜ್ಞೆ, ವಿದ್ಯಾರ್ಥಿಗಳು ಮತ್ತು ನಿಲಯಪಾಲಕರ ನಡುವಿನ ಆರೋಗ್ಯಕರ ಸಂಬಂಧ, ನಿಲಯದ ನಿರ್ವಹಣೆ, ಸ್ವಚ್ಛತೆ, ಕೈತೋಟ ನಿರ್ವಹಣೆ, ಆರೋಗ್ಯ ತಪಾಸಣೆ, ಗುಣಮಟ್ಟದ ಪೌಷ್ಟಿಕ ಆಹಾರ, ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ, ಅಗ್ನಿ ಅವಘಡ ತಡೆಗಟ್ಟುವಿಕೆ ಮತ್ತು ಸುರಕ್ಷತಾ ಕ್ರಮಗಳು, ಮಕ್ಕಳ ಹಕ್ಕುಗಳು, ಪೋಕ್ಸೊ ಕಾಯ್ದೆ ಮತ್ತು ಮಲ ಹೊರುವ ಪದ್ಧತಿ ನಿಷೇಧ ಕಾಯ್ದೆ ಕುರಿತು ನುರಿತ ವಿಷಯ ತಜ್ಞರು 3 ದಿನಗಳ ಕಾಲ ತರಬೇತಿ ನೀಡಿದ್ದಾರೆ. ನಿಲಯಪಾಲಕರು, ಅಡುಗೆಯವರು ನಿಮ್ಮ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಮಯಪ್ರಜ್ಞೆಯಿಂದ, ತಾಳ್ಮೆಯಿಂದ ಆದರ್ಶ ವ್ಯಕ್ತಿಗಳಾಗಿ ಆತ್ಮ ತೃಪ್ತಿಯಿಂದ ಕೆಲಸ ಮಾಡಬೇಕು. ಸರ್ಕಾರಕ್ಕೆ, ಇಲಾಖೆಗೆ ಒಳ್ಳೆಯ ಹೆಸರು ತರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಕಲ್ಯಾಣಾಧಿಕಾರಿಗಳಾದ ಚಂದ್ರಕಲಾ, ಸ್ವರ್ಣಲತಾ, ಸತೀಶ್, ಸುಚೇಂದ್ರಕುಮಾರ್, ಸುಕನ್ಯ, ಶಶಿಕಲಾ, ಕೃಷ್ಣೇಗೌಡ, ಪ್ರೇಮ್ ಕುಮಾರ್, ಮೇಘನಾ, ರಾಜಣ್ಣ, ನಿಲಯಪಾಲಕರಾದ ಜಗದೀಶ್ ಕೋರಿ, ಮಹಾಲಕ್ಷ್ಮಿ, ವೀರಬಸಪ್ಪ, ರಮ್ಯ, ವಿನೋದ, ಪರಶುರಾಂ, ನಾಗರತ್ನ, ಪೂರ್ಣಿಮ ಉಪಸ್ಥಿತರಿದ್ದರು.

ಮೇ12 ಮೈಸೂರಲ್ಲಿ ಬುದ್ಧ ಪೂರ್ಣಿಮಾ



ಮೈಸೂರು, ಮೇ8(ಜಿಎ)–ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ಬುದ್ಧ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಮೇ 12 ರಂದು ಬೆಳಗ್ಗೆ 10.30ಕ್ಕೆ ಬುದ್ಧ ಪೂರ್ಣಿಮೆ ಅಂಗವಾಗಿ ನಗರದ ಕಲಾಮಂದಿರದಲ್ಲಿ ಬುದ್ಧ ಜಯಂತಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರೊ. ರುದ್ರೇಗೌಡ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 9.30ಕ್ಕೆ ಪುರಭವನ ಆವರಣದಿಂದ ಮೆರವಣಿಗೆ ಹೊರಟು ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆ, ಮೆಟ್ರೋಪೋಲ್ ವೃತ್ತ ಮೂಲಕ ಕಲಾ ಮಂದಿರದ ತಲುಪಲಿದೆ ಎಂದರು. ವೇದಿಕೆಯಲ್ಲಿ ಪದ್ಮಪಾಣಿ ಲಲಿತ ಕಲಾ ಅಕಾಡೆಮಿ ವತಿಯಿಂದ ಬುದ್ಧ ಗೀತೆ ಕಾರ್ಯಕ್ರಮವಿದೆ. ಸಿಎಂ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು. ಸಂಸದ ಯದುವೀರ್ ಒಡೆಯರ್ ಮೊದಲಾದವರು ಅತಿಥಿಗಳಾಗಿ ಭಾಗವಹಿಸುವರು. ಡಾ.ಕಲ್ಯಾಣ ಸಿರಿ ಭಂತೇಜಿ ಸಾನ್ನಿಧ್ಯ ವಹಿಸಲಿದ್ದಾರೆ. ಡಾ.ರಹಮತ್ ತರೀಕೆರೆ ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಧನಂಜಯ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ಬಿಲ್ ಮನ್ನಾ; ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಗೆ ಅಭಿನಂದನೆ



ಮೈಸೂರಿನ ಅಶೋಕಪುರಂ ಬಡಾವಣೆಯ ಸುಮಾರು ಏಳು ಕೋಟಿ ವಿದ್ಯುತ್ ಬಿಲ್ ಬಾಕಿಯನ್ನು ಸಂಪುಟ ಸಭೆಯಲ್ಲಿ ಮನ್ನಾ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಕಾರಣರಾದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಆದಿದ್ರಾವಿಡ ಮಾದಿಗ ಮಹಾ ಸಂಘ ಮತ್ತು ಆದಿಕರ್ನಾಟಕ ಮಹಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಆದಿಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಸುನಿಲ್, ಆದಿದ್ರಾವಿಡ ಮಾದಿಗ ಮಹಾಸಂಘದ ಅಧ್ಯಕ್ಷ ಆರ್.ವೆಂಕಟೇಶ್, ಆರ್.ಸಿ.ಮಹೇಶ್ ದೊಡ್ಡಗರಡಿ, ಚಿಕ್ಕಗರಡಿ ಅಧ್ಯಕ್ಷ ಬಿಲ್ಲಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಮೇ 8(ಬಿಎಲ್‌ಯು)– ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಸಮುದಾಯದ ಅರ್ಹ ವಿದ್ಯಾರ್ಥಿಗಳು ಸಂಘದ ಕಚೇರಿಯಲ್ಲಿ ನಿಗದಿತ ಅರ್ಜಿ ಫಾರಂಗಳನ್ನು ಪಡೆದು ತಮ್ಮ ಅಂಕಪಟ್ಟಿಯ ನಕಲು ಹಾಗೂ ಇತ್ತೀಚಿನ ಎರಡು ಭಾವಚಿತ್ರದೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಆಧಾರ್ ಕಾರ್ಡ್ ನಕಲು ಪ್ರತಿ ಜೊತೆ ಮೇ 24ರೊಳಗೆ ಕಚೇರಿಗೆ ಸಲ್ಲಿಸಬೇಕು ಎಂದು ಸಂಘ ತಿಳಿಸಿದೆ.

ಪ್ರತಿಭಾ ಪುರಸ್ಕಾರದ ಸಮಾರಂಭವನ್ನು ಮೇ 31ರಂದು ಸಂಜೆ 4 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯ ಸಂಘದ ಸಭಾಭವನ ಶ್ರೀ ಶಾರದಾನಿಕೇತನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದೆ. ಹೆಚ್ಚಿನ ಮಾಹಿತಿಗೆ ಸಂಘದ ಅಧ್ಯಕ್ಷ ವಿಶ್ವನಾಥಯ್ಯ (9845110272), ಕಾರ್ಯದರ್ಶಿ ಕೆ.ಆರ್.ಮಂಜುನಾಥ್ (9945657522), ಖಜಾಂಚಿ ಹೆಚ್.ಎಸ್.ಶ್ರೀಕಂಠಶರ್ಮಾ (7899099726), ಸಂಘಟನಾ ಕಾರ್ಯದರ್ಶಿ ಹೆಚ್.ಎಸ್.ನಾಗಶಯನ (9448773575), ಕ್ಷೇಮಪಾಲಕ ನಟೇಶ್ (9448468800) ಇವರನ್ನು ಸಂಪರ್ಕಿಸಬಹುದು.

ಮಹಿಳೆಯರು ಮುಖ್ಯವಾಹಿನಿಗೆ ಬರಲು ಬಸವಣ್ಣ ಶ್ರಮಿಸಿದರು; ಅಕ್ಕಮಹಾದೇವಿಗೆ ದನಿಯಾದರು

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯಲ್ಲಿ ಬಸವೇಶ್ವರ ಜಯಂತಿ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು,ಮೇ 8(ಜಿಎ)–ಮಹಿಳೆ ಮುಖ್ಯವಾಹಿನಿಗೆ ಬರಲು ಬಸವಣ್ಣ ಶ್ರಮಿಸಿದರು. ಅಕ್ಕಮಹಾದೇವಿ ಸೇರಿದಂತೆ ಹತ್ತಾರು ವಚನಕಾರರಿಗೆ ದನಿ ನೀಡಿದರು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣ ಕೇಂದ್ರವು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಬಸವೇಶ್ವರ ಜಯಂತಿ ಪ್ರಯುಕ್ತ ಆಯೋಜಿಸಿದ್ದ 'ವಚನಗಳಲ್ಲಿ ವ್ಯಕ್ತವಾದ ಪುರಾಣ ಶಾಸ್ತ್ರಗಳ ಗ್ರಹಿಕಾ ವಿಧಾನ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣ ಕಾಯಕ ದಾಸೋಹ ತತ್ವದ ಮೂಲಕ ಸಮಾಜವಾದವನ್ನು ಜಗತ್ತಿನಲ್ಲೇ ಮೊದಲ ಬಾರಿಗೆ ಪ್ರತಿಪಾದಿಸಿದ ಸಮಾಜವಾದಿ ಆಗಿದ್ದಾರೆ. ಮಾನವನ ನಡವಳಿಕೆ ಹೇಗಿರಬೇಕೆಂದು ಹೇಳಿದ ಅವರು, ವೈಚಾರಿಕತೆ, ಸಮಾನತೆ, ಮಾನವೀಯತೆಯನ್ನು ಅವರ ಚಿಂತನೆಗಳಲ್ಲಿ ಕಾಣಬಹುದು. ರಾಜ್ಯ ಸರ್ಕಾರವು ನಾಡಿನ ಸಾಂಸ್ಕೃತಿಕ ನಾಯಕ ಎಂದು ಕರೆದಿರುವುದು ಶ್ಲಾಘನೀಯ ಎಂದರು.

ವಿಮರ್ಶಕ ಬಸವರಾಜ ಕಲ್ಗುಡಿ ಮಾತನಾಡಿ, ವೇದ, ಆಗಮ, ಶಾಸ್ತ್ರಗಳನ್ನು ತಿರಸ್ಕರಿಸಿದ ವಚನಕಾರರು ಜಾತಿ, ವರ್ಣ ಸಂಕರ ನಡೆಸಿ ಶ್ರೇಣೀಕೃತ ವ್ಯವಸ್ಥೆ ವಿರುದ್ಧ ಶಬ್ದಗಳ ಶಕ್ತಿಯನ್ನು ತೋರಿಸಿದರು. ವಚನ ಚಳವಳಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕಿದೆ. ಕೆಲ ವಚನಕಾರರನ್ನು ಬಿಟ್ಟರೆ ಎಲ್ಲರೂ ಕಾಯಕ ಸಮುದಾಯದವರೇ ಆಗಿದ್ದಾರೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಂಕರದ ಕಥನ ಮೊದಲು ಹುಟ್ಟಿದ್ದು 12ನೇ ಶತಮಾನದಲ್ಲಿಯೇ. ಹರಳಯ್ಯ ಮಧುವರಸರ ಮಕ್ಕಳ ಮದುವೆಯು ಅಸ್ಪೃಶ್ಯತೆ ತೊಡೆದುಹಾಕುವ ಯತ್ನವಾಗಿತ್ತು ಎಂದರು.

ಜೈನ ಸಾಹಿತ್ಯವು ಸಂಕರದ ಕಥನಗಳನ್ನು ಹೇಳುವುದಿಲ್ಲ. ಪಂಪ ವರ್ಣದ ವಿರುದ್ಧ ಮಾತನಾಡಿದರೂ ಕ್ಷತ್ರೀಯ ಕುಲ ಎತ್ತಿ ಹಿಡಿಯಲು ಕಾವ್ಯ ಬರೆದನು. ಆದರೆ, ಅಸ್ಪೃಶ್ಯತೆಯನ್ನು ಕಟುವಾಗಿ ವಿರೋಧಿಸಿದ ವಚನಕಾರರು ಚಳವಳಿಯ ಮೂಲಕ ವ್ಯವಸ್ಥೆಯನ್ನು ತಲ್ಲಣಗೊಳಿಸಿದರು' ಎಂದು ಹೇಳಿದರು.

ಪೀಠದ ಸಂದರ್ಶಕ ಪ್ರಾಧ್ಯಾಪಕ ಅರವಿಂದ ಮಾಲಗತ್ತಿ ಮಾತನಾಡಿ, ದೇವಸ್ಥಾನ, ಅಸ್ಪೃಶ್ಯತೆ, ಶಾಸ್ತ್ರದ ವಿಚಾರಗಳನ್ನು ಮುರಿದು ಕಟ್ಟುವ ಅಗತ್ಯತೆಯನ್ನು ವಚನಗಳು ಹೇಳುತ್ತವೆ. ವೇದ, ಶಾಸ್ತ್ರ, ಪುರಾಣಗಳನ್ನು ಧಿಕ್ಕರಿಸಿ ಮನುಷ್ಯತ್ವ ದೊಡ್ಡದೆಂದರು. ತಳ ಸಮುದಾಯದ ಪ್ರತಿನಿಧಿಗಳಿಂದ ದನಿ ಎತ್ತಿದ ಬಸವಣ್ಣ, ಜಡವಾದ ವ್ಯವಸ್ಥೆಯನ್ನು ಪರಿಷ್ಕರಿಸಿದರು. 21ನೇ ಶತಮಾನದಲ್ಲಿ ಆಗುತ್ತಿರುವ ಕೆಲಸವನ್ನು ಕನ್ನಡಿಗರು 12ನೇ ಶತಮಾನದಲ್ಲಿಯೇ ಸಾಧಿಸಿರುವ ಹೆಮ್ಮೆಯಿದೆ. ವಚನಕಾರರ ಒಂದೊಂದು ವಚನವನ್ನೂ ಅರ್ಥೈಸಿಕೊಳ್ಳಬೇಕು. ನುಡಿಸಸಿಗಳನ್ನು ಬೆಳೆಸಬೇಕು ಎಂದರು.

ಬಸವಣ್ಣನ ಪ್ರಜಾಪ್ರಭುತ್ವವಾದಿ ಚಿಂತನೆಯನ್ನು ಪರಂಪರೆಯ ಜೊತೆಗೆ ನೋಡುವ ಬದಲು ಹೊಸ ಆಯಾಮದಲ್ಲಿ ನೋಡಬೇಕಿದೆ. ಭಾರತೀಯ ಸಂಸತ್‌ನ ಇಂದಿನ ವಿಚಾರದ ಬೀಜಗಳನ್ನು 12ನೇ ಶತಮಾನದಲ್ಲಿಯೇ ನೆಟ್ಟರು. ಸಂಪ್ರದಾಯ ಹಾಗೂ ಸನಾತನ ವಿಚಾರಗಳನ್ನು ಬಸವಣ್ಣ ವಿರೋಧಿಸಲಿಲ್ಲ ಎಂದು ಕೆಲವರು ಹೇಳುತ್ತಾರೆ. ವಚನ ಚಳವಳಿ ಹುಟ್ಟಿದ್ದೇ ವೇದಶಾಸ್ತ್ರ, ವರ್ಣ ವ್ಯವಸ್ಥೆಯ ವಿರುದ್ಧ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಉಪಸ್ಥಿತರಿದ್ದರು.

ಉದ್ದಿಮೆ ರಹದಾರಿ ಕುರಿತು ಹೋಟೆಲ್ ಮಾಲೀಕರಿಗೆ ಜಾಗೃತಿ



ವೃತ್ತಿ ರಹದಾರಿ ಲೈಸೆನ್ಸ್ ಪಡೆಯುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಮೇ 8(ಆರ್‌ಕೆ)–ಉದ್ದಿಮೆ ರಹದಾರಿ ಮತ್ತು ನವೀಕರಣ ಪ್ರಕ್ರಿಯೆ ಸರಳೀಕರಣಗೊಳಿಸಿರುವ ಕುರಿತಂತೆ ಮೈಸೂರು ಮಹಾನಗರ ಪಾಲಿಕೆ ಕಮಿಷ್ನರ್ ಶೇಕ್ ತನ್ವೀರ್ ಆಸಿಫ್ ಅವರು ಹೋಟೆಲ್ ಮಾಲೀಕರಿಗೆ ಜಾಗೃತಿ ಮೂಡಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕಮಿಷ್ನರ್, ಉದ್ದಿಮೆ ರಹದಾರಿ (Trade Licence) ಪಡೆದು ವ್ಯಾಪಾರ–ವಹಿವಾಟು ನಡೆಸುವುದರಿಂದ ಉದ್ದಿಮೆದಾರರಿಗೆ ಅನುಕೂಲವಾಗಲಿದ್ದು, ಪಾಲಿಕೆಗೂ ಆರ್ಥಿಕ ಸಂಪನ್ಮೂಲ ವೃದ್ಧಿಯಾಗಿ ಹಲವು ಸೌಲಭ್ಯಗಳನ್ನು ನಿರ್ವಹಿಸಲು ಉತ್ತೇಜನ ನೀಡಿದಂತಾಗುತ್ತದೆ ಎಂದರು. ಲೈಸನ್ಸ್ ಪಡೆದು ಅಧಿಕೃತ ವ್ಯಾಪಾರ ಮಾಡುವುದಲ್ಲದೆ, ಪ್ರತೀ ಹಣಕಾಸು ವರ್ಷದಲ್ಲಿ ಪರವಾನಗಿ ನವೀಕರಿಸಿಕೊಳ್ಳಿ. ಈಗ ಪ್ರಕ್ರಿಯೆ ಷರತ್ತುಗಳನ್ನು ಸರಳೀಕರಿಸಿರುವುದರಿಂದ ಹೋಟೆಲ್ ಉದ್ಯಮಿಗಳು ಸೌಲಭ್ಯವನ್ನು ಬಳಸಿಕೊಳ್ಳುವಂತೆ ಸಲಹೆ ನೀಡಿದರು. ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ರವಿಶಾಸ್ತ್ರಿ, ರವೀಂದ್ರ ಭಟ್, ಸುಬ್ರಹ್ಮಣ್ಯ, ತಂತ್ರಿ ಇತರರಿದ್ದರು.

ಧನ್ವಿತ್‌ಗೌಡ ಜಿ.ವಿ.ಗೆ 611 ಅಂಕ



ಮೈಸೂರು,ಮೇ8–ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸದ್ವಿದ್ಯಾ ಪ್ರೌಢಶಾಲೆಯ ವಿದ್ಯಾರ್ಥಿ ಧನ್ವಿತ್‌ಗೌಡ ಜಿ.ವಿ. 625ಕ್ಕೆ 611 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಮಂಡ್ಯ ನ್ಯಾಯಾಂಗ ಇಲಾಖೆ ಹಿರಿಯ ಶಿರಸ್ತೇದಾರರಾದ ಜಿ.ಟಿ. ವೆಂಕಟೇಶ್ ಮತ್ತು ಶ್ರೀರಂಗಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಎ.ಸಿ.ಮಂಜುಳಾ ದಂಪತಿ ಪುತ್ರ.

ನಿಧನ

ನಾರಾಯಣಪ್ಪ



ಮೈಸೂರು, ಮೇ.8– ಶ್ರೀರಂಗಪಟ್ಟಣ ತಾಲೂಕು ನಗುವನಹಳ್ಳಿಯ ರೈತ ಮುಖಂಡರಾದ ನಾರಾಯಣಪ್ಪ (ದಾಸೇಗೌಡ) ಅವರು ತಮ್ಮ ನಿವಾಸದಲ್ಲಿ ಗುರುವಾರ ರಾತ್ರಿ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು.

ದಿವಂಗತರು ಪತ್ನಿ ಸಾಕಮ್ಮ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಕಾಂಗ್ರೆಸ್ ಮುಖಂಡ ಉಮಾಶಂಕರ್ ಸೇರಿದಂತೆ ಇಬ್ಬರು ಅಳಿಯಂದಿರು, ಸೊಸೆಯಂದಿರು ಮತ್ತು ಅಪಾರ ಬಂಧು–ವರ್ಗ ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮ ನಗುವನಹಳ್ಳಿಯಲ್ಲಿ ಇವರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿವೆ.

ಹೇಮಾವತಿ



ಚಾಮರಾಜನಗರ: ತಾಲೂಕಿನ ಬಾಗಳಿ ಗ್ರಾಮದ ಹೇಮಾವತಿ (70) ಗುರುವಾರ ನಿಧನರಾದರು.

ಮೃತರು ಪತಿ ಚಾಮರಾಜನಗರ ಎಪಿಎಂಸಿ ಮಾಜಿ ಅಧ್ಯಕ್ಷ ನಾಗರಾಜಪ್ಪ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಶ – ವಿದೇಶ

ಲಾಹೋರ್ ಬಿಟ್ಟು ತಕ್ಷಣ ಹೊರಡಿ

ಪಾಕ್‌ನಲ್ಲಿರುವ ತನ್ನ ಪ್ರಜೆಗಳಿಗೆ ಅಮೆರಿಕಾ ಎಚ್ಚರಿಕೆ

ವಾಷಿಂಗ್ಟನ್: ಆಪರೇಷನ್ ಸಿಂಧೂರ್ ನಂತರ ಪಾಕಿಸ್ತಾನ–ಭಾರತ ಗಡಿಯಲ್ಲಿ ಉದ್ವಿಗ್ನತೆ ಹೆಚ್ಚಾಗಿದೆ. ಲಾಹೋರ್‌ನಲ್ಲಿ ಡ್ರೋನ್ ಹೊಡೆದುರುಳಿಸಿದ ನಂತರ ಅಮೆರಿಕಾ ಅಲರ್ಟ್ ಆಗಿದ್ದು, ಲಾಹೋರ್‌ನಲ್ಲಿರುವ ತನ್ನ ಪ್ರಜೆಗಳಿಗೆ ಎಚ್ಚರಿಕೆ ನೀಡಿದೆ. ಲಾಹೋರ್‌ನಲ್ಲಿರುವ ಯುನೈಟೆಡ್ ಸ್ಟೇಟ್ಸ್ ಕಾನ್ಸುಲೇಟ್ ಜನರಲ್ ತನ್ನ ಸಿಬ್ಬಂದಿ ಹಾಗೂ ನಗರದಲ್ಲಿರುವ ಎಲ್ಲಾ ಅಮೆರಿಕನ್ ನಾಗರಿಕರಿಗೆ ಭದ್ರತಾ ಎಚ್ಚರಿಕೆ ನೀಡಿದೆ.

ಪ್ರಾಂತೀಯ ರಾಜಧಾನಿಯಲ್ಲಿ ಡ್ರೋನ್ ಅನ್ನು ಹೊಡೆದುರುಳಿಸಲಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುವಂತೆ ಒತ್ತಾಯಿಸಿದೆ.

ಡ್ರೋನ್ ಹೊಡೆದುರುಳಿಸಲಾಗಿರುವ ಬಾಧಿತ ಪ್ರದೇಶಗಳಲ್ಲಿರುವ ಅಮೇರಿಕನ್ ನಾಗರಿಕರನ್ನು ಸ್ವಲ್ಪವೂ ತಡ ಮಾಡದೆ ಸ್ಥಳಾಂತರಿಸುವಂತೆ ಕಾನ್ಸುಲೇಟ್ ಸೂಚಿಸಿದೆ. ನಿರ್ಗಮನ ಸುರಕ್ಷಿತವಾಗಿಲ್ಲದಿದ್ದರೆ, ಜನರು ಮುಂದಿನ ಸೂಚನೆ ಬರುವವರೆಗೆ ಅದೇ ಸ್ಥಳದಲ್ಲಿ ಆಶ್ರಯ ಪಡೆಯಬೇಕು ಎಂದು ತಿಳಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಲಾಹೋರ್, ರಾವಲ್ಪಿಂಡಿ, ಬಹವಾಲ್ಪುರ್, ನಂಕಾನಾ ಸಾಹಿಬ್ ಸೇರಿದಂತೆ ಅನೇಕ ನಗರಗಳಲ್ಲಿ ಡ್ರೋನ್ ಚಟುವಟಿಕೆಯಲ್ಲಿ ಹೆಚ್ಚಳ ಆಗಿದೆ ಎಂದು ವರದಿಯಾಗಿದೆ.

ಗಡಿ ದಾಟುತ್ತಿದ್ದ ನುಸುಳುಕೋರ ಬಿಎಸ್‌ಎಫ್ ಗುಂಡಿಗೆ ಬಲಿ



ಪಂಜಾಬ್: ಪಂಜಾಬ್‌ನ ಅಂತರರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನಿ ನುಸುಳುಕೋರನನ್ನು ಗಡಿ ಭದ್ರತಾ ಪಡೆ ಗುರುವಾರ ಗುಂಡಿಕ್ಕಿ ಕೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇ 7–8ರ ಮಧ್ಯರಾತ್ರಿ ಫಿರೋಜ್‌ಪುರ ವಲಯದಲ್ಲಿ ವ್ಯಕ್ತಿಗೆ ಗುಂಡು ಹಾರಿಸಲಾಗಿದೆ.

ಕತ್ತಲೆಯಲ್ಲಿ ಉದ್ದೇಶಪೂರ್ವಕವಾಗಿ ಅಂತರರಾಷ್ಟ್ರೀಯ ಗಡಿಯನ್ನು ದಾಟುತ್ತಿದ್ದಾಗ ಆತ ಪತ್ತೆಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದು, ಶವವನ್ನು ಪಂಜಾಬ್ ಪೊಲೀಸರಿಗೆ ಹಸ್ತಾಂತರಿಸಲಾಗಿದೆ. ಪಾಕಿಸ್ತಾನ ಗಡಿ ಪ್ರದೇಶದಲ್ಲಿ ಅಪ್ರಚೋದಿತ ಶೆಲ್ ದಾಳಿಯಲ್ಲಿ ತೊಡಗಿದ್ದು, ಗಡಿ ನಿಯಂತ್ರಣ ರೇಖೆ ಮತ್ತು ಜಮ್ಮು–ಕಾಶ್ಮೀರದ ಅಂತಾರಾಷ್ಟ್ರೀಯ ಗಡಿಗಳಲ್ಲಿ ಫಿರಂಗಿ ದಾಳಿ ಹಾಗೂ ಗುಂಡಿನ ಚಕಮಕಿಯಲ್ಲಿ ನಾಲ್ವರು ಮಕ್ಕಳು ಮತ್ತು ಒಬ್ಬರು ಯೋಧರು ಸೇರಿದಂತೆ ಕನಿಷ್ಠ 15 ಜನರು ಮೃತಪಟ್ಟು 43 ಜನರು ಗಾಯಗೊಂಡಿದ್ದಾರೆ. ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ 9 ಭಯೋತ್ಪಾದಕ ಗುರಿಗಳ ಮೇಲೆ ಭಾರತ ಕ್ಷಿಪಣಿ ದಾಳಿ ನಡೆಸಿದ ನಂತರ ಪಾಕಿಸ್ತಾನ ಪಡೆಗಳು ಕದನ ವಿರಾಮ ಉಲ್ಲಂಘಿಸುತ್ತಿರುವ ಬಗ್ಗೆ ಭಾರತೀಯ ಸೇನೆಯು ಸಮಾನ ಪ್ರಮಾಣದಲ್ಲಿ ಶೆಲ್ ದಾಳಿಗೆ ಪ್ರತಿಕ್ರಿಯಿಸುತ್ತಿದೆ

ನೂತನ ಪೋಪ್ ಆಯ್ಕೆಗೆ ಮತ್ತೊಂದು ಸುತ್ತಿನ ಮತದಾನ



ವ್ಯಾಟಿಕನ್ ಸಿಟಿ: ಮುಂದಿನ ಪೋಪ್ ಆಯ್ಕೆಗಾಗಿ ನಡೆದ ಮೊದಲ ರಹಸ್ಯ ಮತದಾನ ದಲ್ಲಿ ಕಪ್ಪು ಹೊಗೆ ಬಂದಿದ್ದು, ನೂತನ ಪೋಪ್ ಆಯ್ಕೆಯಾಗಿಲ್ಲ ಎಂಬುದನ್ನು ಸೂಚಿಸಿದೆ. ಕ್ಯಾಥೋಲಿಕ್ ಧರ್ಮ ಗುರುವಿನ ಆಯ್ಕೆಗೆ ನಡೆಯುವ ಶತಮಾನಗಳ ಇತಿಹಾಸ ಕಾನ್ಕ್ಲೇವ್ ರಹಸ್ಯ ಮತದಾನದಲ್ಲಿ 133 ಕಾರ್ಡಿನಲ್‌ಗಳು ಭಾಗಿಯಾಗಿದ್ದಾರೆ. ನಿನ್ನೆಯಿಂದ ಮತದಾನ ಶುರುವಾಗಿದೆ. ಮೇ 7ರಂದು ಮೊದಲ ಸುತ್ತಿನ ಮತದಾನ ನಡೆಸಲಾಯಿತು. ಈ ವೇಳೆ ಸಿಸ್ಟೀನ್ ಚಾಪೆಲ್ ಚಿಮಣಿಯಿಂದ ಕಪ್ಪು ಹೊಗೆ ಬಂತು. ಆದರೆ ಮೊದಲ ಮತದಾನದಲ್ಲಿ ವಿಜೇತರನ್ನು ಆಯ್ಕೆ ಮಾಡುವಲ್ಲಿ ವಿಫಲವಾಗಿದೆ ಎಂಬ ಸಂದೇಶ ಬಂತು. ಈ ಹಿನ್ನೆಲೆಯಲ್ಲಿ ಮತ್ತೊಂದು ಸುತ್ತಿನ ಮತದಾನ ನಡೆಯಲಿದೆ. ಸಿಸ್ಟೀನ್ ಚಾಪೆಲ್ ಚಿಮಣಿಯಿಂದ ಕಪ್ಪು ಹೊಗೆ ಬಂದಿದೆ ಎಂದರೆ, ಪೋಪ್ ಆಯ್ಕೆ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂಬ ಅರ್ಥ ಬರುತ್ತದೆ. ಬಿಳಿ ಹೊಗೆ ಬಂದರೆ, ಕಾರ್ಡಿನಲ್ಸ್ ಪೋಪ್ ಆಯ್ಕೆ ಮಾಡಿದ್ದಾರೆ ಎಂಬುದನ್ನು ಸೂಚಿಸುತ್ತದೆ

ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಸೇವಾವಧಿ ಒಂದು ವರ್ಷ ವಿಸ್ತರಣೆ



ನವದೆಹಲಿ: ಕೇಂದ್ರ ಸರ್ಕಾರ ಬುಧವಾರ ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯನ್ನು ಒಂದು ವರ್ಷ ವಿಸ್ತರಿಸಿದೆ. ಸೂದ್ ಅವರು ಮೇ 25, 2023 ರಂದು ಎರಡು ವರ್ಷಗಳ ಅವಧಿಗೆ ಸಿಬಿಐ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನೊಳಗೊಂಡ ಆಯ್ಕೆ ಸಮಿತಿಯ ಸಭೆಯಲ್ಲಿ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯನ್ನು ವಿಸ್ತರಿಸುವ ನಿರ್ಧಾರವನ್ನು ಸೋಮವಾರ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಯ್ಕೆ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಸಂಪುಟ ನೇಮಕಾತಿ ಸಮಿತಿ(ಎಸಿಸಿ), ಮೇ 24ರ ನಂತರ ಒಂದು ವರ್ಷದ ಅವಧಿಗೆ ಪ್ರವೀಣ್ ಸೂದ್ ಅವರ ಸೇವಾವಧಿಯನ್ನು ವಿಸ್ತರಣೆ ಮಾಡಲು ಅನುಮೋದನೆ ನೀಡಿದೆ. ಸೂದ್ ಅವರು ಕರ್ನಾಟಕ ಕೇಡರ್‌ನ 1986ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

ಬಲೂಚಿಸ್ತಾನ್ ಆರ್ಮಿ ದಾಳಿಗೆ ಪಾಕ್ ಸೈನಿಕರ ದೇಹ ಛಿದ್ರಛಿದ್ರ



ಇಸ್ಲಾಮಾಬಾದ್: ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಬಲೂಚಿಸ್ತಾನ್ ಲಿಬರೇಷನ್ ಆರ್ಮಿ (ಬಿಎಲ್‌ಎ)ಉಗ್ರರು ಪಾಕ್ ಸೇನಾ ವಾಹನದ ಮೇಲೆ ಐಇಡಿ ದಾಳಿ ನಡೆಸಿದ್ದು, 14 ಸೈನಿಕರು ಮೃತಪಟ್ಟಿದ್ದಾರೆ. ಕಚ್ಚಿ ಜಿಲ್ಲೆಯಲ್ಲಿ ನಡೆದ ಈ ದಾಳಿಯ ಹೊಣೆಯನ್ನು ಬಿಎಲ್‌ಎ ಹೊತ್ತುಕೊಂಡಿದೆ. ಈ ಹಿಂದೆ ರೈಲು ಅಪಹರಿಸಿದ್ದ ಈ ಸಂಘಟನೆ, ಬಲೂಚಿಸ್ತಾನದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ ಮತ್ತು ಪಾಕ್ ಸರ್ಕಾರದ ವಿರುದ್ಧ ಹಲವು ಆರೋಪಗಳನ್ನು ಮಾಡಿದೆ. ಈ ಬಗ್ಗೆ ಸ್ವತಃ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ ಹೇಳಿಕೆ ನೀಡಿದ್ದು, ಸೇನೆ ವಾಹನದ ಮೇಲೆ ನಡೆಸಿದ ದಾಳಿಯ ವಿಡಿಯೋ ಕೂಡ ಬಿಡುಗಡೆ ಮಾಡಿದೆ. ರಸ್ತೆಯಲ್ಲಿ ಚಲಿಸುತ್ತಿದ್ದ ಪಾಕ್ ಸೈನಿಕರಿದ್ದ ವಾಹನ ಭಾರಿ ಸ್ಫೋಟಗೊಂಡು ಬೆಂಕಿಯುಂಡೆಯಂತಾಗಿ ವಾಹನ ಹಾಗೂ ಸೈನಿಕರ ದೇಹ ಸ್ಫೋಟಗೊಂಡು ಗಾಳಿಯಲ್ಲಿ ಹಾರಾಡಿತು. ದಾಳಿ ನಂತರ ಪಾಕಿಸ್ತಾನ ಸೇನೆಯು ಆ ಪ್ರದೇಶದಲ್ಲಿ ಉಗ್ರರಿಗಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿದೆ. ಉಳಿದಿರುವ ಉಗ್ರರನ್ನು ಹುಡುಕಿ ಸದೆಬಡಿಯಲು ಈ ಕಾರ್ಯಾಚರಣೆ ನಡೆಯುತ್ತಿದೆ.

ಮೈಸೂರು ಮಿತ್ರ ಶುಕ್ರವಾರ 9 ಮೇ 2025


ವಿ.ಬಾಡಗ ಸುತ್ತ–ಮುತ್ತ ಕಾಡು ಕೋಣಗಳ ದಾಂದಲೆ

ಅಪಾರ ಪ್ರಮಾಣದ ಕಾಫಿ, ತೆಂಗು, ಬಾಳೆ ಫಸಲು ನಾಶ : ರೈತರು ಕಂಗಾಲು

ವಿರಾಜಪೇಟೆ, ಮೇ 8– ತಾಲೂಕಿನ ಬಿಟ್ಟಂಗಾಲ ಗ್ರಾಮ ಪಂಚಾಯತಿ ವ್ಯಾಪ್ತಿಯ ವಿ.ಬಾಡಗ ಗ್ರಾಮದಲ್ಲಿ ಕಾಡು ಕೋಣಗಳ ದಾಳಿಯಿಂದ ಕಾಫಿತೋಟಗಳು ಹಾನಿಗೆ ಒಳಗಾಗಿವೆ.

ಅರಣ್ಯದಲ್ಲಿ ಕಂಡು ಬರುವ ವನ್ಯಜೀವಿಗಳು ವಸತಿ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ಬಿಟ್ಟಿದೆ. ಇದರಿಂದ ಕಾರ್ಮಿಕರು ಮತ್ತು ತೋಟದ ಮಾಲೀಕರು ಕೃಷಿ ಚಟುವಟಿಕೆಗಳನ್ನು ನಿರ್ವಹಿಸಲು ಸಂಕಷ್ಟ ಎದುರಿಸುತ್ತಿದ್ದಾರೆ. ವಿ.ಬಾಡಗ ಗ್ರಾಮ ವ್ಯಾಪ್ತಿಯಾದ ಕೊಕ್ಕ ಮತ್ತು ಪುದುಕೇರಿ ಗ್ರಾಮದ ತೋಟಗಳಲ್ಲಿ ಬೀಡುಬಿಟ್ಟಿರುವ ಕಾಡು ಕೋಣಗಳು ತೋಟಗಳಲ್ಲಿ ಬೆಳೆದಿರುವ ಕಾಫಿ ಗಿಡ, ತೆಂಗು. ಮತ್ತು ಬಾಳೆ ಗಿಡಗಳನ್ನು ಧ್ವಂಸ ಮಾಡಿದ್ದು ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ.

ಕೊಕ್ಕ ಗ್ರಾಮದ ಪ್ರದೇಶದಲ್ಲಿ ಈ ಮೊದಲು ಕಾಡಾನೆಗಳ ದಾಂದಲೆ ನಡೆಸುತ್ತಿದ್ದವು. ಇದೀಗ ಕಾಡು ಕೋಣ, ನವಿಲುಗಳು, ಮಂಗಗಳು ಮತ್ತು ಇತರ ಪ್ರಾಣಿಗಳಿಂದ ದಾಳಿಗಳು ಎದುರಾಗಿದೆ ಇದರಿಂದ ತೋಟಗಳು ಹಾನಿಗೆ ಒಳಗಾಗಿದೆ. ಸನಿಹದಲ್ಲೇ ಅರಣ್ಯ ಇಲಾಖೆಯ ವಸತಿ ಗೃಹ ಇದ್ದರೂ ಸಿಬ್ಬಂದಿಗಳು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಬೆಳೆಗಾರರ ಸಂಕಷ್ಟಕ್ಕೆ ಇಲಾಖೆ ಸ್ಪಂದಿಸಲಿಲ್ಲ. ಕೃಷಿಯನ್ನು ನಂಬಿ ಬದುಕುವ ನಾವುಗಳು ವನ್ಯಜೀವಿ ಉಪಟಳದಿಂದ ಕಂಗಾಲಾಗಿದ್ದೇವೆ ಎಂದು ಕೊಕ್ಕ ಗ್ರಾಮದ ಮಳವಂಡ ಸವೀನ್ ದೇವಯ್ಯ ನೊಂದು ನುಡಿದರು.



ಕಾಡು ಕೋಣಗಳ ದಾಳಿಯಿಂದ ನಾಶವಾಗಿರುವ ಕಾಫಿ ಬೆಳೆಗಳು.

ಕೃಷಿಯನ್ನು ಅವಲಂಬಿಸಿಕೊಂಡಿರುವ ಜೀವನ ನಮ್ಮದು. ಕಾಡಾನೆಗಳು, ಮಂಗಗಳು, ಕಾಡು ಹಂದಿ, ಇದೀಗ ಕಾಡು ಕೋಣಗಳ ಉಪಟಳ ಹೆಚ್ಚಾಗಿದೆ. ಪೂಜೆ ಮತ್ತು ಇನ್ನಿತರ ಶುಭ ಸಮಾರಂಭಗಳಿಗೆ ಉಪಯೋಗಿಸುವ ಬಾಳೆ ಕೈಗೆಟುಕುವ ಸ್ಥಿತಿಯಲ್ಲಿ ಇಲ್ಲ. ಕಾಫಿ ಪ್ರಮುಖ ಆದಾಯವಾದರೂ ವಾತಾವರಣದ ವ್ಯತಿರಿಕ್ತ ಪರಿಣಾಮ ಇಳುವರಿ ಕುಂಠಿತಗೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ವನ್ಯಜೀವಿಗಳ ಉಪಟಳದಿಂದ ತೋಟಗಳು ನಿರ್ನಾಮವಾಗುತ್ತಿದೆ. ನಮ್ಮ ಜೀವನ ಶೋಚನೀಯ ಸ್ಥಿತಿಗೆ ತಲುಪಿದೆ ಎಂದು ಪುದುಕೇರಿ ಗ್ರಾಮದ ಕಂಜಿತಂಡ ದಿವ್ಯ ದೇವಯ್ಯ ಹೇಳಿದರು.

ಅರಣ್ಯ ಇಲಾಖೆಯು ವನ್ಯಜೀವಿಗಳ ದಾಳಿಯನ್ನು ತಡೆಗಟ್ಟಲು ಪ್ರಯತ್ನ ನಡೆಸಬೇಕು. ಮತ್ತು ಗ್ರಾಮಸ್ಥರನ್ನು ಸಂರಕ್ಷಣೆ ಮಾಡುವಂತೆ ಆಗ್ರಹಿಸುತ್ತಿದ್ದೇವೆ. ವನ್ಯಜೀವಿಗಳ ಉಪಟಳವನ್ನು ತಡೆಗಟ್ಟಲು ಶಾಶ್ವತ ಪರಿಹಾರ ಕಂಡುಹಿಡಿಯಬೇಕು. ವನ್ಯಜೀವಿ ಧಾಳಿಯನ್ನು ತಡೆಗೆ ಕ್ರಮವಹಿಸದಿದ್ದಲ್ಲಿ ಗ್ರಾಮಸ್ಥರು, ಬೆಳೆಗಾರರು ಸೇರಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಶಂಕರ್ ಬಿದರಿಗೆ ಸನ್ಮಾನ



ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ್ ಬಿದರಿ ಅವರು ಕೊಡಗು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿರಾಜಪೇಟೆ ತಾಲೂಕು ವೀರಶೈವ ಮಹಾಸಭಾದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ತಾಲೂಕು ಘಟಕದ ಅಧ್ಯಕ್ಷ ಎನ್.ಎಂ.ರಾಜೇಶ್, ಉಪಾಧ್ಯಕ್ಷ ರಘು ಶ್ರೀಕಂಠಪ್ಪ, ನಿರ್ದೇಶಕರಾದ ಎಸ್.ಎನ್.ಮಹೇಶ್, ಎಸ್.ಎಲ್.ಮಹಾದೇವಪ್ಪ, ಜಿಲ್ಲಾ ಘಟಕದ ಉಪಾಧ್ಯಕ್ಷ ಎಸ್.ಎಸ್.ಸುರೇಶ್ ಮಂಯಾಮುಡಿ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಇಂದಿರಾ ಕ್ಯಾಂಟೀನ್ ಉದ್ಘಾಟನೆ

ಮಡಿಕೇರಿ, ಮೇ 8– ಕುಶಾಲನಗರ ಪುರಸಭೆ ವ್ಯಾಪ್ತಿಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಇಂದಿರಾ ಕ್ಯಾಂಟೀನ್‌ನ್ನು ಮೇ 10 ರಂದು ಬೆಳಗ್ಗೆ 11.30 ಗಂಟೆಗೆ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್‌ಗೌಡ ಅವರು ಸಾರ್ವಜನಿಕರ ಉಪಯೋಗಕ್ಕೆ ಉದ್ಘಾಟಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ ಎಲ್ಲಾ ಜನಪ್ರತಿನಿಧಿಗಳು ಹಾಗೂ ಸಮಸ್ತ ನಾಗರಿಕರು ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕುಶಾಲನಗರ ಪುರಸಭೆ ಅಧ್ಯಕ್ಷರು ಕೋರಿದ್ದಾರೆ.

ಪಾಲೂರಿನ ಶ್ರೀ ಮಹಾಲಿಂಗೇಶ್ವರ ಸನ್ನಿಧಿಯಲ್ಲಿ ವಿಶೇಷ ಪೂಜೆ

ನಾಪೋಕ್ಲು: ದೇಶಕ್ಕೆ ಬಂದೊದಗುವ ತೊಂದರೆಗಳನ್ನು ನಿವಾರಿಸುವ ಉದ್ದೇಶದಿಂದ ಜಿಲ್ಲೆಯ ಎಲ್ಲ ದೇವಾಲಯಗಳಲ್ಲಿ ಗುರುವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ಮುಜರಾಯಿ ದೇವಾಲಯದ ಅಧಿನಾಯಕ ಒಳಪಟ್ಟ ಸಮೀಪದ ಪಾಲೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಧಾರ್ಮಿಕ ದತ್ತಿ ಆಯುಕ್ತರ ಸುತ್ತೋಲೆಯಲ್ಲಿ ತಿಳಿಸಿರುವಂತೆ ವಿಶೇಷ ಪೂಜೆಯನ್ನು ಆಯೋಜಿಸಲಾಗಿತ್ತು.

ಭಯೋತ್ಪಾದಕರ ಶಿಬಿರಗಳ ಮೇಲೆ 'ಅಪರೇಷನ್ ಸಿಂಧೂರ್' ಹೆಸರಿನಲ್ಲಿ ನಡೆದ ಸೇನಾ ಕಾರ್ಯಾಚರಣೆಯು ಯಶಸ್ವಿಯಾಗಿ ನಿರ್ವಹಿಸಿದ ನಮ್ಮ ಭಾರತೀಯ ಹೆಮ್ಮೆಯ ಸೇನಾ ಯೋಧರಿಗೆ ಮತ್ತಷ್ಟು ಶಕ್ತಿಯನ್ನು ಶ್ರೀ ಮಹಾಲಿಂಗೇಶ್ವರ ಅನುಗ್ರಹಿಸಲಿ ಎಂದು ಕ್ಷೇತ್ರದ ಮುಖ್ಯ ಪುರೋಹಿತರಾದ ದೇವಿಪ್ರಸಾದ್ ಪ್ರಾರ್ಥನೆ ಹಾಗೂ ಸಂಕಲ್ಪ, ರುದ್ರಾಭಿಷೇಕ ಮಹಾಪೂಜೆ ನೆರವೇರಿಸಿ ತೀರ್ಥ ಪ್ರಸಾದ ವಿತರಿಸಿ ದೇಶವಾಸಿಗಳಿಗೆ ಒಳಿತಾಗಲಿದೆ ಎಂದರು. ಈ ಸಂದರ್ಭ ಭಕ್ತಾದಿಗಳು ಹಾಜರಿದ್ದರು.



ಪಾಲೂರು ಶ್ರೀ ಮಹಾಲಿಂಗೇಶ್ವರ ಸನ್ನಿಧಿಯಲ್ಲಿ ವಿಶೇಷ ಪೂಜೆ.

'ಆಪರೇಷನ್ ಸಿಂಧೂರ್' ಮುಂದುವರಿಕೆ ಹಿನ್ನೆಲೆ

ಕೊಡಗಿನ ಹಾರಂಗಿ ಜಲಾಶಯಕ್ಕೆ ಭಾರಿ ಭದ್ರತೆ

ಮಡಿಕೇರಿ, ಮೇ 8– ಪಾಕಿಸ್ತಾನದ ಭಯೋತ್ಪಾದಕ ತಾಣಗಳ ವಿರುದ್ಧ ಭಾರತದ ರಕ್ಷಣಾ ಪಡೆಗಳು ಪ್ರತೀಕಾರವಾಗಿ 'ಆಪರೇಷನ್ ಸಿಂಧೂರ್' ಮುಂದುವರೆಸಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ಸೂಚನೆಯಂತೆ ಮುಂಜಾಗ್ರತಾ ಕ್ರಮವಾಗಿ ರಾಜ್ಯದ ಎಲ್ಲಾ 17 ಅಣೆಕಟ್ಟೆಗಳಿಗೆ ರಾಜ್ಯ ಸರ್ಕಾರ ಭದ್ರತೆ ಒದಗಿಸಿದೆ.

ಈ ಹಿನ್ನೆಲೆಯಲ್ಲಿ ಕೊಡಗಿನ ಏಕೈಕ ಜಲಾಶಯವಾದ ಹಾರಂಗಿ ಜಲಾಶಯಕ್ಕೆ ಹೆಚ್ಚಿನ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಹಾರಂಗಿ ಜಲಾಶಯದ ಭದ್ರತೆಗೆ ಸುಮಾರು 25 ಪೊಲೀಸ್ ಸಿಬ್ಬಂದಿಗಳನ್ನು ಇಲಾಖೆ ನಿಯೋಜಿಸಿದೆ. ಜಲಾಶಯದ ಆಯಕಟ್ಟು ಮತ್ತು ಸೂಕ್ಷ್ಮ ಸ್ಥಳಗಳಲ್ಲಿ ಶಸ್ತ್ರಸಜ್ಜಿತ ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಇನ್‌ಸಾಸ್ ಹಾಗೂ ಸೆಲ್ಫ್ ಲೋಡಿಂಗ್ ರೈಫಲ್ ಹೊಂದಿರುವ ಪೊಲೀಸ್ ಸಿಬ್ಬಂದಿ ದಿನದ 24 ಗಂಟೆಗಳ ಕಾಲ ಪಹರೆ ನಿರತರಾಗಿದ್ದಾರೆ. ಹಾರಂಗಿ ಜಲಾಶಯ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರನ್ನು ಸಂಪೂರ್ಣ ತಪಾಸಣೆಗೆ ಒಳಪಡಿಸಲಾಗುತ್ತಿದೆ.



ಹಾರಂಗಿ ಜಲಾಶಯದ ಬಳಿ ಶಸ್ತ್ರಸಜ್ಜಿತ ಪೊಲೀಸ್ ಭದ್ರತೆ ಒದಗಿಸಲಾಗಿರುವುದು.

ಈ ಬೆಳವಣಿಗೆಗಳ ನಡುವೆ ಹಾರಂಗಿ ಜಲಾಶಯಕ್ಕೆ ಇಲಾಖೆಯ ಇಂಜಿನಿಯರ್‌ಗಳು ಭೇಟಿ ನೀಡಿ ಡ್ಯಾಂನ ಡ್ರೈನೇಜ್ ಗ್ಯಾಲರಿಯನ್ನು ತಪಾಸಣೆ ನಡೆಸಿದರು. ಇಲಾಖೆಯ ಅಧಿಕಾರಿಯಾದ ಮಂಜುನಾಥ್, ಚೀಫ್ ಇಂಜಿನಿಯರ್ ರಘುಪತಿ ಹಾಗೂ ಹಾರಂಗಿ ಅಧೀಕ್ಷಕ ಇಂಜಿನಿಯರ್ ಪುಟ್ಟಸ್ವಾಮಿ ಸೇರಿದಂತೆ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಕೊಡಗಿನ ದೇವಾಲಯಗಳಲ್ಲಿ ವಿಶೇಷ ಪೂಜೆ



'ಆಪರೇಷನ್ ಸಿಂಧೂರ್' ಯಶಸ್ವಿಯಾದ ಹಿನ್ನೆಲೆಯಲ್ಲಿ ದೇವಾಲಯಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸುತ್ತಿರುವುದು

ಮಡಿಕೇರಿ, ಮೇ 8– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರಗಾಮಿಗಳು ನಡೆಸಿದ ಹತ್ಯಾಕಾಂಡಕ್ಕೆ ಭಾರತೀಯ ರಕ್ಷಣಾ ಪಡೆಗಳು ನಡೆಸಿದ ಪ್ರತೀಕಾರದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಯಶಸ್ವಿಯಾಗಿರುವುದಕ್ಕೆ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಪ್ರಾರ್ಥನೆ ಸಲ್ಲಿಸಲಾಯಿತು. ಭಾರತೀಯ ರಕ್ಷಣಾ ಪಡೆಗಳ ಹೆಸರಿನಲ್ಲಿ ಹಾಗೂ ಭಾರತೀಯ ಸೇನಾ ಯೋಧರಿಗೆ ಒಳಿತಾಗಲಿ, ಸೇನೆಗೆ ಮತ್ತಷ್ಟು ಶಕ್ತಿಯನ್ನು ಭಗವಂತನು ಅನುಗ್ರಹಿಸಲಿ ಎಂದು ಭಾಗಮಂಡಲದ ಶ್ರೀ ಭಗಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಸಂಕಲ್ಪದೊಂದಿಗೆ ಪೂಜೆಯನ್ನು ನೆರವೇರಿಸಲಾಯಿತು.

ನಗರದ ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ವತಿಯಿಂದಲೂ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ, ಪ್ರಮುಖರಾದ ಜಿ.ರಾಜೇಂದ್ರ, ಅಂಬೆಕಲ್ ಕುಶಾಲಪ್ಪ, ಪ್ರಕಾಶ್ ಆಚಾರ್ಯ ಸೇರಿದಂತೆ ಮತ್ತಿತರ ಪದಾಧಿಕಾರಿಗಳು ಹಾಜರಿದ್ದರು. ಭಾಗಮಂಡಲದ ಪದಕಲ್ಲು ಬಿಜೆಪಿ ಘಟಕದಿಂದಲೂ ಅಲ್ಲಿನ ದೇವಳದಲ್ಲಿ ಪೂಜೆ ಸಲ್ಲಿಸಿ ಕೇಂದ್ರ ಸರಕಾರ, ರಕ್ಷಣಾ ಪಡೆಗಳು ಮತ್ತು ಸೈನಿಕರ ಸುರಕ್ಷತೆಗೆ ಪ್ರಾರ್ಥನೆ ಸಲ್ಲಿಸಲಾಗಿದೆ.

ಜಲಜೀವನ್ ಮಿಷನ್ ಯೋಜನೆ ಜೂನ್ ಅಂತ್ಯದೊಳಗೆ ಪೂರ್ಣಗೊಳಿಸಿ

ಮಡಿಕೇರಿ: ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಳ್ಳಲಾಗಿರುವ ಕಾಮಗಾರಿಯನ್ನು ಜೂನ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಎಂಜಿನಿಯರ್‌ಗಳಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಾಕೀತು ಮಾಡಿದ್ದಾರೆ.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ 'ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಲಜೀವನ್ ಮಿಷನ್ ಯೋಜನೆಯಡಿ ಪ್ರತೀ ಕುಟುಂಬಕ್ಕೂ ನಲ್ಲಿ ನೀರು ಕಲ್ಪಿಸುವುದು ಸರ್ಕಾರದ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಇದರ ಗಂಭೀರತೆ ಅರ್ಥ ಮಾಡಿಕೊಂಡು ಬಾಕಿ ಇರುವ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಅವರು ನಿರ್ದೇಶನ ನೀಡಿದರು. ಜಲಜೀವನ್ ಮಿಷನ್ ಯೋಜನೆಯು ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯಾಗಿದ್ದು, ಪ್ರತೀ ಕುಟುಂಬಕ್ಕೂ ಶುದ್ಧ ಕುಡಿಯುವ ನೀರು ಒದಗಿಸುವಲ್ಲಿ ಆದ್ಯತೆ ನೀಡಬೇಕು. ಜಲಜೀವನ್ ಮಿಷನ್ ಯೋಜನೆ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಆಗಾಗ ಭೇಟಿ ನೀಡಿ ಸ್ಥಳ ಪರಿಶೀಲಿಸುವಂತಾಗಬೇಕು ಎಂದರು.

ಹೊಲೆಯ, ಮಾದಿಗ ಜನಾಂಗದವರು ಸರಿಯಾಗಿ ಜಾತಿ ನಮೂದಿಸಲು ಮನವಿ

ಸಮೀಕ್ಷೆಗೆ ಒಂದು ತಿಂಗಳ ಕಾಲಾವಕಾಶ ಕೊಡುವಂತೆ ಒತ್ತಾಯ

ಚಾಮರಾಜನಗರ, ಮೇ 8– ಒಳ ಮೀಸಲಾತಿ ಜಾರಿಗೊಳಿಸುವ ಸಂಬಂಧ ರಾಜ್ಯ ಸರ್ಕಾರ ನಡೆಸುತ್ತಿರುವ ಜಾತಿ ಗಣತಿ ಸಮೀಕ್ಷೆಯಲ್ಲಿ ಹೊಲೆಯ ಹಾಗೂ ಮಾದಿಗ ಜನಾಂಗದವರು ಗಣತಿದಾರರಿಗೆ ಸರಿಯಾದ ಮಾಹಿತಿ ನೀಡಬೇಕು ಎಂದು ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣ ಸ್ವಾಮಿ (ಪಾಪು) ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಮೀಕ್ಷೆ ಆರಂಭಗೊಂಡು 2 ದಿನ ಕಳೆದಿದೆ. ಆದರೂ ಇನ್ನೂ ಅನೇಕ ಗೊಂದಲಗಳಿವೆ ಮೇ 17ರ ತನಕ ಸಮೀಕ್ಷೆಮುಗಿಯುವುದಿಲ್ಲ. ಆದ್ದರಿಂದ ಸರ್ಕಾರ ಹೆಚ್ಚಿನ ಕಾಲಾವಕಾಶ ನೀಡಬೇಕು. ಒಂದು ತಿಂಗಳು ಮುಂದೂಡಬೇಕು ಎಂದು ಒತ್ತಾಯಿಸಿದರು.

ಜಾತಿ ಗಣತಿ ವೇಳೆ ಜನಾಂಗದವರು ಉಪಜಾತಿಯನ್ನು ಸರಿಯಾಗಿ ದಾಖಲು ಮಾಡಬೇಕು. ಅಲ್ಲದೇ ಗಣತಿದಾರರು ಕೂಡ ಒಂದು ಕಡೆ ಕುಳಿತು ಗಣತಿ ಮಾಡದೇ ಮನೆ ಮನೆಗೆ ತೆರಳಿ ಸಮೀಕ್ಷೆ ಮಾಡಬೇಕು ಎಂದರು.

ಯಾವ ವಾರ್ಡ್, ಯಾವ ಬೀದಿಗೆ ಯಾವ ಗಣತಿದಾರರನ್ನು ನೇಮಕ ಮಾಡಲಾಗಿದೆ. ಯಾವ ಸಮಯಕ್ಕೆ ಬರುತ್ತಾರೆ ಎಂಬುವುದರ ಕುರಿತು ಜಿಲ್ಲಾಡಳಿತ ಮಾಹಿತಿ ನೀಡಬೇಕು. ಗಣತಿಯಲ್ಲಿ ಉಂಟಾಗಿರುವ ಆಪ್ ಸಮಸ್ಯೆಯನ್ನು ಸರ್ಕಾರ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಈಗಾಗಲೇ ಗಣತಿ ಆರಂಭಗೊಂಡು ಎರಡು ದಿನಗಳೇ ಕಳೆದು ಹೋಗಿದೆ. ಅನೇಕ ಕಡೆಗಳಲ್ಲಿ ಇನ್ನೂ ಗಣತಿದಾರರು ಹೋಗಿಲ್ಲ. ಇದರಿಂದ ಜನರಲ್ಲಿ ಗೊಂದಲ ಉಂಟಾಗಿದೆ. ಆದ್ದರಿಂದ ಗಣತಿದಾರರಿಗೆ ಸಮಯ ನಿಗದಿಪಡಿಸಬೇಕು. ಗಣತಿದಾರರ ಮಾಹಿತಿಯನ್ನು ಆಯಾ ವಾರ್ಡ್‌ಗಳ ಜನರಿಗೆ ತಿಳಿಸಬೇಕು ಎಂದರು.



ಪತ್ರಿಕಾಗೋಷ್ಠಿಯಲ್ಲಿ ವೆಂಕಟರಮಣ ಸ್ವಾಮಿ ಮಾತನಾಡಿದರು.

ನಮ್ಮ ಜಾತಿಯನ್ನು ಹೆಚ್ಚು ನಮೂದಿಸಬೇಕು ಎಂಬ ಆಮಿಷಗಳನ್ನು ಒಡ್ಡಲಾಗುತ್ತಿದೆ. ಇದು ನಮ್ಮ ಗಮನಕ್ಕೆ ಬಂದಿದೆ. ಇದು ಸರಿಯಲ್ಲ. ಯಾವುದೇ ಹಸ್ತಕ್ಷೇಪ ಮಾಡದೆ ತಮ್ಮ ತಮ್ಮ ಮೂಲ ಜಾತಿಗಳನ್ನು ನಮೂದಿಸಿ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಪಡೆದು ಆರ್ಥಿಕವಾಗಿದೆ ಸಬಲರಾಗಬೇಕು ಎಂದರು.

ದಸಂಸ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಒಳ ಮೀಸಲಾತಿ ಸಮೀಕ್ಷೆ ಮಾಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಯಜಮಾನರಾದ ನಾಗರಾಜು, ಮುಖಂಡರಾದ ರಂಗಸ್ವಾಮಿ, ಗೌರಿಶಂಕರ್ ಹಾಜರಿದ್ದರು.

ಯುವಕ ನಾಪತ್ತೆ

ಚಾಮರಾಜನಗರ, ಮೇ 8– ಚಾಮರಾಜನಗರ ತಾಲೂಕಿನ ಕೋಡಿಮೋಳೆ ಗ್ರಾಮದ ನಿವಾಸಿ ಮಹೇಶ ಎಂಬ ಯುವಕ ಕಾಣೆಯಾಗಿದ್ದಾನೆ.



28 ವರ್ಷದ ಮಹೇಶ 5.5 ಅಡಿ ಎತ್ತರ, ಗೋಧಿ ಮೈಬಣ್ಣ, ಸದೃಢ ಮೈಕಟ್ಟು ಹೊಂದಿದ್ದು, ಕುತ್ತಿಗೆಯಲ್ಲಿ ರುದ್ರಾಕ್ಷಿ ಮಣಿ ಇರುತ್ತದೆ. ಮನೆಯಿಂದ ಹೋಗುವಾಗ ಹಸಿರು ಬಣ್ಣದ ಟೀ ಶರ್ಟ್ ಮತ್ತು ಬಿಳಿ ಬಣ್ಣದ ನೈಟ್ ಪ್ಯಾಂಟ್ ಧರಿಸಿದ್ದರು.

ಸುಳಿವು ದೊರೆತಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ದೂ.ಸಂ.08226–222243, ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ದೂ.ಸಂ 08226–222052, ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ. 08226–222383, ಪೂರ್ವ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮೊ.ಸಂ 9480804646 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಾಳೆ ಶ್ರೀ ಬಿಳಿಗಿರಿರಂಗನಾಥಸ್ವಾಮಿಯ ಬ್ರಹ್ಮರಥೋತ್ಸವ

ವಿವಿಧ ಪೂಜಾ ಕೈಂಕರ್ಯಗಳು

ಚಾಮರಾಜನಗರ, ಮೇ 8– ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿಯ ಬ್ರಹ್ಮರಥೋತ್ಸವವು ಮೇ 10ರಂದು ನಡೆಯಲಿದ್ದು, ರಥೋತ್ಸವದ ಅಂಗವಾಗಿ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ.

ಮೇ 9ರಂದು ಹಗಲು ಪಲ್ಲಕ್ಕಿ ಉತ್ಸವ ಸಂಜೆ 7 ಗಂಟೆಗೆ ಸಿಂಹ ವಾಹನ ಗಜೇಂದ್ರ ಮೋಕ್ಷ, ಆನೆ ವಾಹನ ನಡೆಯಲಿದೆ. ಮೇ 10ರಂದು ನಿತ್ಯಾರಾಧನೆ ಬೆಳಿಗ್ಗೆ 4.30 ಗಂಟೆಗೆ ಕಲ್ಯಾಣೋತ್ಸವ, 6 ಗಂಟೆಯ ನಂತರ ಪ್ರಸ್ಥಾನ ಮಂಟಪೋತ್ಸವಗಳು, ನಂತರ ಬೆಳಿಗ್ಗೆ 11.02ರಿಂದ 11.15 ಗಂಟೆಯೊಳಗೆ ರಥಾರೋಹಣ ನಂತರ ಶ್ರೀಮಾನ್ ಮಹಾರಥೋತ್ಸವ ಜರುಗಲಿದೆ. ನಂತರ ಮಂಟಪೋತ್ಸವಗಳು ರಾತ್ರಿ ತೇರಡಿ ಉತ್ಸವ, ಆಂಜನೇಯಾರೋಹಣ ಮಹೋತ್ಸವ ನಡೆಯಲಿದೆ.

ಮೇ 11ರಂದು ಬೆಳಿಗ್ಗೆ 11 ಗಂಟೆಗೆ ಗರುಡೋತ್ಸವ ಸೇವೆಗಳು, ಸಂಜೆ 6 ಗಂಟೆಗೆ ರಾಸ ಕ್ರೀಡೋತ್ಸವ ನಂತರ ಪ್ರಹ್ಲಾದೋತ್ಸವ ರಾತ್ರಿ 8.30 ಗಂಟೆಗೆ ಶಾಂತೋತ್ಸವ, ಮಂಟಪೋತ್ಸವ ಶಯನೋತ್ಸವ ಸೇವೆ, 12ರಂದು ಬೆಳಿಗ್ಗೆ ಕುದುರೆ ವೈಯಾಳಿ ಉತ್ಸವ, ನಂತರ ಅವಕೃತ ಮಂಗಳಸ್ನಾನ, ಸಾಯಂಕಾಲ ಧ್ವಜಾವರೋಹಣ, ಅನಂತರ ನರಾಂದೋಳಿಕಾರೋಹಣ ಮಹೋತ್ಸವ, 13ರಂದು ರಾತ್ರಿ ಶ್ರೀಯವರಿಗೆ ಗಂಧಾಭಿಷೇಕ, ಅಮ್ಮನವರಿಗೆ ಹರಿದ್ರಾ ಕುಂಕುಮ ಚೂರ್ಣ ಅಲಂಕಾರ ಮಹೋತ್ಸವ, ದ್ವಾದಶ ತಿರುವಾರಾಧನೆ, ಪುಷ್ಪಯಾಗೋತ್ಸವ ಚಂದ್ರ ಮಂಡಲೋತ್ಸವ, ಮಂಟಪೋತ್ಸವ, ಮಹಾಮಂಗಳಾರತಿ, ಅನಂತರ 12 ಪ್ರಾಕಾರ ಉತ್ಸವಗಳು ನಡೆಯಲಿವೆ.



ಮೇ 14ರಂದು ಬೆಳಿಗ್ಗೆ ಮಹಾಭಿಷೇಕವೆಂಬ ಸಹಸ್ರ ಕಳಶಾಭಿಷೇಕ ಮಹೋತ್ಸವ ನಂತರ ಮಹಾಪ್ರಸಾದ ವಿನಿಯೋಗ 15ರಂದು ಶ್ರೀಯವರಿಗೆ ಆಯಾಸಪರಿಹಾರ ರೂಪ ಕೋಟೆ ತಿರುನಾಳೆಂಬ ವೈಮಾಳಿಹೆ ಉತ್ಸವ, 16ರಂದು ಶ್ರೀಯವರಿಗೆ ವೈಮಾಳಿಹೆ ಉತ್ಸವ ಮಂಟಪೋತ್ಸವ, ಮಂಗಳಾರತಿ ಹಾಗೂ 17ರಂದು ಶ್ರೀಯವರಿಗೆ ವೈಮಾಳಿಹೆ ಉತ್ಸವ ಮಂಟಪೋತ್ಸವ, ಮಂಗಳಾರತಿ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 11ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ಒಂದನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 11ರಂದು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಚಾಮರಾಜನಗರ ಟೌನ್–1, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ ಟೌನ್–2, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ಗೂಳಿಪುರ ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಆಪರೇಷನ್ ಸಿಂಧೂರ ಯಶಸ್ವಿ; ಸಂಭ್ರಮಾಚರಣೆ



ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಯಶಸ್ವಿ ಹಿನ್ನೆಲೆಯಲ್ಲಿ ಹರದನಹಳ್ಳಿ ಮತ್ತು ಬಂಡಿಗೆರೆ ಗ್ರಾಮದಲ್ಲಿ ಗ್ರಾಮಸ್ಥರ ಸಂಭ್ರಮಾಚರಣೆ.

ಚಾಮರಾಜನಗರ, ಮೇ 8– ಪಾಕಿಸ್ತಾನದಲ್ಲಿನ ಉಗ್ರರ ವಿರುದ್ಧ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಯಶಸ್ವಿ ಹಿನ್ನೆಲೆಯಲ್ಲಿ ಚಾಮರಾಜನಗರ ತಾಲೂಕಿನ ಹರದನಹಳ್ಳಿ ಮತ್ತು ಬಂಡಿಗೆರೆ ಗ್ರಾಮದಲ್ಲಿ ಗ್ರಾಮಸ್ಥರು ಸಂಭ್ರಮಾಚರಣೆ ಮಾಡಿದರು.

ಹರದನಹಳ್ಳಿ ಗ್ರಾಮದ ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಸಮಾವೇಶಗೊಂಡ ಗ್ರಾಮದ ಮುಖಂಡರು ಭಾರತೀಯ ಸೈನ್ಯಕ್ಕೆ ಜಯ ಘೋಷಣೆ ಕೂಗಿದರು. ವಿಶೇಷವಾಗಿ ಭಾರತದ ಧ್ವಜವನ್ನು ಹಿಡಿದು ಗಮನ ಸೆಳೆದರು.

ಬಳಿಕ ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ದೇಶದ ಸೈನಿಕರ ಒಳಿತಿಗಾಗಿ ಹಾಗೂ ಭಾರತೀಯ ಸೈನ್ಯಕ್ಕೆ ಇನ್ನೂ ಹೆಚ್ಚಿನ ಶಕ್ತಿ ಬರಲೆಂದು ಹಾರೈಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಪರಸ್ಪರ ಸಿಹಿ ಹಂಚಿಕೊಂಡು ಖುಷಿ ವ್ಯಕ್ತಪಡಿಸಿದರು.

ಬುದ್ಧ ಪೂರ್ಣಿಮೆ, ಹಣ್ಣು–ಹಂಪಲು ವಿತರಣೆ

ಯಳಂದೂರು, ಮೇ 8– ಸೋಮವಾರ (ಮೇ 12) ಬುದ್ಧ ಪೂರ್ಣಿಮೆ ಇರುವುದರಿಂದ ಬೋಧಿ ಸಪ್ತಾಹ ಆಚರಣೆ ಮಾಡಲಾಗುತ್ತಿದೆ. ಗುರುವಾರ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಮಹಾವನ ಎಜುಕೇಷನ್ ಮತ್ತು ಚಾರಿಟೆಬಲ್ ಸೊಸೈಟಿ ವತಿಯಿಂದ ಹಣ್ಣುಗಳನ್ನು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಟ್ರಸ್ಟಿನ ಬಂತೆಬುದ್ಧ ರತ್ನ ಮಾತನಾಡಿ, ಬುದ್ಧ ಪೂರ್ಣಿಮೆ ಮೇ 12 ರಂದು ನಡೆಯಲಿದೆ. ಇದರ ಅಂಗವಾಗಿ ಹೊನ್ನೂರು–ಕೆಸ್ತೂರು ಗ್ರಾಮದ ಮಹಾವನ ಬುದ್ಧವಿಹಾರ ಹಾಗೂ ಸೊಸೈಟಿ ವತಿಯಿಂದ ಒಂದು ವಾರ ವಿವಿಧ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ. ಮೊದಲ ದಿನ ಪಬ್ಬಜ್ಜ, (ತಾತ್ಕಾಲಿಕ ಭಿಕ್ಷು ತರಬೇತಿ ಶಿಬಿರ), ಎರಡನೇ ದಿನಸಂತೆಮರಹಳ್ಳಿ ಜ್ಞಾನ ಸಿಂಧು ಆಶ್ರಮದಲ್ಲಿ ಆಹಾರ ದಾನ, ಮೂರನೇ ದಿನ, ತಾಲೂಕು ಆಸ್ಪತ್ರೆಯ ರೋಗಿಗಳಿಗೆ ಹಣ್ಣುಹಂಪಲುಗಳನ್ನು ವಿತರಣೆ ಮಾಡಲಾಗುತ್ತಿದೆ. ನಾಲ್ಕನೆ ದಿನ ಧಮ್ಮ ದೀಪ, ಐದನೇ ದಿನ ಬೌದ್ಧ ಕುಟುಂಬದವರಿಗೆ ಬೌದ್ಧ ಸಂಸ್ಕಾರದ ಬಗ್ಗೆ ಒಂದು ದಿನದ ಶಿಬಿರ, ಆರನೇ ದಿನ ಮಹಾಪರಿತ್ರಾಣ ಪಠಣ ಹಾಗೂ ಧಮ್ಮದೀಪವನ್ನು ಮದ್ದೂರು ಹಾಗೂ ಯಳಂದೂರು ಪಟ್ಟಣದಲ್ಲಿ ಮೆರವಣಿಗೆ ಮಾಡಲಿದ್ದು ಮೇ 12ರಂದು ಬುದ್ಧ ಜಯಂತಿ ಮಹೋತ್ಸವ ನಡೆಯಲಿದೆ ಎಂದು ಮಾಹಿತಿ ನೀಡಿದರು.



ಯಳಂದೂರು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಗುರುವಾರ ಬುದ್ಧ ಸಪ್ತಾಹದ ಅಂಗವಾಗಿ ಮಹಾವನ ಎಜುಕೇಷನ್ ಅಂಡ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಒಳರೋಗಿಗಳಿಗೆ ಹಣ್ಣು ಹಂಪಲುಗಳನ್ನು ವಿತರಣೆ ಮಾಡಲಾಯಿತು.

ದಾನಿಗಳಾದ ಮಹೇಂದ್ರ, ಜಯಶೀಲ, ಬಿಳಿಗಿರಿರಂಗನಾಥಸ್ವಾಮಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ. ಶ್ರೀನಿವಾಸ್, ವಕೀಲ ಅಂಬಳೆ ಮಹದೇವಸ್ವಾಮಿ, ಹೊನ್ನೂರು ರಾಜೇಂದ್ರ, ಲೋಕೇಶ್, ಕೆಸ್ತೂರು ಶಾಂತರಾಜು, ಪ್ರಮೋದ್, ಮಂಟೇಲಿಂಗಯ್ಯ, ಯಜಮಾನರಾದ ದೊರೆಸ್ವಾಮಿ, ಕುಮಾರ್ ಗ್ರಾಪಂ ಸದಸ್ಯ ರೂಪೇಶ್ ಡಾ. ಶ್ರೀಧರ್, ಡಾ. ಕೃಷ್ಣಪ್ರಸಾದ್, ಡಾ. ಶಶಿರೇಖಾ ಸೇರಿದಂತೆ ಅನೇಕರು ಇದ್ದರು.

ಇಂದು ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಜಾಥಾ

ಚಾಮರಾಜನಗರ, ಮೇ 8– ವಿಶ್ವ ಮಲೇರಿಯಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಜನಸಾಮಾನ್ಯರಿಗೆ ಅರಿವು ಮೂಡಿಸುವ ಸಲುವಾಗಿ ಮೇ 9ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಜಾಥಾ ಹೊರಡಲಿದೆ.

ಜಾಥಾಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಅವರು ಚಾಲನೆ ನೀಡಲಿದ್ದು, ಜಾಥಾವು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಲಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆರವಾಗಿರುವ ಗ್ರಾಪಂ ಸ್ಥಾನಕ್ಕೆ ಉಪ ಚುನಾವಣೆ

ಚಾಮರಾಜನಗರ: ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸುವ ಸಂಬಂಧ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅಧಿಸೂಚನೆ ಹೊರಡಿಸಿದ್ದಾರೆ.

ಚಾಮರಾಜನಗರ ತಾಲೂಕಿನ ಕೆಂಪನಪುರ ಗ್ರಾಪಂನ ಸಿಂಗನಪುರ ಕ್ಷೇತ್ರ (ಸಾಮಾನ್ಯ), ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿ ಗ್ರಾಪಂನ ಕೊಡಗಾಪುರ ಕ್ಷೇತ್ರ (ಹಿಂದುಳಿದ ಬಿ ವರ್ಗ), ಯಳಂದೂರು ತಾಲೂಕಿನ ಗೌಡಹಳ್ಳಿ ಗ್ರಾಪಂನ ಟಿ.ಹೊಸೂರು ಕ್ಷೇತ್ರ (ಸಾಮಾನ್ಯ), ಹನೂರು ತಾಲೂಕಿನ ಪಿ.ಜಿ. ಪಾಳ್ಯ ಗ್ರಾಪಂನ ಅತ್ತಿಖಾನೆ ಕ್ಷೇತ್ರ (ಅನುಸೂಚಿತ ಪಂಗಡ ಮಹಿಳೆ), ಮಲೈ ಮಹದೇಶ್ವರಬೆಟ್ಟ ಗ್ರಾಪಂನ ಗೊರಸಾಣೆ ಕ್ಷೇತ್ರ (ಅನುಸೂಚಿತ ಪಂಗಡ)ಗಳ ತಲಾ ಒಂದು ಸದಸ್ಯ ಸ್ಥಾನ ಸೇರಿದಂತೆ ಒಟ್ಟು 5 ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಿಗದಿಯಾಗಿದೆ.

ನಾಮಪತ್ರ ಸಲ್ಲಿಸಲು ಮೇ 14 ಕೊನೆ ದಿನವಾಗಿದೆ. ನಾಮಪತ್ರಗಳ ಪರಿಶೀಲನಾ ಕಾರ್ಯ ಮೇ 15ರಂದು. ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಮೇ 17 ಕಡೆಯ ದಿನವಾಗಿದೆ. ಮತದಾನ ಅವಶ್ಯವಿದ್ದರೆ ಮೇ 25 ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಸಲಾಗುತ್ತದೆ. ಮರು ಮತದಾನ ಅವಶ್ಯವಿದ್ದರೆ ಮೇ 27ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಸಲಾಗುತ್ತದೆ. ಮೇ 28ರಂದು ಬೆಳಿಗ್ಗೆ 8 ಗಂಟೆಗೆ ತಾಲೂಕು ಕೇಂದ್ರಗಳಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದೆ.

ಪೆನ್‌ಡ್ರೈವ್

ಒಂದು ಇನ್‌ವೆಸ್ಟಿಗೇಶನ್ ಕಥೆ



ವರ್ಷದ ಹಿಂದೆ ರಾಜ್ಯದಲ್ಲಿ ದೊಡ್ಡದಾಗಿ ಸದ್ದು ಮಾಡಿದ್ದು ಪೆನ್‌ಡ್ರೈವ್ ಪ್ರಕರಣ. ಇದೀಗ ಅದೇ ಹೆಸರಲ್ಲಿ ಚಲನಚಿತ್ರವೊಂದು ತಯಾರಾಗಿದೆ. ಕಥೆ ಯಾವುದೆಂದು ಚಿತ್ರತಂಡ ಇನ್ನೂ ಬಿಟ್ಟುಕೊಟ್ಟಿಲ್ಲ. ಸೆಬಾಸ್ಟಿನ್ ಡೇವಿಡ್ ಅವರ ನಿರ್ದೇಶನದ ಪೆನ್‌ಡ್ರೈವ್ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಬಿಗ್‌ಬಾಸ್ ಖ್ಯಾತಿಯ ತನಿಷಾ ಕುಪ್ಪಂಡ, ಕಿಶನ್ ಹಾಗೂ ಹಿರಿಯ ನಟಿ ಮಾಲಾಶ್ರೀ ಈ ಚಿತ್ರದ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಸೆಬಾಸ್ಟಿನ್ ಡೇವಿಡ್ ಮಾತನಾಡುತ್ತಾ, ನನ್ನ ನಿರ್ದೇಶನದ ಹದಿನಾರನೇ ಚಿತ್ರವಿದು. ಈ ಸಬ್ಜೆಕ್ಟನ್ನು ನಾನು ಬಹಳ ಹಿಂದೆಯೇ ಮಾಡಿಕೊಂಡಿದ್ದೆ. ಈ ಹಿಂದೆ ನಡೆದ ಪೆನ್‌ಡ್ರೈವ್ ಪ್ರಕರಣಕ್ಕೂ, ನಮ್ಮ ಚಿತ್ರದ ಕಥೆಗೂ ಯಾವುದೇ ಸಂಬಂಧವಿಲ್ಲ. ಇದೊಂದು ಕಾಲ್ಪನಿಕ ಇನ್‌ವೆಸ್ಟಿಗೇಶನ್ ಕಥೆಯಾಗಿದ್ದು, ಅದರಲ್ಲಿ ಪೆನ್‌ಡ್ರೈವ್ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಚಿತ್ರದಲ್ಲಿ ತುಂಬಾ ಜನ ನಾಯಕಿಯರಿದ್ದು, ತನಿಷಾ ಕುಪ್ಪಂಡ, ಸಂಜನಾ ನಾಯ್ಡು ಅಲ್ಲದೆ ಹಿರಿಯ ನಟಿ ಮಾಲಾಶ್ರೀ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ನಿರ್ಮಾಪಕರ ಸಹಕಾರದಿಂದ ಅಂದುಕೊಂಡ ಹಾಗೆ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಿದ್ದೇವೆ. ಸದ್ಯದಲ್ಲೇ ಬಿಡುಗಡೆ ಮಾಡುವ ಪ್ರಯತ್ನ ನಡೆಯುತ್ತಿದೆ. ಹಾಡುಗಳು ಹಾಗೂ ಟ್ರೇಲರ್‌ನ್ನು ಶೀಘ್ರವೇ ರಿಲೀಸ್ ಮಾಡುವ ಪ್ಲಾನ್ ಇದೆ ಎಂದರು. ನಟಿ ತನಿಷಾ ಕುಪ್ಪಂಡ ಮಾತನಾಡುತ್ತಾ, ನಾನು ಈ ಚಿತ್ರದಲ್ಲಿ ಒಬ್ಬ ಪೊಲೀಸ್ ಅಧಿಕಾರಿಣಿಯ ಪಾತ್ರ ಮಾಡಿದ್ದೇನೆ. ಜತೆಗೆ ಒಂದು ಹಾಡಿನಲ್ಲೂ ಅಭಿನಯಿಸಿದ್ದೇನೆ, ನಿರ್ದೇಶಕರು ಒಂದೊಳ್ಳೆಯ ಕಥೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ನಟ ಕಿಶನ್ ಮಾತನಾಡುತ್ತಾ, ಬಿಗ್‌ಬಾಸ್ ಮನೆಯಿಂದ ಹೊರಬಂದ ನಂತರ ನನ್ನ ಅಭಿನಯದ ಮೊದಲ ಚಿತ್ರ ಪೆನ್‌ಡ್ರೈವ್ ಎಂದು ಹೇಳಿದರು. ತಮ್ಮ ಪಾತ್ರಗಳ ಬಗ್ಗೆ ನಟಿ ಸಂಜನಾ ನಾಯ್ಡು, ಅರ್ಚನಾಗೌಡ ಮತ್ತು ಹಿರಿಯ ನಟ ಕರಿಸುಬ್ಬು ಮಾಹಿತಿ ನೀಡಿದರು.

ನಿರ್ಮಾಪಕರಾದ ಹನುಮಂತರಾಜು ಹಾಗೂ ಲಯನ್ ಎಸ್. ವೆಂಕಟೇಶ್ ಮಾತನಾಡಿ, ನಿರ್ದೇಶಕರು ಹೇಳಿದ ಕಥೆ ಇಷ್ಟವಾಗಿ ಚಿತ್ರನಿರ್ಮಾಣಕ್ಕೆ ಮುಂದಾದೆ ಎಂದು ಹೇಳಿದರು. ಕಾರ್ಯಕಾರಿ ನಿರ್ಮಾಪಕರಾದ ಜಿ.ವೆಂಕಟೇಶ್ ಸಹ ಚಿತ್ರದ ಕುರಿತಂತೆ ಮಾತನಾಡಿದರು. ನಾಗೇಶ್ ಅವರ ಸಹ ನಿರ್ದೇಶನ, ಪಿ.ವಿ.ಆರ್. ಸ್ವಾಮಿ ಅವರ ಛಾಯಾಗ್ರಹಣ, ಡಾ||ವಿ.ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ ಹಾಗೂ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.



ಪ್ರೀತಿ ಪ್ರೇಮದ ಕಥೆಯಲ್ಲಿ ಕುಂಟೆಬಿಲ್ಲೆ ಆಟ...

ನಾವೆಲ್ಲಾ ಚಿಕ್ಕ ವಯಸ್ಸಿನಲ್ಲಿ ಆಡುತ್ತಿದ್ದ ಆಟ ಕುಂಟೆಬಿಲ್ಲೆ. ಇದು ಅನಾದಿ ಕಾಲದಿಂದಲೂ, ಅದರಲ್ಲೂ ಗ್ರಾಮೀಣ ಭಾಗದ ಹೆಣ್ಣುಮಕ್ಕಳು ಆಡುತ್ತ ಬಂದಿರುವ ಒಂದು ಸಾಂಪ್ರದಾಯಿಕ ಆಟವೂ ಹೌದು. ಇದೀಗ ಅದನ್ನೇ ಶೀರ್ಷಿಕೆಯಾಗಿಸಿಕೊಂಡು ಸಿದ್ದೇಗೌಡ ಜಿ.ಬಿ.ಎಸ್. ಅವರು ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಈ ಹಿಂದೆ ದಕ್ಷಯಜ್ಞ, ತರ್ಲೆವಿಲೇಜ್, ಋತುಮತಿಯಂಥ ಚಿತ್ರಗಳನ್ನು ನೀಡಿದ ಸಿದ್ದೇಗೌಡರ ಮತ್ತೊಂದು ಚಿತ್ರವಿದು. ಯುವನಟ ಯದು ನಾಯಕನಾಗಿ ಎಂಟ್ರಿ ಕೊಡುತ್ತಿರೋ ಈ ಚಿತ್ರದಲ್ಲಿ ಮೇಘಶ್ರೀ ನಾಯಕಿಯಾಗಿದ್ದಾರೆ.

ಇದೀಗ ಚಿತ್ರದ ಚಿತ್ರೀಕರಣ ಮುಗಿಸಿಕೊಂಡಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಸಿದ್ಧತೆ ಮಾಡಿಕೊಳ್ಳುತ್ತಿದೆ. ಜೀವಿತ ಕ್ರಿಯೇಷನ್ಸ್ ಮೂಲಕ ಎಸ್.ಬಿ.ಶಿವು ಹಾಗೂ ಕುಮಾರ್‌ಗೌಡ ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರದ ಕುರಿತಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಿದ್ದೇಗೌಡರು ಜೀವನದ ಮೌಲ್ಯ, ಪ್ರೀತಿ ಪ್ರೇಮದ ತಾರತಮ್ಯ, ಘರ್ಷಣೆ, ಸಮಾಜದ ಹುಳುಕುಗಳನ್ನು ತೆರೆದಿಡುವ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಸೆಂಟಿಮೆಂಟ್ ಕಥಾಹಂದರ ಈ ಚಿತ್ರದಲ್ಲಿದೆ. ಕೋಳಿ ಫಾರಂನಲ್ಲಿ ಕೆಲಸ ಮಾಡುತ್ತಿದ್ದ ನಾಯಕ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಹೇಗೆಲ್ಲ ಹೋರಾಟ ನಡೆಸುತ್ತಾನೆ, ಆತ ತನ್ನ ಪ್ರೀತಿಯನ್ನು ಪಡೆದುಕೊಳ್ಳುವ ಹಾದಿಯಲ್ಲಿ ಪೋಷಕರಿಂದ, ಸಮಾಜದಿಂದ ಏನೆಲ್ಲ ಅಡೆತಡೆಗಳು ಎದುರಾಗುತ್ತವೆ, ಕೊನೆಗೆ ಆತ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಯಿತೇ, ಇಲ್ಲವೇ ಎಂಬುದನ್ನು ಕುಂಟೆಬಿಲ್ಲೆ ಚಿತ್ರದಲ್ಲಿ ಹೇಳಿದ್ದೇವೆ. ಕುಂಟೆಬಿಲ್ಲೆ ಎಂಬ ಟೈಟಲ್ ಚಿತ್ರಕ್ಕೆ ಏಕೆ ಇಟ್ಟಿದ್ದೇವೆ ಎಂಬ ಪ್ರಶ್ನೆ ಪ್ರೇಕ್ಷಕರಲ್ಲಿ ಮೂಡುವುದು ಸಹಜ. ಚಿತ್ರದಲ್ಲೂ ಕುಂಟೆಬಿಲ್ಲೆ ತರದ ಒಂದು ಗೇಮ್ ಇದೆ. ಅದು ಯಾತಕ್ಕೆ, ಯಾರ್‍ಯಾರ ನಡುವೆ ನಡೆಯುತ್ತದೆ ಎಂಬುದನ್ನು ತಿಳಿಯಲು ಚಿತ್ರಮಂದಿರಕ್ಕೆ ಬರಬೇಕು. ಇದೊಂದು ವಿಭಿನ್ನ ನಿರೂಪಣೆಯ ಚಿತ್ರವಾಗಿದ್ದು ಇದುವರೆಗೂ ಈ ತರದ ಚಿತ್ರವನ್ನು ಕನ್ನಡ ಪ್ರೇಕ್ಷಕರು ನೋಡಿಲ್ಲವೆಂದೇ ಹೇಳಬಹುದು. ಕುಂಟೆಬಿಲ್ಲೆ ಚಿತ್ರಕ್ಕೆ ಮೈಸೂರು, ಕೆಆರ್ ನಗರ, ಹೆಚ್‌ಡಿ ಕೋಟೆಯ ಚಿಕ್ಕಮ್ಮನ ಬೆಟ್ಟ, ಚಿಕ್ಕದೇವಿ ಬೆಟ್ಟ, ಕೋಳಿ ಫಾರಂ ಸೇರಿದಂತೆ ಹಲವಾರು ಲೊಕೇಶನ್‌ಗಳಲ್ಲಿ ಸುಮಾರು 38 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ, ಶುಕ್ರವಾರ ನಾಯಕ ಯದು ಅವರ ಹುಟ್ಟುಹಬ್ಬದ ಪ್ರಯುಕ್ತ ಚಿತ್ರದ ಫಸ್ಟ್‌ಲುಕ್ ರಿಲೀಸ್ ಮಾಡುತ್ತಿದ್ದೇವೆ, ಅಲ್ಲದೆ ಸದ್ಯದಲ್ಲೇ ಚಿತ್ರದ ಟೀಸರ್ ಬಿಡುಗಡೆ ಮಾಡುವ ಯೋಜನೆಯಿದೆ ಎಂದು ಚಿತ್ರದ ಬಗ್ಗೆ ಸಂಪೂರ್ಣ ವಿವರಗಳನ್ನು ಹೇಳಿದರು.


ಸಿದ್ದೇಗೌಡ


ಪಡುವಾರಹಳ್ಳಿ ಶಿವು

ನಾಯಕಿ ಮೇಘಶ್ರೀ ಮಾತನಾಡುತ್ತಾ, ಚಿತ್ರದ ಟೈಟಲ್‌ನಷ್ಟೇ ಸ್ಕ್ರಿಪ್ಟ್ ಕೂಡ ಚೆನ್ನಾಗಿದೆ. ಶ್ರೀಮಂತ ಕುಟುಂಬದ ಹುಡುಗಿಯಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದರು. ನಾಯಕ ಯದು ಮಾತನಾಡಿ, ನನ್ನ ಮೊದಲ ಚಿತ್ರದಲ್ಲೇ ಇಂತಹ ಚಾಲೆಂಜಿಂಗ್ ಪಾತ್ರ ಸಿಕ್ಕಿರುವುದು ನನ್ನ ಅದೃಷ್ಟ ಕನ್ನಡ ಜನತೆಗೆ ಇದೊಂದು ಹೊಸ ತರದ ಚಿತ್ರವಾಗಲಿದೆ ಎಂದರು. ಚಿತ್ರದ ಸಂಭಾಷಣೆಗಳನ್ನು ಬಿ.ಎ. ಮಧು ರಚಿಸಿದ್ದಾರೆ. ಚಿತ್ರದ 3 ಹಾಡುಗಳಿಗೆ ಹರಿಕಾವ್ಯ ಸಂಗೀತ ಸಂಯೋಜಿಸಿದ್ದಾರೆ. 4 ಸಾಹಸ ದೃಶ್ಯಗಳನ್ನು ಕೌರವ ವೆಂಕಟೇಶ್ ಕಂಪೋಜ್ ಮಾಡಿದ್ದಾರೆ. ಮುಂಜಾನೆ ಮಂಜು ಅವರ ಛಾಯಾಗ್ರಹಣ, ಕೇತಹಳ್ಳಿ ರಾಜು ಅವರ ಸಹ ನಿರ್ದೇಶನ ಈ ಚಿತ್ರಕ್ಕಿದೆ. ಸುಚೇಂದ್ರಪ್ರಸಾದ್, ಶಂಕರ್ ಅಶ್ವಥ್, ಸುಧಾ ಬೆಳವಾಡಿ, ಭವಾನಿ ಪ್ರಕಾಶ್, ಬಲರಾಜ್‌ವಾಡಿ, ಕಾವ್ಯ, ಎಲ್‌ಐಸಿ ರಮೇಶ, ಸಿದ್ದೇಗೌಡ, ಶಿವು ಬಾಲಾಜಿ, ಶಿವಾಜಿ ಮುಂತಾದವರ ತಾರಾಗಣ ಈ ಚಿತ್ರಕ್ಕಿದೆ.



ಟೆರರ್ ಚಿತ್ರದಲ್ಲಿ ಶಿವನ ಹಾಡು



ಸಿಲ್ಕ್ ಮಂಜು ಅವರ ನಿರ್ಮಾಣದ, ರಂಜನ್ ಶಿವರಾಮ್‌ಗೌಡ ಅವರ ನಿರ್ದೇಶನದ, ಆದಿತ್ಯ ನಾಯಕರಾಗಿ ನಟಿಸಿರುವ ಟೆರರ್ ಚಿತ್ರದ ಹರ ಹರ ಮಹದೇವ ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ. ಶಿವನ ಕುರಿತಾದ ಸಾಹಿತ್ಯ ಒಳಗೊಂಡ ಈ ಗೀತೆಯನ್ನು ಡಾ.ವಿ.ನಾಗೇಂದ್ರಪ್ರಸಾದ್ ಅವರು ಬರೆದಿದ್ದು, ಹರ್ಷವರ್ಧನ್‌ರಾಜ್ ಸಂಗೀತ ನೀಡಿದ್ದಾರೆ. ನಿರ್ಮಾಪಕ ಸಿಲ್ಕ್ ಮಂಜು ಅವರ ಸ್ನೇಹಿತರು ಹಾಗೂ ಸಹ ನಿರ್ಮಾಪಕರೂ ಆದ ರವಿ ವಸಿಷ್ಠ ಅವರು ಈ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.


ಮೊದಲು ಮಾತನಾಡಿದ ನಟ ಆದಿತ್ಯ, ನಮ್ಮ ನಿರ್ಮಾಪಕರು ಆರೋಗ್ಯದ ತೊಂದರೆಯಿಂದ ಇಂದಿನ ಸಮಾರಂಭಕ್ಕೆ ಬಂದಿಲ್ಲ. ಹಾಗಾಗಿ ನಾನು ಅವರಿಗೆ ನೀವಿಲ್ಲದೆ ಸಮಾರಂಭ ಮಾಡುವುದು ಬೇಡ ಅಂತ ಹೇಳಿದೆ. ಅವರು ಒಪ್ಪಲಿಲ್ಲ. ನನ್ನ ಹುಟ್ಟುಹಬ್ಬದ ಸಂದರ್ಭದಲ್ಲಿ ಶಿವನ ಕುರಿತಾದ ಹರಹರ ಮಹದೇವ ಎಂಬ ಹಾಡನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಈ ಹಾಡು ತುಂಬಾ ಸೊಗಸಾಗಿ ಮೂಡಿಬಂದಿದೆ. ನಿರ್ದೇಶಕ ರಂಜನ್ ಉತ್ತಮ ಕಥೆಯನ್ನು ಮಾಡಿಕೊಂಡಿದ್ದಾರೆ. ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್ ಹೀಗೆ ಹಿರಿಯ ಹಾಗೂ ಅನುಭವಿ ಕಲಾವಿದರ ತಾರಾಬಳಗವೇ ಈ ಚಿತ್ರದಲ್ಲಿದ್ದು ಸದ್ಯದಲ್ಲೇ ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತೇವೆ ಎಂದರು.

ನಿರ್ದೇಶಕ ರಂಜನ್ ಶಿವರಾಮ್‌ಗೌಡ ಮಾತನಾಡುತ್ತಾ, ಈಗಾಗಲೇ ಬಿಡುಗಡೆಯಾಗಿರುವ ನಮ್ಮ ಚಿತ್ರದ ರಾವಣ ಹಾಡು ಕೇಳುಗರ ಮನ ಗೆದ್ದಿದೆ. ಇಂದು ಹರ ಹರ ಮಹದೇವ ಹಾಡು ಬಿಡುಗಡೆಯಾಗಿದೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಸದ್ಯ ಚಿತ್ರಕ್ಕೆ ಹಿನ್ನೆಲೆ ಸಂಗೀತ ಅಳವಡಿಸಲಾಗುತ್ತಿದ್ದು, ಈ ಮಾಸಾಂತ್ಯಕ್ಕೆ ಅಥವಾ ಮುಂದಿನ ತಿಂಗಳ ಮೊದಲ ವಾರದಲ್ಲಿ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದರು. ಚಿತ್ರದ ಕಥೆ ಇಷ್ಟವಾಯಿತು. ಮುಖ್ಯವಾಗಿ ಗೆಳೆಯ ಆದಿತ್ಯನ ಜೊತೆ ನಟಿಸಿದ್ದು ಖುಷಿಯಾಗಿದೆ ಎಂದು ನಟ ಶ್ರೀನಗರ ಕಿಟ್ಟಿ ಹೇಳಿದರು.

ಸಿನಿಪದಬಂಧ-575



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.	ಅಂಬರೀಷ್ – ಸುಮನ್ ರಂಗನಾಥ್ ಅಭಿನಯಕ್ಕೆ ಪೇರಾಲ ನಿರ್ದೇಶಕ	6
6.	ಹೊಸಬೆಳಕು ಚಿತ್ರದ ಹಾಡೊಂದರ ಆರಂಭದಲ್ಲೇ ಶಿವಣ್ಣನ ಚಿತ್ರ ಪ್ರತ್ಯಕ್ಷ !	9
7.	_ _ ಕೋಕಿಲ	2
8.	ತಬರನ ಕಥೆಯ ಹೀರೋ	5
13.	ಸೂರ್ಯವರ್ಧನ್ ಅಭಿನಯದ ಶ್ರೀಗಂಧ	5
15.	ವಿಷ್ಣುವರ್ಧನ್ – ರೂಪಿಣಿ ಅಭಿನಯದ ಚಿತ್ರ	2
16.	ಲೋಕೇಶ್ ಅಭಿನಯದಲ್ಲಿ ಧರೆಗಿಳಿದ ದೈವ	9
18.	" _ _ _ _ _ _ ಮಂಜುನಾಥನೊಬ್ಬನೇ.... ",	6

ಮೇಲಿನಿಂದ ಕೆಳಕ್ಕೆ

1.	ಆನಂದ ಸಾಗರದಂತ ಕುಟುಂಬ	5
2.	ದಿನದೊಂದಿಗೆ ರಾತ್ರಿಯೂ ಬಂದಿದೆ	6
3.	ನಟ ಮಹಾದೇವಪ್ಪನಿಗೆ ಹೆಗಲೇರಿದ ಗ್ರಹ	2
4.	ನಟಿ ಶ್ವೇತಾಳ ಮತ್ತೊಂದು ಹೆಸರು	4
5.	ರಾಜ್ – ಮಾಧವಿ ಅಭಿನಯದಲ್ಲಿ ಕ್ಷೀರ – ಮಧು ಒಂದಾಗಿದೆ	4
9.	ಶ್ರೀನಗರ ಕಿಟ್ಟಿ ಅಭಿನಯಕ್ಕೆ ಜಾಕೋಬ್ ವರ್ಗಿಸ್ ನಿರ್ದೇಶನವಿದೆ	3
10.	" _ _ _ _ _ _ ಸಾವಿರ ವಂದನೆ ಸಾಧನೆ ತೋರಿದ ಜಾಣೆಗೆ..... ",	6
11.	ಟೈಗರ್ ಪ್ರಭಾಕರ್ ಅಭಿನಯದ ನೆಲ	4
12.	ಬುದ್ದಿಗೇಡಿ ದ್ವಾರಕೀಶ್ ಜಯಿಸಿದ್ದಾನೆ	4
14.	ಗೋಲ್ಡನ್ ಸ್ಟಾರ್ ಗಣೇಶನ ವಿವಾಹ ಗೃಹ	5
17.	ದುನಿಯಾ ವಿಜಯ್ ಸಮರ್ಥನಿದ್ದಾನೆ	2

ಹೆಸರು ________________
ವಿಳಾಸ ________________
____
ದೂರವಾಣಿ ಸಂಖ್ಯೆ ________________

ಸಿನಿ ಪದಬಂಧ 574ರ ಉತ್ತರ

ಹೃ	ದ	ಯ	ಹೃ	ದ	ಯ					
ದ			ದ			ಪ್ರೇ		ಈ		ಅ
ಯ		ಮಾ	ಯ	ದಂ	ಥ	ಮ	ಳೆ	ಬಂ	ತ	ಣ್ಣ
ಗೀ	ತಾ		ಸಂ					ಧ		ತಂ
ತೆ		ಬೀ	ಗ	ರ	ಪಂ	ದ್ಯ		ನ		ಗಿ
			ಮ		ಚ		ಹೃ			
ಮೂ		ದಿ		ಪ್ರೇ	ಮ	ಸ	ದ	ನ		ಸಾ
ರು		ಗ್ಗ					ಯ		ಮಂ	ಕು
ಜ	ನ್ಮ	ಜ	ನ್ಮ	ದ	ಅ	ನು	ಬಂ	ಧ		ಮ
ನ್ಮ		ರು		ತ್ತ			ಧ			ಗ
					ಮ	ಣ್ಣಿ	ನ	ಮ	ಗ	ಳು

ವಿಜೇತರು: ಭಾವನಾ, ಪ್ರಥಮ ಬಿಎಸ್ಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂತೆಮಾಳ, ಟಿ.ನರಸೀಪುರ, ಮೈಸೂರು ಜಿಲ್ಲೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮರ್ಡರ್ ಮಿಸ್ಟ್ರಿ ಸಿಂಧೂರಿ ಚಿತ್ರಕ್ಕೆ ಚಾಲನೆ



ಬಹಳ ದಿನಗಳ ನಂತರ ನಟಿ ರಾಗಿಣಿ ದ್ವಿವೇದಿ ನಟನೆಯ ಚಿತ್ರವೊಂದು ಬಸವ ಜಯಂತಿಯ ಶುಭದಿನದಂದು ಸೆಟ್ಟೇರಿದೆ, ಶಂಕರ್ ಕೋನಮಾನಹಳ್ಳಿ ಅವರ ನಿರ್ದೇಶನದ ಈ ಚಿತ್ರದಲ್ಲಿ ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸುತ್ತಿದ್ದಾರೆ. ಎಸ್. ರಮೇಶ್ ಈ ಚಿತ್ರದ ನಿರ್ಮಾಪಕರು.

ಮುಹೂರ್ತದ ನಂತರ ಮಾತನಾಡಿದ ನಿರ್ದೇಶಕರು, ಶೀರ್ಷಿಕೆ ಕೇಳಿದ ಕೆಲವರು ಇದು ರೋಹಿಣಿ ಸಿಂಧೂರಿ ಮತ್ತು ಡಿ.ಕೆ.ರವಿ ಅವರ ಕಥೆಯಾ? ಎಂದು ಕೇಳಿದ್ದಾರೆ. ಅವರಿಗೂ ಈ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ. ಇದೊಂದು ಮರ್ಡರ್‌ಮಿಸ್ಟ್ರಿ ಸುತ್ತ ನಡೆಯುವ ಥ್ರಿಲ್ಲರ್ ಚಿತ್ರ ಇಲ್ಲಿ ರಾಗಿಣಿ ಮತ್ತು ಧರ್ಮ ಕೀರ್ತಿರಾಜ್ ಜೋಡಿಯಾಗಿ ನಟಿಸುತ್ತಿಲ್ಲ. ರಾಗಿಣಿ ಅವರು ಕಥೆಗೆ ತಿರುವು ನೀಡುವ ಪ್ರಮುಖ ಪಾತ್ರ ಮಾಡುತ್ತಿದ್ದಾರೆ. ಧರ್ಮ ಕೀರ್ತಿರಾಜ್ ಚಾಕೊಲೇಟ್ ಬಾಯ್ ಆಗಿಯೇ ಎಲ್ಲರಿಗೂ ಪರಿಚಿತ, ಆದರೆ ಈ ಚಿತ್ರದಲ್ಲಿ ಅವರದು ಆಕ್ಷನ್ ಹೀರೋ ಪಾತ್ರ ಎಂದರು.

ನಿರ್ಮಾಪಕ ಎಸ್.ರಮೇಶ್ ಮಾತನಾಡುತ್ತಾ, ಏಳೆಂಟು ವರ್ಷಗಳ ಹಿಂದೆ ವಿಕ್ಕಿ ಎಂಬ ಚಿತ್ರ ಮಾಡಿದ್ದೆ. ನಿರ್ದೇಶಕರು ಮೋಸ ಮಾಡಿ ಹೋದಾಗ ನಾನೇ ಚಿತ್ರಮುಗಿಸಿ ರಿಲೀಸ್ ಮಾಡಿದ್ದೆ. ಇನ್ಮುಂದೆ ಚಿತ್ರ ಮಾಡಲೇಬಾರದೆಂದು ನಿರ್ಧರಿಸಿದ್ದರೂ, ಶಂಕರ್ ಹೇಳಿದ ಈ ಕಥೆ ಇಷ್ಟವಾಗಿ ಮತ್ತೆ ನಿರ್ಮಾಣಕ್ಕೆ ಮುಂದಾದೆ ಎಂದರು.

ನಟಿ ರಾಗಿಣಿ ದ್ವಿವೇದಿ ಮಾತನಾಡುತ್ತಾ, ಮಹಿಳಾ ಪ್ರಧಾನ ಚಿತ್ರ ಮಾಡುವುದು ಸವಾಲಿನ ಕೆಲಸ. ಇಂತಹ ಚಿತ್ರಗಳಿಗೆ ಜನರನ್ನು ಕರೆತರುವುದು ಇನ್ನೂ ಸಂಕಷ್ಟದ ಕೆಲಸ. ಇವತ್ತಿನ ಟ್ರೆಂಡ್‌ಗೆ ಚಿತ್ರ ಮಾಡಬೇಕೆಂದರೆ ಮೊದಲು ನಾವು ಬದಲಾಗಬೇಕು. ಈ ಚಿತ್ರದ ಕಥೆ ಅಸಾಧಾರಣವಾಗಿದೆ ಅಂತಲ್ಲ, ವಿಭಿನ್ನವಾಗಿದೆ. ಹೆಸರಲ್ಲೇ ಕೆಂಪು ಬಣ್ಣವಿದೆ. ದುರ್ಗೆಯ ಶಕ್ತಿ, ಸರಸ್ವತಿಯ ಬುದ್ಧಿ, ಲಕ್ಷ್ಮಿಯ ಸಮೃದ್ಧಿ ಎಲ್ಲವೂ ಇದೆ. ಈ ಚಿತ್ರದಲ್ಲಿ ಪ್ರೇಕ್ಷಕರನ್ನು ಹಿಡಿದಿಡುವ ಎಲ್ಲಾ ಅಂಶಗಳೂ ಇದ್ದು, ಇದೊಂದು ಆ್ಯಕ್ಷನ್, ಕಮರ್ಷಿಯಲ್ ಚಿತ್ರವಾಗಲಿದೆ ಎಂದು ಹೇಳಿದರು.



ನಟ ಧರ್ಮ ಕೀರ್ತಿರಾಜ್ ಮಾತನಾಡುತ್ತಾ, ಶೀರ್ಷಿಕೆ ಕೇಳಿದರೆ ಇದೊಂದು ಮಹಿಳಾ ಪ್ರಧಾನ ಚಿತ್ರ ಅನಿಸುತ್ತದೆ. ಅದರ ಜತೆಗೆ ಮರ್ಡರ್ ಮಿಸ್ಟ್ರಿ ಕೂಡ ಇದೆ. ಈ ಚಿತ್ರದಲ್ಲಿ ನನ್ನ ಮತ್ತು ರಾಗಿಣಿ ಅವರ ಪಾತ್ರಗಳ ನಡುವೆ ಸಾಕಷ್ಟು ಹಗ್ಗಜಗ್ಗಾಟವಿದೆ. ಒಂದೊಳ್ಳೆ ತಂಡದ ಜೊತೆಗೆ ಕೆಲಸ ಮಾಡುತ್ತಿರುವ ಖುಷಿಯಿದೆ ಎಂದು ಹೇಳಿದರು. ಛಾಯಾಗ್ರಾಹಕ ರಾಕೇಶ್ ಸಿ ತಿಲಕ್, ಸಂಗೀತ ನಿರ್ದೇಶಕ ಹಿತನ್ ಹಾಸನ್ ಹಾಗೂ ಸಂಭಾಷಣೆಗಾರ ಹರೀಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಾವಿನಹಳ್ಳಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಮಾವಿನಹಳ್ಳಿ ಎಸ್.ಸಿದ್ದೇಗೌಡ ಅಧ್ಯಕ್ಷ, ಬಸಮ್ಮಣಿ ಉಪಾಧ್ಯಕ್ಷೆ

ಜಯಪುರ, ಮೇ 8– ಮಾವಿನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ, ಮಾಜಿ ಮೈಮುಲ್ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡ ಮತ್ತು ಉಪಾಧ್ಯಕ್ಷರಾಗಿ ಬಸಮ್ಮಣಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಡೇರಿ ಆವರಣದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಸಿದ್ದೇಗೌಡ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬಸಮ್ಮಣಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ವಿಮಲ್ ಕುಮಾರ್ ಘೋಷಿಸಿದರು.

ಡೇರಿಯ 12 ನಿರ್ದೇಶಕರ ಸ್ಥಾನಕ್ಕೆ ಜ.24 ರಂದು ಚುನಾವಣೆ ನಡೆದು ಮಾವಿನಹಳ್ಳಿ ಎಸ್.ಸಿದ್ದೇಗೌಡರ ಬಣದಿಂದ ಓರ್ವ ಅವಿರೋಧ ಆಯ್ಕೆ ಸೇರಿದಂತೆ ಉಳಿದ 11 ಮಂದಿಯೂ ಕಾಂಗ್ರೆಸ್ ಬೆಂಬಲಿರಾಗಿ ಆಯ್ಕೆಯಾಗಿದ್ದರು. ಈ ವೇಳೆ ಜೆಡಿಎಸ್ ಬೆಂಬಲಿತರಾಗಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಹೈಕೋರ್ಟ್‌ನಿಂದ ಫಲಿತಾಂಶಕ್ಕೆ ತಡೆಯಾಜ್ಞೆ ತಂದಿದ್ದರು. ಇದೀಗ ತಡೆಯಾಜ್ಞೆ ತೆರವುಗೊಳಿಸಿದ್ದರಿಂದ ಗುರುವಾರ ನಡೆದ ಚುನಾವಣೆಯಲ್ಲಿ ಡೇರಿ ಅಧ್ಯಕ್ಷರಾಗಿ ಸಿದ್ದೇಗೌಡ, ಉಪಾಧ್ಯಕ್ಷರಾಗಿ ಬಸಮ್ಮಣಿ ಆಯ್ಕೆಯಾದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು, ನಿರ್ದೇಶಕರು ಹಾಗೂ ಡೇರಿ ಸಿಬ್ಬಂದಿ ಅಭಿನಂದಿಸಿದರು. ಈ ವೇಳೆ ನಿರ್ದೇಶಕರಾದ ಸಿ.ಸಿದ್ದೇಗೌಡ, ಸಿ.ಸಿದ್ದೇಶ್, ಕೆ. ಕೆಂಪೇಗೌಡ, ಎಂ.ಸಿ ನಾಗರಾಜೇಗೌಡ, ಕೆಂಪೇಗೌಡ, ಸಣ್ಣತಾಯಮ್ಮ, ಸರೋಜಮ್ಮ, ಚಿಕ್ಕಣ್ಣೇಗೌಡ, ಚಾಮರಾಜು, ಇಂದ್ರಮ್ಮ ಮತ್ತು ಮಾವಿನಹಳ್ಳಿ ಗ್ರಾಮದ ಮುಖಂಡರು ಹಾಜರಿದ್ದರು.



ಮಾವಿನಹಳ್ಳಿ ಡೇರಿ ಅಧ್ಯಕ್ಷರಾಗಿ ಎಸ್.ಸಿದ್ದೇಗೌಡ, ಉಪಾಧ್ಯಕ್ಷೆಯಾಗಿ ಬಸಮ್ಮಣಿ ಆಯ್ಕೆಯಾದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ನೂತನ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡ, ಮಾವಿನಹಳ್ಳಿ ಹಾಲಿನ ಡೇರಿಗೆ ಕಳೆದ 20 ವರ್ಷಗಳಿಂದ ಅವಿರೋಧ ಆಯ್ಕೆ ನಡೆಯುತ್ತಿತ್ತು. ಸಹಕಾರ ಇಲಾಖೆಯಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚಾದ ಹಿನ್ನೆಲೆ, ಹಣದ ಮೂಲಕ ಚುನಾವಣೆ ನಡೆಯುತ್ತಿವೆ. ಗ್ರಾಮದ ಹಾಲು ಉತ್ಪಾದಕರು ನಮ್ಮ ಮೇಲೆ ವಿಶ್ವಾಸ ಇಟ್ಟು 12ಕ್ಕೆ 12ಸ್ಥಾನ ಗೆಲ್ಲಿಸಿದ್ದಾರೆ. ಅವರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಲಾಗುವುದು. ನಾನು ಮೈಮುಲ್ ಅಧ್ಯಕ್ಷನಾಗಿದ್ದ ವೇಳೆ ಮಾವಿನಹಳ್ಳಿ ಗ್ರಾಮಕ್ಕೆ ಬೃಹತ್ ಬಿಎಂಸಿ ಮತ್ತು ಎರಡಂತಸ್ತಿನ ಬೃಹತ್ ಕಟ್ಟಡ ನಿರ್ಮಿಸಿದ್ದೇನೆ. ರೈತರಿಗೆ ಒಕ್ಕೂಟದಿಂದ ದೊರೆಯುವ ಸೌಲಭ್ಯಗಳನ್ನು ತಲುಪಿಸುತ್ತೇನೆ ಎಂದರು.

ಕೆಲವೇ ತಿಂಗಳಲ್ಲಿ ಮೈಮುಲ್‌ಗೆ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ವರಿಷ್ಠರು ಒಪ್ಪಿದರೆ ಮೈಮುಲ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುತ್ತೇನೆ. 2023ರ ವಿಧಾನ ಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನನಗೆ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಲು ಬಿ.ಫಾರಂ ಕೊಟ್ಟರು. ಕ್ಷೇತ್ರದ ಮತದಾರರು 80 ಸಾವಿರ ಮತ ನೀಡಿದರು. ಆದರೆ ನನ್ನ ಏಳಿಗೆ ಸಹಿಸದ ಚಾಮುಂಡೇಶ್ವರಿ ಕ್ಷೇತ್ರದ ಕೆಲವು ಕಾಂಗ್ರೆಸ್ ಮುಖಂಡರೆ ಮಾಡಿದ ಅಪಪ್ರಚಾರದಿಂದ ನನಗೆ ಸೋಲಾಯಿತು. ಸೋಲಿನ ಬೇಸರದಿಂದ ಪಕ್ಷದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ. ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಹಾಗೂ ಕ್ಷೇತ್ರದ ಜನರ ವಿಶ್ವಾಸ ನನ್ನ ಮೇಲಿದೆ. ನಾನು ಕಾಂಗ್ರೆಸ್‌ನಲ್ಲಿ ಇರುತ್ತೇನೆ. ರಾಜಕೀಯ ನಿಂತ ನೀರಲ್ಲ. ಇವತ್ತು ನಾನು ಸೋತಿರಬಹುದು. ಮುಂದೊಂದು ದಿನ ನನಗೆ ರಾಜಕೀಯವಾಗಿ ಒಳ್ಳೆಯದಾಗುತ್ತೆ ಎಂದರು.

ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

ತಿ.ನರಸೀಪುರ, ಮೇ 8– ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಬೆಂಗಳೂರಿನ ತಮ್ಮ ನಿವಾಸ ಕಾವೇರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಮೈಸೂರು ಜಿಲ್ಲೆ(ಗ್ರಾಮಾಂತರ) ನೂತನ ಜಿಲ್ಲಾಧ್ಯಕ್ಷ ಎನ್.ಸೋಮಣ್ಣ ಹಾಗೂ ಇತರರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಹಿಂದುಳಿದ ವರ್ಗಗಳು ಶೈಕ್ಷಣಿಕ, ಸಾಮಾಜಿಕ, ರಾಜಕೀಯವಾಗಿ ಸಾಕಷ್ಟು ಹಿಂದುಳಿದಿವೆ. ಅಂತಹ ಎಲ್ಲಾ ಸಮಾಜಗಳನ್ನು ಒಗ್ಗೂಡಿಸಿ ಸರ್ವರಿಗೂ ಸಮಾನತೆ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳನ್ನು ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲಾ ವರ್ಗದವರಿಗೆ ತಲುಪಿಸಬೇಕು ಎಂದರು.

ರಾಜ್ಯದಲ್ಲಿ ಹಿಂದುಳಿದ ಕೆಲವು ಸಮಾಜಗಳು ಹರಿದು ಹಂಚಿ ಹೋಗಿವೆ. ಸಂಘಟನೆ ಕೊರತೆಯಿಂದ ಸರ್ಕಾರದ ಯಾವುದೇ ಯೋಜನೆಗಳನ್ನು ಪಡೆಯಲು ಅವರು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅವರೆಲ್ಲರನ್ನು ಒಗ್ಗೂಡಿಸುವ ಕಾರ್ಯವನ್ನು ಹಿಂದುಳಿದ ವರ್ಗಗಳ ವಿಭಾಗದ ಪದಾಧಿಕಾರಿಗಳು ನಿರ್ವಹಿಸಬೇಕು. ಆ ಮೂಲಕ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.


ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸನ್ಮಾನಿಸಲಾಯಿತು.

ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಮೈಸೂರು ಜಿಲ್ಲೆ(ಗ್ರಾಮಾಂತರ) ನೂತನ ಜಿಲ್ಲಾಧ್ಯಕ್ಷ ಎನ್.ಸೋಮಣ್ಣ ಮಾತನಾಡಿ, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಮಾರ್ಗದರ್ಶನದಲ್ಲಿ ಶ್ರಮಿಸಲಾಗುವುದು ಎಂದರು.

ಈ ವೇಳೆ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನ ಹುಂಡಿ ಮಹದೇವಣ್ಣ, ತಿ.ನರಸೀಪುರ ಪುರಸಭೆ ಸದಸ್ಯರಾದ ಸೈಯದ್, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಡಿ.ಪ್ರಸನ್ನ ಕುಮಾರ್, ವರುಣ ವಿಧಾನಸಭಾ ಕ್ಷೇತ್ರದ ಯುವ ಮುಖಂಡ ನಟೇಶ್ ಇತರರಿದ್ದರು.

ಕೊತ್ತೇಗಾಲದ ಅಭಿವೃದ್ಧಿಗೆ ಶ್ರಮಿಸುತ್ತೇನೆ: ಶಾಸಕ ಅನಿಲ್

ಸರಗೂರು, ಮೇ 8– ಕೊತ್ತೇಗಾಲ ಗ್ರಾಮದ ಅಭಿವೃದ್ಧಿಗಾಗಿ ಈಗಾಗಲೇ 2.50 ಕೋಟಿ ರೂ. ಅನುದಾನ ನೀಡಲಾಗಿದೆ ಎಂದು ಶಾಸಕ ಅನಿಲ್ ತಿಳಿಸಿದರು.


ತಾಲೂಕಿನ ಕೊತ್ತೇಗಾಲ ಗ್ರಾಮದಲ್ಲಿ ನಡೆದ ಶ್ರೀಮಾರಮ್ಮ ಹಾಗೂ ಗುಜ್ಜಮ್ಮ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದ ಅವರು, ಗ್ರಾಮದ ಅಭಿವೃದ್ಧಿಗೆ ಅನುದಾನ ನೀಡಲಾಗಿದ್ದು, ರಸ್ತೆ, ಚರಂಡಿ, ಶಾಲಾಭಿವೃದ್ಧಿ, ದೇವಸ್ಥಾನ ಹಾಗೂ ಸಮುದಾಯ ಭವನಗಳಿಗೂ ಅನುದಾನ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಮಾತನಾಡಿ ತಾಲೂಕಿನ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ವಿಶೇಷ ಅನುದಾನ ತರಲು ಶ್ರಮಿಸುತ್ತಿದ್ದೇನೆ. ಎರಡೂ ತಾಲೂಕನ್ನು ಮಾದರಿ ಮಾಡುವ ಗುರಿ ಹೊಂದಿದ್ದೇನೆ. ನಾನು ಎಂದಿಗೂ ರಾಜಕಾರಣ ಮಾಡಿಲ್ಲ. ಮಾಡುವುದಕ್ಕೆ ಬರುವುದಿಲ್ಲ. ಜನಸೇವೆಗಾಗಿ ಬಂದಿದ್ದೇನೆ. ನನ್ನನ್ನು ಶಾಸಕರಾಗಿ 2ನೇ ಬಾರಿ ಆಯ್ಕೆ ಮಾಡಿದ್ದೀರಿ. ಮತ್ತಷ್ಟು ಜನ ಸೇವೆ ಮಾಡಲು ಮುಂದಾಗುತ್ತೇನೆ ಎಂದರು.


ಜಾತ್ರಾ ಮಹೋತ್ಸವದಲ್ಲಿ ಶಾಸಕ ಅನಿಲ್ ಮಾತನಾಡಿದರು.

ಇದಕ್ಕೂ ಮುನ್ನ ಶ್ರೀಮಾರಮ್ಮನವರ ದೇವಾಲಯಕ್ಕೆ ತೆರಳಿ ತಾಯಿ ದರ್ಶನ ಪಡೆದು ಮಾತನಾಡಿದ ಶಾಸಕರು ಕೊತ್ತೇಗಾಲ ಗ್ರಾಮ ದೇವರನಾಡು ಎಂಬಂತೆ ಭಾಸವಾಗುತ್ತಿದೆ. ಹೆಚ್ಚು ದೇವಸ್ಥಾನಗಳನ್ನು ಒಳಗೊಂಡಿದ್ದು ನನಗೆ ಸಂತಸ ತಂದಿದೆ ಎಂದರು. ಇದೇ ವೇಳೆ ಶಾಸಕರನ್ನು ಗ್ರಾಮಸ್ಥರು ಅಭಿನಂದಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಪಿ.ರವಿ, ಎಸ್.ಎಸ್.ಪ್ರಭುಸ್ವಾಮಿ, ಬಸವರಾಜು, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಮುಖಂಡರಾದ ಶಂಭುಲಿಂಗ ನಾಯಕ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ, ತಾಲೂಕು ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಪರಶಿವಮೂರ್ತಿ, ಎಂ.ಕೆಂಡಗಣ್ಣಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಮಂಜುನಾಥ್, ಗುರುಸ್ವಾಮಿ, ಚಿಕ್ಕಣ್ಣ, ಗುಣಪಾಲ್, ಉಮೇಶ್, ಡೈರಿ ಅಧ್ಯಕ್ಷ ರತ್ನಯ್ಯ, ಉಪಾಧ್ಯಕ್ಷೆ ಗಂಗಮ್ಮ ಹಾಗೂ ನಿರ್ದೇಶಕರು, ಕೊತ್ತೇಗಾಲ ಗ್ರಾಮದ ಯಜಮಾನರು, ಗುಡಿಗೌಡರು, ನಾಡಗೌಡರು, ಗ್ರಾಪಂ ಅಧ್ಯಕ್ಷರು, ಸರ್ವ ಸದಸ್ಯರು ಹಾಜರಿದ್ದರು.

ಹಳ್ಳಕ್ಕೆ ಬಿದ್ದ ಆನೆ ರಕ್ಷಣೆ



ನಂಜನಗೂಡು, ಮೇ 8– ತಾಲೂಕಿನ ಓಂಕಾರ್ ಅರಣ್ಯ ಪ್ರದೇಶ ವ್ಯಾಪ್ತಿಯ ಹಂಚೀಪುರ ಗ್ರಾಮದ ಗೋವಿಂದಶೆಟ್ಟಿ ಮಾಳದ ಬಳಿ ಗುರುವಾರ ಹಳ್ಳಕ್ಕೆ ಬಿದ್ದಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿ ಕಾಡಿಗೆ ಅಟ್ಟಿದ್ದಾರೆ.

ಗ್ರಾಮದ ಮಹದೇವಪ್ಪ ಎಂಬುವರಿಗೆ ಸೇರಿದ ಜಮೀನಿನ ಹಳ್ಳಕ್ಕೆ 45 ವರ್ಷದ ಗಂಡಾನೆ ಬಿದ್ದಿದ್ದು ಮೇಲೆ ಬರಲಾಗದೆ ಘೀಳಿಡುತ್ತಿತ್ತು. ಇದನ್ನು ಕಂಡ ರೈತರು ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಜೆಸಿಬಿ ಮೂಲಕ ಹಳ್ಳ ತೆಗೆದು ಆನೆಯನ್ನು ಮೇಲಕ್ಕೇತ್ತಿದರು. ಬಳಿಕ ಆನೆಯನ್ನು ಸುರಕ್ಷಿತವಾಗಿ ಕಾಡಿಗೆ ಅಟ್ಟಲಾಗಿದೆ ಎಂದು ಆರ್‌ಎಫ್‌ಓ ಸತೀಶ್, ಡಿಆರ್‌ಎಫ್‌ಓ ಅಮರ್ ತಿಳಿಸಿದ್ದಾರೆ.

ಹಳೇಬೀಡು ಗ್ರಾಪಂನಲ್ಲಿ ವಿಶೇಷ ಗ್ರಾಮ ಸಭೆ

ಹುಣಸೂರು, ಮೇ 8– ಜಲಜೀವನ್ ಮಿಷನ್ ಯೋಜನೆ ನಿರ್ವಹಣೆ ಗ್ರಾಪಂ ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಜವಾಬ್ದಾರಿ ಎಂದು ಕಾರ್ಯಪಾಲಕ ಇಂಜಿನಿಯರ್ ರಂಜಿತ್ ಕುಮಾರ್ ತಿಳಿಸಿದರು.

ಜಿಪಂ ಮೈಸೂರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಭಗೀರಥ ಸಂಸ್ಥೆ ಸಹಯೋಗದೊಂದಿಗೆ ತಾಲೂಕಿನ ಹಳೇಬೀಡು ಗ್ರಾಪಂನಲ್ಲಿ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ಕಾರ್ಯಾಚರಣೆ ಮತ್ತು ನಿರ್ವಹಣಾ ನೀತಿ ಅನುಷ್ಠಾನಗೊಳಿಸುವ ಕುರಿತು ನಡೆದ ವಿಶೇಷ ಗ್ರಾಮ ಸಭೆಯಲ್ಲಿ ಅವರು ಮಾತನಾಡಿದರು.

ನೀರು ಜೀವ ಜಲ. ಇದನ್ನು ಉಳಿಸಿ ಮುಂದಿನ ಪೀಳಿಗೆಗೆ ದೊರಕಿಸಿ ಕೊಡಬೇಕಾದ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನಗೊಳಿಸಿದೆ. ಶುದ್ಧ ಹಾಗೂ ಸುರಕ್ಷಿತ ನೀರನ್ನು ಪ್ರತಿಯೊಬ್ಬ ವ್ಯಕ್ತಿಗೆ 55 ಲೀಟರ್ ಮಾನದಂಡದಲ್ಲಿ ನೀಡುವುದು ಈ ಯೋಜನೆ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ ಪ್ರತಿ ಗ್ರಾಮಗಳಲ್ಲೂ ಈ ಯೋಜನೆಯಡಿ ಹೊಸದಾಗಿ ನಳ ಸಂಪರ್ಕ ವ್ಯವಸ್ಥೆ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಇದರ ನಿರ್ವಹಣೆಯನ್ನು ಗ್ರಾಪಂನ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಹಾಗೂ ಗ್ರಾಪಂ ವಹಿಸಿಕೊಳ್ಳುವುದರ ಜೊತೆಗೆ ಜನರಿಗೆ ಶುದ್ಧ ಹಾಗೂ ಸುರಕ್ಷಿತವಾದ ನೀರನ್ನು ಪೂರೈಕೆ ಮಾಡಬೇಕು ಎಂದರು.


ಹಳೇಬೀಡು ಗ್ರಾಪಂನಲ್ಲಿ ವಿಶೇಷ ಗ್ರಾಮಸಭೆ ನಡೆಯಿತು.

ವಿಶೇಷ ಗ್ರಾಮ ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರ ರಾಜೇಂದ್ರ, ಇಂಜಿನಿಯರ್ ಶಂಭುಲಿಂಗ, ಪಿಡಿಓ ರಾಮಣ್ಣ, ಗ್ರಾಪಂ ಅಧ್ಯಕ್ಷೆ ಶ್ರುತಿ, ಉಪಾಧ್ಯಕ್ಷ ಮಲ್ಲೇಶ್, ಜಲ ಜೀವನ ಮಿಷನ್ ಜಿಲ್ಲಾ ಯೋಜನಾ ವ್ಯವಸ್ಥಾಪಕ ಚೇತನ್ ಕುಮಾರ್, ನಿರಂಜನ್ ಕುಮಾರ್, ನಾಗೇಶ್, ಭಗೀರಥ ಸಂಸ್ಥೆ ತಾಲೂಕು ಸಂಯೋಜಕ ಆನಂದ, ನಾಗೇಶ್ ಹಾಜರಿದ್ದರು.

ಶ್ರೀದೇಶೇಶ್ವರಸ್ವಾಮಿ, ಶ್ರೀಪಾರ್ವತಿ ಅಮ್ಮನವರ ಬ್ರಹ್ಮ ರಥೋತ್ಸವ

ಮೂಗೂರು, ಮೇ 8– ಗ್ರಾಮದ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವ ಅಂಗವಾಗಿ ನಡೆದ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಮದ್ದಿವ್ಯ ಬ್ರಹ್ಮ ರಥೋತ್ಸವ ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ದೇಗುಲದಲ್ಲಿ ರುದ್ರಾಭಿಷೇಕ ಹಾಗೂ ವಿಶೇಷ ಪೂಜೆ ನಡೆದವು. ಬಗೆ ಬಗೆಯ ಹೂ, ತಳಿರು ತೋರಣಗಳಿಂದ ಸಿಂಗಾರಗೊಂಡ ರಥದಲ್ಲಿ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಉತ್ಸವ ಮೂರ್ತಿಯನ್ನು ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿದ ಬಳಿಕ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಪ್ರಮುಖ ರಸ್ತೆಗಳಲ್ಲಿ ರಥ ಸಂಚರಿಸಿತು. ದಾರಿಯುದ್ದಕ್ಕೂ ಭಕ್ತರು ಪೂಜೆ ಸಲ್ಲಿಸಿ, ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಭಕ್ತರು ಸಿಹಿ ಹಂಚಿದರು. ಈ ವೇಳೆ ಗ್ರಾಮದ ಮುಖಂಡರು, ಗ್ರಾಮಸ್ಥರು, ಅರ್ಚಕ ಸಮೂಹ ಹಾಜರಿದ್ದರು.

ಗಿರಿಜಾ ಕಲ್ಯಾಣ: ಬ್ರಹ್ಮ ರಥೋತ್ಸವ ಅಂಗವಾಗಿ ದೇವಾಲಯದ ಆವರಣದಲ್ಲಿ ಬುಧವಾರ ರಾತ್ರಿ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಶ್ರದ್ಧಾಭಕ್ತಿಯಿಂದ ಅದ್ಧೂರಿಯಾಗಿ ನೆರವೇರಿತು. ಗ್ರಾಮದ ಮುತ್ತೈದೆಯರು ಸಾಂಪ್ರದಾಯಿಕವಾಗಿ ಪಾರ್ವತಿ ದೇವಿಗೆ ಪೂಜೆ ಸಲ್ಲಿಸಿ ಅಮ್ಮನವರ ಉತ್ಸವ ಮೂರ್ತಿಯನ್ನು ಕಲ್ಯಾಣ ಪೀಠಕ್ಕೆ ಕರೆ ತಂದರು. ನಂತರ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಮಾಂಗಲ್ಯ ಧಾರಣೆ ಮಾಡುವ ಮೂಲಕ ನೆರೆದಿದ್ದ ಭಕ್ತರು ಗಿರಿಜಾ ಕಲ್ಯಾಣೋತ್ಸವವನ್ನು ಕಣ್ತುಂಬಿಕೊಂಡರು. ಬಳಿಕ ಲೋಕ ಕಲ್ಯಾಣಕ್ಕಾಗಿ ಯಾಗ ಶಾಲೆಯಲ್ಲಿ ಗಣಪತಿ ಹೋಮ ಮಾಡಲಾಯಿತು.



ತಿ.ನರಸೀಪುರ ಸರ್ಕಾರಿ ಕಾಲೇಜಲ್ಲಿ ಉದ್ಯೋಗ ಮೇಳ

ತಿ.ನರಸೀಪುರ, ಮೇ 8– ವಿದ್ಯಾರ್ಥಿಗಳಿಗೆ ಪದವಿ ಕೊಡುವುದಷ್ಟೆ ಅಲ್ಲದೇ ಪದವಿ ಜೊತೆಗೆ ಉದ್ಯೋಗ ಕೊಡಿಸಬೇಕೆಂಬ ಉದ್ದೇಶದೊಂದಿಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ವಿ.ಉದಯ ಕುಮಾರ್ ತಿಳಿಸಿದರು.

ಪಟ್ಟಣದ ಹಳೇ ಸಂತೇಮಾಳ ಬಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾಲೇಜಿನ ಐಕ್ಯೂಎಸಿ ಹಾಗೂ ಯುಜಿ ಮತ್ತು ಪಿಜಿ ಉದ್ಯೋಗ ಘಟಕದಿಂದ ಆಯೋಜಿಸಲಾಗಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಜಾಗತಿಕ ಮಾರುಕಟ್ಟೆಯಲ್ಲಿ ಉದ್ಯಮದ ಅಗತ್ಯಕ್ಕೆ ಅನುಗುಣವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳನ್ನು ರೂಪಿಸುವುದು ತುಂಬಾ ಮುಖ್ಯ. ಉದ್ಯೋಗ ಮೇಳಗಳು ಉದ್ಯೋಗಾಕಾಂಕ್ಷಿಗಳಿಗೆ ಅವಕಾಶಗಳನ್ನು ಒದಗಿಸಿಕೊಡುತ್ತದೆ. ಉತ್ತಮ ಅವಕಾಶ ಬಳಸಿಕೊಳ್ಳುವ ಚಾಕಚಕ್ಯತೆ ವಿದ್ಯಾರ್ಥಿಗಳಲ್ಲಿರಬೇಕು. ಕಾಲೇಜಿನ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುವುದರಿಂದ ಅವರು ಸಮಾಜದಲ್ಲಿ ಉತ್ತಮ ವಾಹಿನಿಗೆ ಬರಲು ಸಾಧ್ಯವಾಗುತ್ತದೆ. ಪೋಷಕರಿಗೆ ಮಕ್ಕಳು ಉದ್ಯೋಗ ಪಡೆಯಬೇಕೆಂಬ ಬಹುದೊಡ್ಡ ಕನಸಿರುತ್ತದೆ. ಅವರ ಕನಸು ನನಸು ಮಾಡಲು ಇಂತಹ ಉದ್ಯೋಗ ಮೇಳಗಳು ಬಹು ಅಗತ್ಯವಾಗಿ ನಡೆಯಬೇಕಿದೆ ಎಂದರು.


ಉದ್ಯೋಗ ಮೇಳಕ್ಕೆ ಪ್ರಾಂಶುಪಾಲ ಡಾ.ಹೆಚ್.ವಿ.ಉದಯಕುಮಾರ್ ಚಾಲನೆ ನೀಡಿದರು.

ಉದ್ಯೋಗ ಮೇಳಕ್ಕೆ 8 ಕಂಪನಿಗಳನ್ನು ಆಹ್ವಾನಿಸಲಾಗಿದ್ದು, ಅದರಂತೆ ಕಂಪನಿಗಳು ವಿದ್ಯಾರ್ಥಿಗಳ ವಿವರ ಪಡೆದು ಸಂದರ್ಶನದಲ್ಲಿ ತೊಡಗಿವೆ. ತಾಲೂಕಿನ ಎಲ್ಲಾ ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲು 15 ಕಾಲೇಜುಗಳಲ್ಲಿ ಕರ ಪತ್ರ, ಪೋಸ್ಟರ್ ಮೂಲಕ ಮೇಳದ ಬಗ್ಗೆ ಅರಿವು ಮೂಡಿಸಲಾಗಿದೆ. ಹೀಗಾಗಿ ನೂರಾರು ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದಾರೆ. ಕಂಪನಿ ಗಳು ವಿದ್ಯಾರ್ಥಿಗಳ ವಿದ್ಯಾರ್ಹತೆ ಮಟ್ಟ ಪರಿಗಣಿಸಿ ಸಂದರ್ಶನದ ನಡೆಸಿ ಉದ್ಯೋಗ ನೀಡುವ ಪ್ರಯತ್ನ ಮಾಡಲಿವೆ ಎಂದರು.

ಉದ್ಯೋಗ ಮೇಳಕ್ಕೆ ಉತ್ತಮ ಪ್ರತಿ ಕ್ರಿಯೆ ದೊರೆತು ನೂರಾರು ವಿದ್ಯಾರ್ಥಿಗಳು ತಮ್ಮ ಹೆಸರು ವ್ಯಕ್ತಿಗತ ವಿವರ ದಾಖಲಿಸಿಕೊಂಡರು. ಈ ವೇಳೆ ಮುಖ್ಯ ಅತಿಥಿಗಳಾಗಿ ಎಸ್‌ಬಿಐ ಶಾಖಾ ವ್ಯವಸ್ಥಾಪಕ ರಂಗವಿಠಲ, ದಿವ್ಯ ಆಚಾರ್, ಕವಿತಾ, ಮಧು, ನಿವೇದ್‌ಗೌಡ, ನಂದೀಶ್ ಕುಮಾರ್, ಐಎಕ್ಯೂಸಿ ಸಂಚಾಲಕ ಡಾ.ಅಮಿತ್, ಉದ್ಯೋಗ ಘಟಕದ ಅಧಿಕಾರಿ ಪಿ.ಆರ್. ಸವಿತಾ, ಬಿ.ಎಂ.ರಾಮಮೂರ್ತಿ, ಅಧ್ಯಾಪಕರಾದ ಡಾ.ಆರ್.ಕೆಂಪರಾಜು, ಪಿ.ಆರ್. ಸವಿತಾ,ಮಹೇಶ್, ಡಾ.ಪುಟ್ಟಸ್ವಾಮಿ, ಎಸ್.ರಾಘವೇಂದ್ರ ಪ್ರಸಾದ್, ಅಧೀಕ್ಷಕ ಇಮ್ರಾನ್ ಪಾಷ ಹಾಜರಿದ್ದರು.

ಗ್ರಾಮ ಪರಿಮಿತಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕೆ.ಆರ್.ನಗರ, ಮೇ 8– ಕಳೆದ 15 ವರ್ಷಗಳಿಂದ ಅಭಿವೃದ್ಧಿ ಕಾಣದ ಗಂಧನಹಳ್ಳಿ ಸೇರಿದಂತೆ ಹಲವು ಗ್ರಾಮಗಳ ಅಭಿವೃದ್ಧಿಗೆ ವಿವಿಧ ಇಲಾಖೆಗಳಿಂದ ಸಾಕಷ್ಟು ಅನುದಾನ ಮಂಜೂರು ಮಾಡಿಸಲಾಗಿದ್ದು, ಮೇ 23 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಗಂಧನಹಳ್ಳಿಯಲ್ಲಿ 2.10 ಕೋಟಿ ರೂ. ವೆಚ್ಚದ ಗ್ರಾಮ ಪರಿಮಿತಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಅಂದು ಮುಖ್ಯಮಂತ್ರಿ ಸೇರಿದಂತೆ ವಿವಿಧ ಇಲಾಖೆ ಸಚಿವರು ಆಗಮಿಸಲಿದ್ದು, ಕೆ.ಆರ್.ನಗರದ ಪುರಸಭೆ ಬಯಲು ರಂಗ ಮಂದಿರದಲ್ಲಿ 400 ಕೋಟಿ ರೂ.ಗೂ ಅಧಿಕ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ ಎಂದು ತಿಳಿಸಿದರು.

ಅಭಿವೃದ್ಧಿಯಲ್ಲಿ ಹಿಂದುಳಿದ ಗ್ರಾಮಗಳನ್ನು ಗುರುತಿಸಲಾಗಿದ್ದು, ಪ್ರಮುಖವಾಗಿ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಒದಗಿಸಲು ಬೇಕಾಗುವ ಕಾಮಗಾರಿಗಳಿಗೆ ಅನುದಾನ ಮಂಜೂರು ಮಾಡಿಸಲಾಗಿದೆ. ಕ್ಷೇತ್ರಕ್ಕೆ 5 ಕರ್ನಾಟಕ ಪಬ್ಲಿಕ್ ಶಾಲೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಗಂಧನಹಳ್ಳಿ ಗ್ರಾಮದಲ್ಲೂ ಶಾಲೆ ಆರಂಭಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಗಂಧನಹಳ್ಳಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ಕ್ರಿಯಾಯೋಜನೆ ತಯಾರಿಸಲಾಗಿದ್ದು, ಹಂತ ಹಂತವಾಗಿ ಅನುದಾನ ತಂದು ಕಾಮಗಾರಿ ಮಾಡಲಾಗುತ್ತದೆ. ಅಲ್ಲಿವರೆಗೆ ಗ್ರಾಮದ ಜನತೆ ತಾಳ್ಮೆಯಿಂದ ಇದ್ದು ನನಗೆ ಸಹಕಾರ ನೀಡಬೇಕೆಂದರು.


ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

> “ ಚುಂಚನಕಟ್ಟೆಯ ಶ್ರೀರಾಮ ಸಕ್ಕರೆ ಕಾರ್ಖಾನೆ ಪುನರ್ ಆರಂಭವಾಗಲಿದ್ದು, ಈಗಾಗಲೇ ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್‌ನವರು ರೈತರಿಗೆ ಬಿತ್ತನೆ ಕಬ್ಬು ಮತ್ತು ರಸಗೊಬ್ಬರವನ್ನು ವಿತರಣೆ ಮಾಡುವುದಾಗಿ ಭರವಸೆ ನೀಡಿದ್ದು, ಕಾರ್ಖಾನೆ ಆರಂಭಕ್ಕೂ ಮುನ್ನ ಕಬ್ಬು ಬೆಳೆಗಾರರ ಸಭೆ ನಡೆಸಲಿದ್ದಾರೆ. ಕಾರ್ಖಾನೆ ಆರಂಭವಾಗುವುದರಿಂದ ರೈತರಿಗೆ ಮತ್ತು ವ್ಯಾಪಾರಸ್ಥರಿಗೆ ಅನುಕೂಲವಾಗಲಿದೆ. –ಡಿ.ರವಿಶಂಕರ್, ಶಾಸಕ.

ಕಪ್ಪಡಿ ಕ್ಷೇತ್ರದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಲು 25 ಕೋಟಿ ಮತ್ತು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಮೂಲಕ ತಾಲೂಕು ಆಸ್ಪತ್ರೆಯಾಗಿ ಪರಿವರ್ತನೆ ಮಾಡಿಸಲಾಗಿದ್ದು, ಆ ಭಾಗದ ಜನತೆಗೆ ಸಾಕಷ್ಟು ಅನುದಾನವಾಗಲಿದೆ ಎಂದರು.

ಇದೇ ವೇಳೆ ಬಾಲೂರು ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದ ಸಿ.ಸಿ.ರಸ್ತೆಗೆ ಚಾಲನೆ ನೀಡಿದರು. ಗಂಧನಹಳ್ಳಿ ಯುವ ಮುಖಂಡ ಜಿ.ಎಸ್. ವೆಂಕಟೇಶ್, ಗ್ರಾಪಂ ಅಧ್ಯಕ್ಷೆ ಮಹದೇವಿ, ಸದಸ್ಯರಾದ ಸುಲೋಚನಾ, ಲೋಕೇಶ್, ಸಣ್ಣದೊಡ್ಡೇ ಗೌಡ, ಮಂಗಳಮ್ಮ, ಸತೀಶ್, ಚಿಕ್ಕವಡ್ಡರಗುಡಿ ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಜಿ.ಆರ್.ಕೃಷ್ಣೇಗೌಡ, ತಾಪಂ ಮಾಜಿ ಸದಸ್ಯ ಜಿ.ಎಸ್.ಮಂಜುನಾಥ್, ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ಜಿ.ಎನ್. ರಘು, ಜಿ.ಆರ್.ದೇವೇಂದ್ರ, ಜಿ.ಎಂ. ಹೇಮಂತ್, ಜಿ.ಆರ್. ಮಹದೇವ್, ನಾಗೇಶ್, ಗಜೇಂದ್ರ, ಆದರ್ಶ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ಎನ್‌ಜೆಪಿಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಮೇ 13 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ ಮಂಡಿ ಪೊಲೀಸ್ ಸ್ಟೇಷನ್ ಹತ್ತಿರದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ 94487 53597, 99161 55453 ಸಂಪರ್ಕಿಸಬಹುದು.

ಯುವಕರಲ್ಲಿ ಸಾಹಿತ್ಯದ ಬಗ್ಗೆ ಸೃಜನಶೀಲತೆ ಬೆಳೆಸಲು ಕ್ರಮ

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ.ಎಸ್.ಚಂದ್ರಕಿರಣ್

ನಂಜನಗೂಡು, ಮೇ 8– ಯುವ ಸಮುದಾಯವನ್ನು ಸರಿದಾರಿಗೆ ತಂದು ಸಾಹಿತ್ಯದ ಬಗ್ಗೆ ಸೃಜನಶೀಲತೆ ಬೆಳೆಸಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಶ್ರಮಿಸುತ್ತಿದೆ ಎಂದು ಸದಸ್ಯ ಸಂಚಾಲಕ ಪ್ರೊ.ಎಸ್.ಚಂದ್ರಕಿರಣ್ ಕುಳವಾಡಿ ತಿಳಿಸಿದರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಕನ್ನಡ ವಿಭಾಗ, ಆಂತರಿಕ ಗುಣಮಟ್ಟ ಭರವಸೆ ಘಟಕ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಏರ್ಪಡಿಸಿದ್ದ ರನ್ನ– ರಾಘವಾಂಕರ ಕಾವ್ಯಾನುಸಂಧಾನ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಪ್ರತಿ ತಿಂಗಳು ಒಂದೊಂದು ಕಾರ್ಯಕ್ರಮವನ್ನು ಚಕೋರ ಸಾಹಿತ್ಯ ವೇದಿಕೆ ಮೂಲಕ ಹಮ್ಮಿಕೊಂಡು 5 ಸಾವಿರ ರೂ. ಅನುದಾನ ನೀಡಲಾಗುತ್ತಿದೆ ಎಂದರು.

ನಾವೆಲ್ಲ ಓದುವಾಗ ಕಾಲಿಗೆ ಚಪ್ಪಲಿ ಇರಲಿಲ್ಲ. ಹಾಕಲು ಸರಿಯಾದ ಬಟ್ಟೆ ಇರುತ್ತಿರಲಿಲ್ಲ. ಆದರೆ ಈಗಿನ ಯುವ ಸಮುದಾಯಕ್ಕೆ ಆ ಸಮಸ್ಯೆ ಇಲ್ಲ. ಅವರೆಲ್ಲಾ ಫೇಸ್‌ಬುಕ್, ವಾಟ್ಸಾಪ್ ಮೊದಲಾದ ಸಾಮಾಜಿಕ ಜಾಲತಾಣದಲ್ಲಿ ಮುಳುಗಿದ್ದಾರೆ. ಇದು ಧನಾತ್ಮಕವಾಗಿದ್ದರೆ ಪರವಾಗಿಲ್ಲ. ಆದರೆ ಸುಳ್ಳು ಭ್ರಮೆಗಳಾದರೆ ಕಷ್ಟ. ಆದ್ದರಿಂದಲೇ ಯುವ ಸಮುದಾಯವನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಈ ರೀತಿಯ ಸಾಹಿತ್ಯಿಕ ಕಾರ್ಯಕ್ರಮಗಳ ಮೂಲಕ ವಿವೇಕ ಮೂಡಿಸೋಣ. ಇದಕ್ಕಾಗಿ ಕಥೆ, ಕಾದಂಬರಿ, ಕಾವ್ಯ ಕುರಿತ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ ಎಂದರು.

ಚಕೋರ ವೇದಿಕೆ ಈ ಮೊದಲು ಇರಲಿಲ್ಲ. 2018ರಲ್ಲಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ಪ್ರೊ.ಅರವಿಂದ ಮಾಲಗತ್ತಿ ಆರಂಭಿಸಿದರು. ಈಗಿನ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಈ ಇಳಿ ವಯಸ್ಸಿನಲ್ಲಿಯೂ ಮಾನವಪರ, ಸಾಮರಸ್ಯ ಮೂಡಿಸುವ, ಯುವಕರಲ್ಲಿ ವಿವೇಕ ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.


ವಿಚಾರ ಸಂಕಿರಣವನ್ನು ಪ್ರೊ.ಎಸ್.ಚಂದ್ರಕಿರಣ್ ಉದ್ಘಾಟಿಸಿದರು.

ಬಸವಣ್ಣ, ಅಲ್ಲಮ ಪ್ರಭು, ಪಂಪ, ರನ್ನ, ರಾಘವಾಂಕ ಮೊದಲಾದವರ ಬಗ್ಗೆ ಯುವಕರಿಗೆ ತಿಳಿಸಬೇಕಾಗಿದೆ. ರನ್ನನ ಗದಾಯುದ್ಧ, ರಾಘವಾಂಕರ ಶೈವಪರ ವಿಚಾರಗಳನ್ನು ಅರಿಯಬೇಕಾಗಿದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಾಹಿತ್ಯ ಅಕಾಡೆಮಿ ಹಳೆಗನ್ನಡ ಸಾಹಿತ್ಯದ ಬಗ್ಗೆ ರಾಜ್ಯಾದ್ಯಂತ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು.

ಜೆಎಸ್‌ಎಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್.ಹೊನ್ನೇಗೌಡ ಮಾತನಾಡಿ, ವಿವೇಕ ಮತ್ತು ತಾಳ್ಮೆ ಇದ್ದಲ್ಲಿ ಮಾತ್ರ ಏನಾದರೂ ಸಾಧಿಸಬಹುದು. ಕೇವಲ ಪದವಿ ಸರ್ಟಿಫಿಕೇಟ್‌ಗಳಿಗೆ ಯಾವುದೇ ಬೆಲೆ ಇಲ್ಲ ಎಂಬುದನ್ನು ಅರಿಯಬೇಕು ಎಂದರು.

ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಎನ್.ಶಿವಕುಮಾರ್ ಮಾತನಾಡಿದರು. ರನ್ನನ ಕಾವ್ಯಗಳಲ್ಲಿ ಪಾತ್ರ ಚಿತ್ರಣ ಕುರಿತು ಮಹಾರಾಣಿ ಕಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ.ಎಸ್.ಸುಂದ್ರೇಶ್, ರಾಘವಾಂಕನ ಕಾವ್ಯಗಳಲ್ಲಿ ತಾತ್ವಿಕತೆ ಕುರಿತು ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಪಿ.ಬೆಟ್ಟೇಗೌಡ ವಿಷಯ ಮಂಡಿಸಿದರು. ಐಕ್ಯೂಎಸಿ ಸಂಚಾಲಕ ಡಾ.ಬಿ.ಕೆ. ಕೆಂಡಗಣ್ಣಸ್ವಾಮಿ, ಪ್ರೊ.ವರಪ್ರಸಾದ್, ಪ್ರೊ.ಬಸವರಾಜು ಮೊದಲಾದವರಿದ್ದರು.

ಕಾಲುಬಾಯಿ ರೋಗದ ಲಸಿಕಾ ಅಭಿಯಾನ

ಮೈಸೂರು ಜಿಲ್ಲೆಯಲ್ಲಿ 5,14,280 ಜಾನುವಾರುಗಳಿಗೆ ಲಸಿಕೆ

●ಜೊತೆಗೆ ಚರ್ಮಗಂಟು ರೋಗಕ್ಕೂ ಲಸಿಕೆ ●ಜಿಲ್ಲೆಯಾದ್ಯಂತ 439 ಲಸಿಕಾದಾರರು



ಮೈಸೂರು ಜಿಲ್ಲೆಯ ಮಾಧವಗೆರೆಯಲ್ಲಿ ಲಸಿಕೆದಾರರು ಹಸುವೊಂದಕ್ಕೆ ಕಾಲುಬಾಯಿ ರೋಗ ತಡೆಗಟ್ಟುವ ಲಸಿಕೆ ನೀಡುತ್ತಿರುವುದು. ಚಿತ್ರದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ನಾಗರಾಜು ಸೇರಿದಂತೆ ಮತ್ತಿತರರನ್ನು ಕಾಣಬಹುದು.

ಮೈಸೂರು,ಮೇ 8(ಪಿಎಂ)– ಕಾಲುಬಾಯಿ ರೋಗ ಜಾನುವಾರುಗಳನ್ನು ಕಾಡುವ ಕಾಯಿಲೆ. ಮಾರಣಾಂತಿಕವಲ್ಲವಾದರೂ ರಾಸುಗಳಲ್ಲಿ ಹಾಲಿನ ಇಳುವರಿ ಕಡಿಮೆಯಾಗುವ ಜೊತೆಗೆ ಗರ್ಭ ಧರಿಸುವ ಸಾಮರ್ಥ್ಯವೂ ಇಳಿಮುಖವಾಗುತ್ತದೆ. ಆ ಮೂಲಕ ರೈತರು, ಹೈನುಗಾರರು ನಷ್ಟಕ್ಕೆ ತುತ್ತಾಗಬೇಕಾಗುತ್ತದೆ.

ಹಾಗಾಗಿ ಈ ಕಾಯಿಲೆ ಬಾರದಂತೆ ತಡೆಗಟ್ಟಲು ಪ್ರತಿ 6 ತಿಂಗಳಿಗೊಮ್ಮೆ ರೋಗದ ವಿರುದ್ಧ ಲಸಿಕೆ ಹಾಕಿಸುವುದೊಂದೇ ಮಾರ್ಗ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ 7ನೇ ಸುತ್ತಿನ ಕಾಲುಬಾಯಿ ರೋಗದ ಲಸಿಕಾ ಅಭಿಯಾನ ನಡೆಯುತ್ತಿದ್ದು, ಅಂತೆಯೇ ಮೈಸೂರು ಜಿಲ್ಲೆಯಲ್ಲಿ 5 ಲಕ್ಷದ 14 ಸಾವಿರ 280 ಜಾನುವಾರುಗಳಿಗೆ (ದನ, ಎಮ್ಮೆ, ಎತ್ತು ಮತ್ತು ಕೋಣಗಳಿಗೆ ಲಸಿಕೆ ನೀಡುತ್ತಿದ್ದು, ಈ ಪೈಕಿ ದನ ಮತ್ತು ಎಮ್ಮೆಯೇ ಭಾಗಶಃ ಪ್ರಮಾಣದಲ್ಲಿವೆ) ಲಸಿಕೆ ನೀಡುವ ಪ್ರಕ್ರಿಯೆ ಭರದಿಂದ ಸಾಗಿದೆ.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮತ್ತು ಕರ್ನಾಟಕ ಹಾಲು ಮಹಾಮಂಡಳಿಯ ಸಹಯೋಗದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಈ 7ನೇ ಸುತ್ತಿನ ಲಸಿಕಾ ಅಭಿಯಾನವು ಏ.26ರಿಂದ ಆರಂಭವಾಗಿದ್ದು, ಜೂ.9ರವರೆಗೆ ನಡೆಯಲಿದೆ.

ಕಾಲುಬಾಯಿ ರೋಗದ ವಿರುದ್ಧ ಎಲ್ಲಾ ದನ, ಎಮ್ಮೆ ಮತ್ತು ಕರುಗಳಿಗೆ ಉಚಿತವಾಗಿ ಲಸಿಕೆ ಹಾಕುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ರೋಗವು ವೈರಾಣುವಿನಿಂದ ಬರುವ ಅಂಟು ಜಾಡ್ಯವಾಗಿದ್ದು, ಲಸಿಕೆ ಹಾಕುವುದೊಂದೇ ಈ ರೋಗ ನಿಯಂತ್ರಿಸಲು ಇರುವ ಏಕೈಕ ಮಾರ್ಗ. ಜಿಲ್ಲೆಯಾದ್ಯಂತ 439 ಲಸಿಕಾದಾರರು ಮನೆ ಮನೆಗೆ ಭೇಟಿ ನೀಡಿ ಜಾನುವಾರುಗಳಿಗೆ ಲಸಿಕೆ ನೀಡುತ್ತಿದ್ದಾರೆ. ಇದರಲ್ಲಿ ತಾಂತ್ರಿಕ ಸಿಬ್ಬಂದಿ ಹಾಗೂ ಡಿ ಗ್ರೂಪ್ ಸಿಬ್ಬಂದಿ ಸಹ ಸೇರಿದ್ದಾರೆ. ಲಸಿಕಾ ಪ್ರಕ್ರಿಯೆಯನ್ನು 99 ಪಶುವೈದ್ಯರು ಮೇಲ್ವಿಚಾರಣೆ ಮಾಡಲಿದ್ದಾರೆ. ಈ ಪಶುವೈದ್ಯರನ್ನು 9 ಮಂದಿ ಸಹಾಯಕ ನಿರ್ದೇಶಕರು ಮೇಲ್ವಿಚಾರಣೆ ಮಾಡಲಿದ್ದಾರೆ. ಬೆಳಗ್ಗೆ 6 ಗಂಟೆಯಿಂದ ಬೆಳಗ್ಗೆ 10 ಗಂಟೆಯವರೆಗೆ ಲಸಿಕೆ ನೀಡಲಾಗುತ್ತದೆ.

ಜಿಲ್ಲೆಯಲ್ಲಿರುವ ಒಟ್ಟು 5,14,280 ರಾಸುಗಳ ಪೈಕಿ ಮೈಸೂರು ತಾಲೂಕಿನಲ್ಲಿ 68,456 ರಾಸುಗಳಿವೆ. ಅಂತೆಯೇ ನಂಜನಗೂಡು ತಾಲೂಕಿನಲ್ಲಿ 74,579, ಕೆಆರ್ ನಗರದಲ್ಲಿ 29,672, ಹುಣಸೂರಿನಲ್ಲಿ 74,510, ಪಿರಿಯಾಪಟ್ಟಣದಲ್ಲಿ 86,160, ಟಿ.ನರಸೀಪುರದಲ್ಲಿ 46,340, ಹೆಚ್‌ಡಿ ಕೋಟೆಯಲ್ಲಿ 57,721, ಸರಗೂರಿನಲ್ಲಿ 31,689, ಸಾಲಿಗ್ರಾಮದಲ್ಲಿ 45,153 ಜಾನುವಾರುಗಳಿಗೆ ಲಸಿಕೆ ನೀಡಲಾಗುತ್ತಿದೆ.

ಕರುಗಳಿಗೂ ಲಸಿಕೆ: ವರ್ಷದಲ್ಲಿ ಕನಿಷ್ಠ 2 ಬಾರಿ ಲಸಿಕೆ ಹಾಕುವುದರಿಂದ ಜಾನುವಾರುಗಳಿಗೆ ಈ ರೋಗ ತಗಲುವುದನ್ನು ತಡೆಗಟ್ಟಬಹುದು. 3 ತಿಂಗಳ ಮೇಲ್ಪಟ್ಟ ಕರುಗಳಿಗೂ ಲಸಿಕೆ ಹಾಕಿಸಬೇಕಿದ್ದು, ನಂತರ 3ರಿಂದ 5 ವಾರಗಳೊಳಗೆ ಬೂಸ್ಟರ್ ಲಸಿಕೆ ಹಾಕಿಸಬೇಕಿದೆ. ಗರ್ಭಧರಿಸಿದ ಹಸು, ಎಮ್ಮೆಗಳಿಗೂ ಸಹ ಲಸಿಕೆ ಕೊಡಿಸಬಹುದು. ಹಿಂದೆ ಎಷ್ಟೇ ಬಾರಿ ಲಸಿಕೆ ಹಾಕಿಸಿದ್ದರೂ ಸಹ ಪ್ರತಿ 6 ತಿಂಗಳಿಗೊಮ್ಮೆ ಕೈಗೊಳ್ಳುವ ಸಾಮೂಹಿಕ ಲಸಿಕಾ ಕಾರ್ಯಕ್ರಮದಲ್ಲಿ ತಪ್ಪದೇ ಎಲ್ಲಾ ಜಾನುವಾರುಗಳಿಗೆ ಲಸಿಕೆ ಹಾಕಿಸುವ ಮೂಲಕ ಕಾಲುಬಾಯಿ ರೋಗ ಮುಕ್ತಗೊಳಿಸಲು ಸಾಧ್ಯವಿದೆ.

ಚರ್ಮಗಂಟಿಗೂ ಲಸಿಕೆ: ಅಭಿಯಾನ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ (ಆಡಳಿತ) ಡಾ.ನಾಗರಾಜು, ಜಿಲ್ಲೆಯಲ್ಲಿ ಕಳೆದ ತಿಂಗಳು ಎಲ್ಲಾ ಜಾನುವಾರುಗಳಿಗೆ ಜಂತುಹುಳು ನಾಶಕ ಔಷಧಿ ಕುಡಿಸಲಾಗಿತ್ತು. ಆ ಮೂಲಕ ಜಾನುವಾರುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚು ಉತ್ಪತ್ತಿಯಾಗಲು ಕ್ರಮ ವಹಿಸಿದ್ದೆವು. ಈಗ ಕಾಲುಬಾಯಿ ರೋಗದ ಲಸಿಕೆ ಹಾಕಲಾಗುತ್ತಿದೆ. ಕಾಲುಬಾಯಿ ಜ್ವರದ ಲಸಿಕೆ ಜೊತೆಯಲ್ಲಿಯೇ ಚರ್ಮಗಂಟು ರೋಗದ ಲಸಿಕೆ ಸಹ ಹಾಕಲಾಗುತ್ತಿದೆ. ಜಿಲ್ಲೆಯಲ್ಲಿ ಮಾತ್ರವಲ್ಲದೆ, ರಾಜ್ಯದಲ್ಲಿಯೂ ಈ ಎರಡು ಲಸಿಕೆ ಒಟ್ಟೊಟ್ಟಿಗೆ ಹಾಕಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಏ.26ರಂದು ಪಿರಿಯಾಪಟ್ಟಣದಲ್ಲಿ ರಾಜ್ಯ ಮಟ್ಟದ ಈ ಅಭಿಯಾನಕ್ಕೆ ಚಾಲನೆ ನೀಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಸಹ ಹಾಜರಿದ್ದರು. ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ಅಭಿಯಾನದ ಪೋಸ್ಟರ್ ಅಂಟಿಸಿ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಲಸಿಕೆ ನೀಡಲು ಹೋದ ದಿನದಂದು ಕರು ಹಾಕಿರುವ ಜಾನುವಾರು, ಕಾಯಿಲೆಗೆ ತುತ್ತಾಗಿರುವ ಜಾನುವಾರು ಹಾಗೂ ಮೂರು ತಿಂಗಳ ಒಳಗಿನ ಕರುಗಳಿಗೆ ಅಂದು ಲಸಿಕೆ ಹಾಕುವುದಿಲ್ಲ. ಲಸಿಕೆ ಬಾಕಿ ಉಳಿಸಿ ಆನ್‌ಲೈನ್‌ನಲ್ಲಿ ಈ ಮಾಹಿತಿ ದಾಖಲಿಸಿಕೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ ಅವುಗಳಿಗೆ ಲಸಿಕೆ ನೀಡಲಾಗುತ್ತದೆ. ಈ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಕರ್ನಾಟಕ ಮಾತ್ರ 7ನೇ ಸುತ್ತಿನ ಅಭಿಯಾನ ನಡೆಸುತ್ತಿದೆ. ಇತರ ಯಾವುದೇ ರಾಜ್ಯಗಳೂ 7ನೇ ಸುತ್ತಿಗೆ ತಲುಪಿಲ್ಲ ಎಂದು ಹೇಳಿದರು.

ಕೋಲ್ಡ್ ಚೈನ್ ವ್ಯವಸ್ಥೆ: ಮೈಸೂರು ನಗರದಲ್ಲಿ 11 ಸಾವಿರ ರಾಸುಗಳು (ದನ ಮತ್ತು ಎಮ್ಮೆ) ಇವೆ. ಲಸಿಕೆ ದಾಸ್ತಾನು ಮತ್ತು ಸಾಗಾಣೆಯಲ್ಲಿ ಕೋಲ್ಡ್ ಚೈನ್ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಶೀತಲೀಕರಣ ವ್ಯವಸ್ಥೆ ಒಂದೊಂದು ತಾಲೂಕಿನಲ್ಲಿ 10ರಿಂದ 15 ಕಡೆಗಳಲ್ಲಿ ಇದ್ದು, ಇಲ್ಲಿ ಲಸಿಕೆ ದಾಸ್ತಾನು ಮಾಡಲಾಗುತ್ತದೆ. ಲಸಿಕೆ ಸಾಗಾಣೆಗೆ ರೆಫ್ರಿಜಿರೇಟರ್ ವಾಹನದ ವ್ಯವಸ್ಥೆ ಇದ್ದು, ಲಸಿಕೆಯು ರಾಸು ದೇಹದೊಳಗೆ ಸೇರುವವರೆಗೂ 4 ಡಿಗ್ರಿ ಉಷ್ಣತೆಯಲ್ಲೇ ಇರಬೇಕು. ಆಗ ಮಾತ್ರ ಲಸಿಕೆ ರೋಗ ನಿರೋಧಕ ಶಕ್ತಿ ಉತ್ಪತ್ತಿ ಮಾಡಲು ಸಾಧ್ಯ. ಒಂದು ರಾಸುಗೆ ಬಳಸಿದ ಸೂಜಿಯನ್ನು ಮತ್ತೊಂದಕ್ಕೆ ಉಪಯೋಗಿಸುವುದಿಲ್ಲ. ಎಲ್ಲದಕ್ಕೂ ಪ್ರತ್ಯೇಕ ಸೂಜಿಯನ್ನೇ ಬಳಸಲಾಗುತ್ತದೆ. ಬಳಕೆ ಮಾಡಿದ ಸೂಜಿಯನ್ನು ಅತ್ಯಂತ ಜಾಗರೂಕತೆಯಿಂದ ವಾಪಸ್ಸು ತಂದು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಸರ್ಕಾರದಿಂದ ಉಚಿತ ಲಸಿಕೆ ವ್ಯವಸ್ಥೆ



ಸರ್ಕಾರ ಮನೆ ಬಾಗಿಲಿಗೆ ಬಂದು ಉಚಿತವಾಗಿ ಲಸಿಕೆ ಹಾಕಲು ವ್ಯವಸ್ಥೆ ಮಾಡಿದೆ. ಇದನ್ನು ಸದುಪಯೋಗಪಡಿಸಿಕೊಂಡು ರೈತರು, ಹೈನುಗಾರರು ತಮ್ಮ ಜಾನುವಾರುಗಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು. ಈ ರೋಗ ಬಂದಲ್ಲಿ ದನ, ಎಮ್ಮೆಗಳು ಗರ್ಭ ಕಟ್ಟುವುದಿಲ್ಲ. ಹಾಲಿನ ಉತ್ಪಾದನೆ ಸಹ ಕಡಿಮೆಯಾಗಲಿದೆ. ಇದರಿಂದ ಆರ್ಥಿಕವಾಗಿ ನಷ್ಟಕ್ಕೆ ತುತ್ತಾಗಬೇಕಾಗುತ್ತದೆ. ರಾಸುಗಳ ಕುತ್ತಿಗೆಗೆ ಲಸಿಕೆ ಹಾಕಲಾಗುತ್ತದೆ. ಶೇ.90ರಷ್ಟು ದನ ಮತ್ತು ಎಮ್ಮೆಗಳೇ ಇರುತ್ತವೆ (ಫೀಮೇಲ್). ಎತ್ತು, ಕೋಣ ಮತ್ತು ಹೋರಿಗಳು ಕಡಿಮೆ ಪ್ರಮಾಣದಲ್ಲಿದ್ದು, ಈ ಎಲ್ಲವಕ್ಕೂ ಲಸಿಕೆ ಹಾಕಲಾಗುತ್ತಿದೆ. ಮಿಶ್ರತಳಿ ರಾಸುಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

-ಡಾ.ನಾಗರಾಜು, ಉಪ ನಿರ್ದೇಶಕ (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು.



ಕಾಲುಬಾಯಿ ರೋಗ ಲಕ್ಷಣ

ಕಾಲುಬಾಯಿ ಜ್ವರ (ಕಾಲುಬಾಯಿ ರೋಗ) ಪೀಡಿತ ರಾಸುಗಳಲ್ಲಿ ಮೊದಲಿಗೆ ಜ್ವರ ಕಾಣಿಸಿಕೊಳ್ಳುತ್ತದೆ. ನಂತರ ಮೇವು ತಿನ್ನುವುದು ನಿಲ್ಲುತ್ತದೆ. ಹಾಲು ಕಡಿಮೆಯಾಗಿ ನಂತರ ಕಾಲು ಕುಂಟುವಂತಾಗುತ್ತದೆ. ಬಾಯಿಯಲ್ಲಿ ಚಿಕ್ಕ ಚಿಕ್ಕ ನೀರ್ಗುಳ್ಳೆಯಾಗಿ ಕ್ರಮೇಣ ಈ ಗುಳ್ಳೆಗಳು ಒಡೆದು ಜೊಲ್ಲು ಸುರಿಸುವಂತಾಗುತ್ತದೆ. ಕೆಚ್ಚಲಿನ ತೊಟ್ಟಿನ ಮೇಲೆ ಹುಣ್ಣುಗಳಾಗುತ್ತವೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದಿ ಭೂತ್‌ನಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ

ಮೈಸೂರು, ಮೇ 8– ಮೇ 10 ರಿಂದ ಮೇ 24 ರವರೆಗೆ 2024 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು ನಡೆಯಲಿದ್ದು, ಸದರಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಸೆಕ್ಷನ್ 163 ರೀತ್ಯಾ ಪ್ರದೇಶದ ಸುತ್ತಲೂ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ.

ಪರೀಕ್ಷಾ ಕೇಂದ್ರಗಳು: ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ಜೆಎಲ್‌ಬಿ ರಸ್ತೆ ಸರ್ಕಾರಿ ಆದರ್ಶ ವಿದ್ಯಾಲಯ, ಜಾಕಿ ಕ್ವಾರ್ಟರ್ಸ್. ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳು ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಎಲ್ಲಾ ಕಾಪಿಯರ್ (ಜೆರಾಕ್ಸ್) ಅಂಗಡಿ, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 11, 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ



ಮೈಸೂರು, ಮೇ 8– ಮೈಸೂರಿನ ಬಿಲ್ಲವ ಸಂಘದ ವತಿಯಿಂದ ಅರುಣ್ ಪೂಜಾರಿ, ಸುಧಾಕರ್ ಪೂಜಾರಿ ಹಾಗೂ ಸಂಗಡಿಗರ ಸಹಯೋಗದಲ್ಲಿ ರೂಪಾನಗರದ ದೀಪಾ ಶಾಲೆ ಎದುರಿನ ಬಯಲಿನಲ್ಲಿ ಮೇ 11ರಂದು ಸಂಜೆ 5ರಿಂದ ಮಧ್ಯರಾತ್ರಿ 12 ಗಂಟೆವರೆಗೆ 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಬಯಲಾಟ ಹಮ್ಮಿಕೊಳ್ಳಲಾಗಿದೆ. ಅಂದು ಮಳೆಯಾಗುವ ಸಾಧ್ಯತೆ ಕಂಡುಬಂದರೆ ಸುವರ್ಣನಗರದ ಭವ್ಯ ರಂಗಮಂಟಪದಲ್ಲಿ ಯಕ್ಷಗಾನ ನಡೆಯಲಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಮಾನಸಗಂಗೋತ್ರಿಯಲ್ಲಿ ಬೋರ್‌ವೆಲ್ ರೀಚಾರ್ಜಿಂಗ್ ಯೂನಿಟ್ ಉದ್ಘಾಟನೆ



ಮೈಸೂರಿನ ಮಾನಸ ಗಂಗೋತ್ರಿಯ ಭೂ ವಿಜ್ಞಾನ ಅಧ್ಯಯನ ವಿಭಾಗದ ಬಳಿ ಸ್ಥಾಪಿಸಿರುವ ಕೊಳವೆ ಬಾವಿಗಳ ನೀರಿನ ಮಟ್ಟ ಹೆಚ್ಚಿಸುವ ಘಟಕ (Borewell Recharging Unit)ವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ಮೇ 8(ಆರ್‌ಕೆ)– ಮೈಸೂರಿನ ಮಾನಸಗಂಗೋತ್ರಿಯ ಭೂ ವಿಜ್ಞಾನ ಅಧ್ಯಯನ ವಿಭಾಗದ ಬಳಿ ಸ್ಥಾಪಿಸಿರುವ ಕೊಳವೆ ಬಾವಿಗಳ ನೀರಿನ ಮಟ್ಟ ಹೆಚ್ಚಿಸುವ ಘಟಕ (Borewell Recharging Unit)ವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕ ನಾಥ್ ಇಂದು ಉದ್ಘಾಟಿಸಿದರು.


ಮಾನಸಗಂಗೋತ್ರಿಯಲ್ಲಿ ಅಂತರ್ಜಲದ ಮಟ್ಟ ಹೆಚ್ಚಿಸಲು ಮಳೆ ನೀರು ಕೊಯ್ಲು ಅಳವಡಿಸುವ ಯೋಜನೆಯನ್ನು ಕೇಂದ್ರ ಸರ್ಕಾರದ ಗ್ರೌಂಡ್ ವಾಟರ್ ಬೋರ್ಡ್ ಕೈಗೆತ್ತಿಕೊಂಡಿದ್ದು, 16 ಲಕ್ಷ ರೂ. ವೆಚ್ಚದಲ್ಲಿ ಬೋರ್‌ವೆಲ್ ರೀಚಾರ್ಜ್ ಘಟಕವನ್ನು ಪ್ರಾಯೋಜಿಸಿದೆ.

ಕಟ್ಟಡಗಳ ಚಾವಣಿಯಿಂದ ಸುರಿಯುವ ಮಳೆ ನೀರನ್ನು ಸಂಗ್ರಹಿಸಿ ಅಂತರ್ಜಲ ವೃದ್ಧಿಗೊಳಿಸುವ ಮೂಲಕ ಕೊಳವೆ ಬಾವಿಗಳನ್ನು ಪುನರುಜ್ಜೀವನಗೊಳಿಸುವುದು ಯೋಜನೆಯ ಉದ್ದೇಶವಾಗಿದೆ. ಇದು ಯಶಸ್ವಿಯಾದಲ್ಲಿ ಮಾನಸಗಂಗೋತ್ರಿ ಆವರಣದಲ್ಲೇ ಮತ್ತೊಂದು ಬೋರ್‌ವೆಲ್ ರೀಚಾರ್ಜಿಂಗ್ ಯೂನಿಟ್ ನಿರ್ಮಿಸಿಕೊಡುವುದಾಗಿ ಕೇಂದ್ರದ ಗ್ರೌಂಡ್ ವಾಟರ್ ಬೋರ್ಡ್ ಅಧಿಕಾರಿಗಳು ತಿಳಿಸಿದ್ದಾರೆ.

ಭೂ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಡಿ.ನಾಗರಾಜು, ಪ್ರೊ. ಬಿ.ವಿ.ಸುರೇಶ್ ಕುಮಾರ್, ವಿದ್ಯಾರ್ಥಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ಹಿಂದೆ ರಾಜಕಾರಣಿಗಳಿಗೆ ಜನ ಹಣ ನೀಡುತ್ತಿದ್ದರು! ಈಗ ಸೂಟ್‌ಕೇಸ್ ತರದಿದ್ದರೆ ಊರಿಗೆ ಬರಬೇಡ ಅಂತಾರೆ!!

●ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ವಿಷಾದ ●'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ, ಜವಾಬ್ದಾರಿ ಯುವಶಕ್ತಿಯ ಕೈಯ್ಯಲ್ಲಿ' ಮುಕ್ತ ಸಂವಾದ



ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ, ಜವಾಬ್ದಾರಿ, ಯುವಶಕ್ತಿ ಕೈಯಲ್ಲಿ' ಮುಕ್ತ ಸಂವಾದ ಕಾರ್ಯಕ್ರಮವನ್ನು ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

ಮೈಸೂರು, ಮೇ 8(ಎಂಟಿವೈ)– ಪ್ರಸ್ತುತ ಸಂದರ್ಭದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕು ಅಂಗಗಳು ದಾರಿ ತಪ್ಪಿರುವುದರಿಂದ ಯುವಜನರು ಲಂಚ, ದೋಷ ಮುಕ್ತ ಪ್ರಜಾಪ್ರಭುತ್ವ ನಿರ್ಮಾಣಕ್ಕಾಗಿ ಹೋರಾಟ ಮಾಡಬೇಕು ಎಂದು ಹಿರಿಯ ನಟರೂ ಆದ ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ಗುರುವಾರ ದಲಿತ ವಿದ್ಯಾರ್ಥಿ ಒಕ್ಕೂಟ, ಹೆಚ್‌ಎಂಸಿಬಿ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ, ಜವಾಬ್ದಾರಿ, ಯುವಶಕ್ತಿ ಕೈಯಲ್ಲಿ' ಮುಕ್ತ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಅತಂತ್ರ ಸ್ಥಿತಿಯಲ್ಲಿದ್ದೇವೆ. ಗಾಂಧಿ ರಾಮರಾಜ್ಯ ಅನುಷ್ಠಾನಕ್ಕೆ ಬರಲಿಲ್ಲ. ಡಾ.ಅಂಬೇಡ್ಕರ್ ಕೊಡುಗೆ ನೀಡಿದ ಬಲಿಷ್ಠ ಸಂವಿಧಾನವಿದ್ದರೂ, ನಾವು ಎಲ್ಲಿ ದಾರಿ ತಪ್ಪಿದ್ದೇವೆ ಎಂದು ಅವಲೋಕನ ಮಾಡಿಕೊಳ್ಳಬೇಕು.

ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗವೂ ದಾರಿ ತಪ್ಪಿದೆ. ಈಗ ಪತ್ರಿಕಾರಂಗವೂ ದಾರಿ ತಪ್ಪಿದೆ. ನ್ಯಾಯಾಧೀಶರ ಮನೆಯಲ್ಲಿ ಕಂತೆ ಕಂತೆ ಹಣ ಸಿಗುತ್ತದೆ. ಜೈಲಿನಲ್ಲಿದ್ದು ಬಂದವರನ್ನು ಜನರು ಶಾಸಕರಾಗಿ ಆಯ್ಕೆ ಮಾಡುತ್ತಾರೆ. ಹಿಂದೆ ಜನರು ರಾಜಕಾರಣಿಗೆ ಚುನಾವಣೆ ವೇಳೆ ಖರ್ಚಿಗೆ ಹಣ ಕೊಡುತ್ತಿದ್ದರು. ಇವತ್ತು ಬ್ರೀಫ್‌ಕೇಸ್ ತರದಿದ್ದರೆ ಊರಿನ ಒಳಗಡೆ ಸೇರಿಸದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಜಾತಿ ಗಣತಿಯನ್ನು ಕೆಲವರು ವಿರೋಧಿಸುತ್ತಿದ್ದಾರೆ. 1931ರ ಬಳಿಕ ದೇಶದಲ್ಲಿ ಜಾತಿ ಗಣತಿಯೇ ನಡೆದಿಲ್ಲ. ನಿಖರವಾದ ಅಂಕಿ ಅಂಶ ಇಲ್ಲದೇ ಯೋಜನೆ ರೂಪಿಸಲು ಸಾಧ್ಯವಿಲ್ಲ. ಮೀಸಲಾತಿ ಹಂಚಿಕೆಯೂ ಕಷ್ಟವಾಗುತ್ತದೆ. ಇಂದಿಗೂ ಎಲ್ಲಾ ಜಾತಿಗೆ ಸೇರಿದ ಶಾಸಕ, ಸಂಸದರಿಲ್ಲ. ಶೇ.20ರಷ್ಟು ಜಾತಿಯ ಜನರು ಮಾತ್ರ ಶಾಸಕರು, ಸಂಸದರಾಗಿದ್ದಾರೆ. ಹಾಗಾದರೆ ಇದನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನಬೇಕೆ ಎಂದು ಪ್ರಶ್ನಿಸಿದರು.

ಪರಿವಾರ ರಾಜಕಾರಣದಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಎಂದು ಮೋದಿಯವರು ಹೇಳಿದ್ದರು. ಆದರೆ, ಕರ್ನಾಟಕದಲ್ಲಿ ಮೂರು ಪಕ್ಷಗಳಲ್ಲೂ ಪರಿವಾರ ರಾಜಕಾರಣ ಇದೆ. ಪರಿವಾರ ನಿಯಂತ್ರಿಸಲು ಮೋದಿಯವರು ಅಸಹಾಯಕರಾಗಿದ್ದಾರೆ. ಹಣ, ಜಾತಿ ಮೂಲಕ ರಾಜಕಾರಣ ಮಾಡಲಾಗುತ್ತಿದೆ. ಇದು ಅಪಾಯಕಾರಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಕೃಷ್ಣ ಹೊಂಬಾಳ್ ವಹಿಸಿದ್ದರು. ಬಾರುಕೋಲು ಪತ್ರಿಕೆ ಸಂಪಾದಕ ಬಿ.ಆರ್.ರಂಗಸ್ವಾಮಿ ಮುಖ್ಯಭಾಷಣ ಮಾಡಿದರು. ಚಿಂತಕ ಶಿವಸುಂದರ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ನಟರಾಜ್ ಶಿವಣ್ಣ, ವಿಜಯ ಐಎಎಸ್ ಅಕಾಡೆಮಿ ಮುಖ್ಯಸ್ಥ ಅನಂತರಾಜ್ ಸೂರ್ಯ, ಆಮ್ ಆದ್ಮಿ ಪಕ್ಷದ ಮಾಲವಿಕಾ ಗುಬ್ಬಿವಾಣಿ, ದಲಿತ ವಿದ್ಯಾರ್ಥಿ ಒಕ್ಕೂಟದ ರವಿ, ರಂಗಯ್ಯ, ಮಹೇಶ್‌ಕುಮಾರ್, ನವೀನ್ ಇನ್ನಿತರರು ಉಪಸ್ಥಿತರಿದ್ದರು.

'ಆಪರೇಷನ್ ಸಿಂಧೂರ' ಪ್ರಧಾನಿ ಮೋದಿ ದಿಟ್ಟ ನಿಲುವು

ಮೈಸೂರು, ಮೇ 8(ಎಂಟಿವೈ)– ಪಾಕಿಸ್ತಾನದ ಉಗ್ರರ ಅಡಗುತಾಣಗಳ ಮೇಲೆ ಭಾರತೀಯ ಸೇನೆ ನಡೆಸಿದ ದಾಳಿಯು ಪ್ರಧಾನಿ ನರೇಂದ್ರ ಮೋದಿ ಅವರ ದಿಟ್ಟ ನಿಲುವು ಎಂದು ಮುಖ್ಯಮಂತ್ರಿ ಚಂದ್ರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮೋದಿಯವರು ಸಂದರ್ಭೋಚಿತ ನಿಲುವು ಕೈಗೊಂಡಿದ್ದಾರೆ. ನಮ್ಮ ಸೈನಿಕರು ಜನಸಾಮಾನ್ಯರ ಮೇಲೆ ಬಾಂಬ್ ಹಾಕಿಲ್ಲ. ದೇಶಕ್ಕೆ, ಧರ್ಮಕ್ಕೆ ಅನಾಹುತ ಒದಗಿ ಬಂದಾಗ ಗಟ್ಟಿ ನಿರ್ಧಾರ ಮಾಡಬೇಕಾಗುತ್ತದೆ. ಯುದ್ಧ ಮುಖ್ಯ ಅಲ್ಲ. ಅತಿರೇಕಕ್ಕೆ ಹೋದಾಗ ಕಾನೂನು ಕೈಗೆತ್ತಿಕೊಂಡವರಿಗೆ ಶಿಕ್ಷೆ ಕೊಡಬೇಕಾಗುತ್ತದೆ ಎಂದು ಹೇಳಿದರು.

ಸಚಿವ ರಾಜಣ್ಣರ ಜನ್ಮದಿನ ಕಾರ್ಯಕ್ರಮ

ನಾಯಕ ಸಮುದಾಯದವರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿದರು.

ಮೈಸೂರು, ಮೇ 8(ಎಂಟಿವೈ)– ತುಮಕೂರಿನಲ್ಲಿ ಮೇ 13ರಂದು ನಡೆಯಲಿರುವ ಸಹಕಾರ ಸಚಿವ ಕೆ.ಎನ್. ರಾಜಣ್ಣನವರ 75ನೇ ಜನ್ಮದಿನೋತ್ಸವ ಮತ್ತು ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನಾಯಕ ಸಮಾಜದ ಬಂಧುಗಳು ಭಾಗವಹಿಸಬೇಕೆಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸಚಿವ ಸಂಪುಟದಲ್ಲಿ ಪ್ರಬಲ ಸಚಿವರಾಗಿರುವ ಕೆ.ಎನ್.ರಾಜಣ್ಣ ಅವರ 75ನೇ ವರ್ಷದ ಜನ್ಮದಿನ ಕಾರ್ಯಕ್ರಮವನ್ನು ಪಕ್ಷಾತೀತವಾಗಿ ಆಚರಿಸಲಾಗುತ್ತಿದ್ದು, ಜನಾಂಗವನ್ನು ಸರಿದಾರಿಯತ್ತ ಮುನ್ನಡೆಸುತ್ತಿರುವ ಸಚಿವ ರಾಜಣ್ಣ ಅವರ ಜನ್ಮದಿನೋತ್ಸವ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಮೈಸೂರು ಭಾಗದಿಂದ 10 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಒಗ್ಗಟ್ಟು ಪ್ರದರ್ಶನ ಮಾಡಬೇಕು ಎಂದು ಕೋರಿದರು.

ಈ ಕಾರ್ಯಕ್ರಮ ಸಮುದಾಯದ ಶಕ್ತಿಪ್ರದರ್ಶನದ ಕಾರ್ಯಕ್ರಮವೂ ಆಗಬೇಕಾಗಿದೆ. ಪ್ರಸ್ತುತ ರಾಜ್ಯದಲ್ಲಿ ನಾಯಕ ಸಮುದಾಯವು ಒಂದು ಪ್ರಬಲ ಸಮುದಾಯವಾಗಿದ್ದರೂ ಯಾವ ರಾಜಕೀಯ ಪಕ್ಷಗಳೂ ಸಮುದಾಯಕ್ಕೆ ಸೂಕ್ತ ಸ್ಥಾನಮಾನವನ್ನು ಕಲ್ಪಿಸದೆ ನಿರ್ಲಕ್ಷ್ಯ ಧೋರಣೆಯನ್ನು ಅನುಸರಿಸಿಕೊಂಡು ಬರುತ್ತಿವೆ. ಈ ಕಾರ್ಯಕ್ರಮ ಮುಂದಿನ ದಿನಗಳಲ್ಲಿ ನಾಯಕ ಸಮುದಾಯದ ರಾಜಕೀಯ ಚಿತ್ರಣವನ್ನು ಬದಲಾಯಿಸುವಂತಹ ಕಾರ್ಯಕ್ರಮವಾಗ ಬೇಕಾಗಿದೆ. ಆದ್ದರಿಂದ ನಮ್ಮ ಸಮುದಾಯದವರು ಪಕ್ಷಾತೀತವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಪ್ರಧಾನ ಕಾರ್ಯದರ್ಶಿ ಪ್ರಭಾಕರ್ ಹುಣಸೂರು, ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ಅಧ್ಯಕ್ಷ ಮ. ಶ್ರೀನಿವಾಸನಾಯಕ, ಗೌರವಾಧ್ಯಕ್ಷ ಕೆಂಪನಾಯಕ, ನಗರಾಧ್ಯಕ್ಷ ರಾಜು ಮಾರ್ಕೆಟ್, ಜಿಲ್ಲಾ ಕಾರ್ಯದರ್ಶಿ ಸುರೇಶ್ ಕುಮಾರಬೀಡು, ಟ್ರಸ್ಟಿ ವಿನೋದ್ ನಾಗವಾಲ ಇದ್ದರು.

ಕರ್ನಾಟಕ ಮುಕ್ತ ವಿವಿಯ ನೂತನ ಕುಲಸಚಿವರಾಗಿ ಪ್ರೊ.ನವೀನ್ ಕುಮಾರ್ ಅಧಿಕಾರ ಸ್ವೀಕಾರ



ಕರ್ನಾಟಕ ಮುಕ್ತ ವಿವಿಯ ನೂತನ ಕುಲಸಚಿವರಾಗಿ ನೇಮಕಗೊಂಡ ಪ್ರೊ.ನವೀನ್ ಕುಮಾರ್(ಎಡಭಾಗ) ಅವರನ್ನು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹೂಗುಚ್ಛ ನೀಡಿ ಸ್ವಾಗತಿಸಿದರು

ಮೈಸೂರು, ಮೇ 8(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕೆಎಸ್‌ಒಯು)ದ ನೂತನ ಕುಲಸಚಿವ(ಆಡಳಿತ)ರಾಗಿ ಪ್ರೊ.ಎಸ್.ಕೆ.ನವೀನ್ ಕುಮಾರ್ ಗುರುವಾರ ಅಧಿಕಾರ ವಹಿಸಿಕೊಂಡರು.

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹೂಗುಚ್ಛ ನೀಡಿ ಸ್ವಾಗತಿಸಿದರು. ಮೂಲತಃ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯವರಾದ ಪ್ರೊ.ಎಸ್.ಕೆ.ನವೀನ್‌ಕುಮಾರ್, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂಎಸ್‌ಸಿ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿ, ಮಂಗಳೂರು ವಿವಿ ಹಿರಿಯ ಪ್ರಾಧ್ಯಾಪಕರಾಗಿ, ಕುವೆಂಪು ವಿವಿಯಲ್ಲಿ ಪರೀಕ್ಷಾಂಗ ಕುಲಸಚಿವ ಹಾಗೂ ಆಡಳಿತ ವಿಭಾಗದ ಹಂಗಾಮಿ ಕುಲಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗೆಯೇ ಹಣಕಾಸು ಮತ್ತು ದೂರಶಿಕ್ಷಣ ಕೇಂದ್ರದ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ.

ನ್ಯಾಯಯುತವಾಗಿ ಕೆಲಸ ಮಾಡುವೆ: ತುಂಬಾ ಜವಾಬ್ದಾರಿ ಸ್ಥಾನ ಇದಾಗಿದೆ. ಮುಕ್ತ ವಿವಿ ನ್ಯೂನತೆಗಳ ಬಗ್ಗೆ ತಿಳಿದಿದ್ದು, ನ್ಯಾಯಯುತವಾಗಿ ಕೆಲಸ ಮಾಡಬೇಕು ಎಂದುಕೊಂಡಿದ್ದೇನೆ. ಕುವೆಂಪು ವಿವಿಯಲ್ಲೂ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದೆ. ಇಲ್ಲಿಗೆ ಯಾವುದೇ ಲಾಬಿ ಮಾಡಲು, ಹಣ ಮಾಡಲು ಬಂದಿಲ್ಲ. ನನ್ನ ಉದ್ದೇಶ ಇರುವುದೇ ಒಳ್ಳೆಯ ಕೆಲಸ ಮತ್ತು ಪ್ರಗತಿ ಎಂದು ಕೆಎಸ್‌ಒಯು ನೂತನ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.